ಬೆಂಗಳೂರು
ಶುಕ್ರವಾರ, 19 ಜೂನ್ 2026
ಸಂಪುಟ 33, ಸಂಚಿಕೆ 229, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಇಪಿಎಫ್ ಬಡ್ಡಿ ದರ ಶೇ.8.25ಕ್ಕೆ ಒಪ್ಪಿಗೆ | ೧೦
ವಿಯೆಟ್ನಾಂ ಜತೆ ಬ್ರಹ್ಮೋಸ್ ಒಪ್ಪಂದ | ೧೦
ಶಿರಡಿ ಸಾಯಿಗೆ ₹660 ಕೋಟಿ ದೇಣಿಗೆ | ೧೦

## ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಆಶ್ಲೇಷ

### ದಿನದ ಮಾತು

ತನ್ನಿಂದ ಜಯಿಸಲು ಸಾಧ್ಯ ಎಂದು ನಂಬುವವರಿಂದಲೇ ಜಯವನ್ನು ಪಡೆಯಲು ಸಾಧ್ಯ.
▲ ನಾಣ್ನುಡಿ

### ಎಲ್ಲಾ ಪಕ್ಷಗಳು ರೆಸಾರ್ಟ್ ಸಂಸ್ಕೃತಿಗೆ ಕೊನೆ ಹಾಡಲಿ

ಲೇಖನ
• ಸುರೇಶ್ ಕುಮಾರ್
• ಪುಟ ೩

## ಕಿರುಸುದ್ದಿ

### ಜಾರ್ಖಂಡ್, ಮಿಜೋರಾಂ: ಎನ್‌ಡಿಎ ಅಭ್ಯರ್ಥಿ ಗೆಲುವು

• **ರಾಂಚಿ:** ಎನ್‌ಡಿಎ ಬೆಂಬಲಿತ ಜಾರ್ಖಂಡ್‌ನ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥ್ವಾನಿ ಹಾಗೂ ಮಿಜೋರಾಂನ ಜೆಪಿಎಂ ಅಭ್ಯರ್ಥಿ ಕೆ.ಲಾಲ್ಟ್ ಲುವಾಂಗ್ ಕಿಮಾ ಗುರುವಾರ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಜಾರ್ಖಂಡ್‌ನಲ್ಲಿ ಕಾಂಗ್ರೆಸ್ ಮಿತ್ರಪಕ್ಷಗಳ ಅಡ್ಡಮತದಾನ ಎನ್‌ಡಿಎ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥ್ವಾನಿ ಗೆಲುವಿಗೆ ಸಹಕಾರಿಯಾಗಿದೆ.
• ಪುಟ ೧೦

### ಪ್ಯಾರಿಸ್‌ನಲ್ಲಿ ಪ್ರಧಾನಿ ಮೋದಿಗೆ ಭವ್ಯ ಸ್ವಾಗತ
• ಪುಟ ೧೦

### ಒಪ್ಪಂದ ತ್ವರಿತಗೊಳಿಸಲು ಮೋದಿ, ಟ್ರಂಪ್ ಕರೆ
• ಪುಟ ೧೦

### ಪಿಎಂ ಕಿಸಾನ್ ಕಂತು ವರ್ಗಾವಣೆ ನಾಳೆ
• ಪುಟ ೧೦

### ವದಂತಿಗೆ ಕಿವಿಗೊಡದಿರಿ: ನೀಟ್ ಅಭ್ಯರ್ಥಿಗಳಿಗೆ ಸಲಹೆ
• ಪುಟ ೧೦

### ಮೇಕೆದಾಟು, ತ.ನಾಡು ಜತೆ ಚರ್ಚೆಗೆ ಸಿದ್ಧ: ಸಿಎಂ
• ಪುಟ ೩

### ತೇಜೋವಧೆ ಸಲ್ಲದು: ಮಟ್ಟಣ್ಣನವರ್‌ಗೆ ಹೈ ತಾಕೀತು
• ಪುಟ ೩



### ಭಾರತದ ಚೊಚ್ಚಲ 8 ಪಥದ ರಸ್ತೆ ಸುರಂಗ
• ಪುಟ ೧೦
ಸುದ್ದಿ ಸಮಗ್ರ

ಪರಿಷತ್ ಫಲಿತಾಂಶ: ಕೈ 5ನೇ ಸ್ಥಾನ ಗೆಲುವಿಗೆ ಅಡ್ಡಮತ ನೆರವು

# ಕಾಂಗ್ರೆಸ್ 5, ಬಿಜೆಪಿ 2




ಮುಖ್ಯಮಂತ್ರಿ ಡಿಕೆಶಿ ಜತೆ ಪರಿಷತ್ ಚುನಾವಣೆ ಗೆದ್ದ ಕೈ ಅಭ್ಯರ್ಥಿಗಳು.



ಬಿಜೆಪಿ ಅಭ್ಯರ್ಥಿಗಳಿಗೆ ಪಕ್ಷದ ಮುಖಂಡರ ಅಭಿನಂದನೆ.

• **ಬೆಂಗಳೂರು:** ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ನಡೆದ ದ್ವೈವಾರ್ಷಿಕ ಚುನಾವಣೆಯಲ್ಲಿ ನಿರೀಕ್ಷೆಯಂತೆ ಕಾಂಗ್ರೆಸ್ 5 ಸ್ಥಾನಗಳಲ್ಲಿ ಜಯಗಳಿಸಿದ್ದು, ಬಿಜೆಪಿ ಎರಡು ಸ್ಥಾನಗಳಲ್ಲಿ ಜಯಭೇರಿ ಭಾರಿಸಿದೆ. ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಸೋಲು ಅನುಭವಿಸಿದ್ದಾರೆ. ಕಾಂಗ್ರೆಸ್‌ನ 5ನೇ ಅಭ್ಯರ್ಥಿ ಗೆಲುವಿಗೆ ಅಡ್ಡಮತದಾನ ನೆರವಾಗಿದೆ.



ಸಂಖ್ಯಾಬಲ ಪ್ರಕಾರ ಕಾಂಗ್ರೆಸ್ ನಾಲ್ಕು, ಬಿಜೆಪಿ ಎರಡು ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಿತ್ತು, ಕಾಂಗ್ರೆಸ್ ಐದನೆ ಅಭ್ಯರ್ಥಿಯನ್ನು ಹಾಗೂ ಎನ್‌ಡಿಎಯಿಂದ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕಿಳಿಸುವುದರಿಂದ ಚುನಾವಣೆ ನಡೆದಿತ್ತು. ಅಚ್ಚರಿ ಎಂಬಂತೆ ಕಾಂಗ್ರೆಸ್‌ನಿಂದ ಐದನೇ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ವಿನಯ್ ಕಾರ್ತಿಕ್ ನಿರೀಕ್ಷೆಗಿಂತ ಹೆಚ್ಚು ಒಟ್ಟು 32 ಮತಗಳನ್ನು ಪಡೆದಿದ್ದಾರೆ. ಜೆಡಿಎಸ್ ಅಭ್ಯರ್ಥಿ ಕೇವಲ 14 ಮತಗಳನ್ನು ಪಡೆಯುವ ಮೂಲಕ ಸೋಲು ಅನುಭವಿಸಿದ್ದಾರೆ.

**ಯಾರ್‍ಯಾರಿಗೆ ಗೆಲುವು:** ಕಾಂಗ್ರೆಸ್‌ನಿಂದ ಬಿ.ಕೆ. ಹರಿಪ್ರಸಾದ್, ತಿಪ್ಪಣ್ಣಪ್ಪ ಕಮಕನೂರ, ಪಿ.ವಿ. ಮೋಹನ್, ವಿನಯ್ ಕಾರ್ತಿಕ್, ಶಿವಣ್ಣ ಮಳವಳ್ಳಿ ಸೇರಿ 5 ಜನ ಗೆಲುವು ಸಾಧಿಸಿ ಪರಿಷತ್ ಪ್ರವೇಶಿಸಿದ್ದಾರೆ. ಬಿಜೆಪಿಯಿಂದ ರಘು ಕೌಟಿಲ್ಯ ಮತ್ತು ಲಿಂಗರಾಜ್ ಪಾಟೀಲ್ ವಿಜಯಶಾಲಿಗಳಾಗಿ ಪರಿಷತ್‌ಗೆ ಆಯ್ಕೆಯಾಗಿದ್ದಾರೆ. ಜೆಡಿಎಸ್‌ನಿಂದ ಗೋವಿಂದರಾಜು ಸೋಲುಂಡಿದ್ದಾರೆ.

**ಬಿಜೆಪಿ-ಜೆಡಿಎಸ್ ಶಾಸಕರಿಂದ ಅಡ್ಡ ಮತದಾನ:** ಜೆಡಿಎಸ್ ಹಾಗೂ ಬಿಜೆಪಿ ಶಾಸಕರು ಅಡ್ಡ ಮತದಾನ ಮಾಡಿದ್ದು, ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ಗೆಲುವಿಗೆ ಕಾರಣವಾಗಿದೆ. ಪುಟ ೨

### ಪಡೆದ ಪ್ರಥಮ ಪ್ರಾಶಸ್ತ್ಯದ ಮತಗಳು

- ವಿನಯ್ ಕಾರ್ತಿಕ್ - 32
- ಬಿ.ಕೆ. ಹರಿಪ್ರಸಾದ್ - 30
- ತಿಪ್ಪಣ್ಣಪ್ಪ ಕಮಕನೂರ - 30
- ಶಿವಣ್ಣ ಮಳವಳ್ಳಿ - 30
- ಪಿ.ವಿ. ಮೋಹನ್ - 29
- ರಘು ಕೌಟಿಲ್ಯ - 29
- ಲಿಂಗರಾಜ್ ಪಾಟೀಲ್ - 27
- ಗೋವಿಂದ ರಾಜು - 14


- ಕಾಂಗ್ರೆಸ್ 136 ಮತಗಳು
- ಬಿಜೆಪಿ 62 ಮತಗಳು
- ಜೆಡಿಎಸ್ 18 ಮತಗಳು
- ಪಕ್ಷೇತರ 2 ಮತಗಳು
- ಸರ್ವೋದಯ ಪಕ್ಷ 1 ಮತ
- ಬಿಜೆಪಿ ಉಚ್ಚಾಟಿತ 3 ಮತಗಳು
- ಒಬ್ಬ ಅಭ್ಯರ್ಥಿ ಗೆಲುವಿಗೆ ಬೇಕಾದ್ದು 28 ಮತಗಳು

ಹೊಸ ಸರ್ಕಾರ ಬಂದ ಬಳಿಕ ನಡೆದ ಚುನಾವಣೆಯಲ್ಲಿ ಶಾಸಕರ ಬೆಂಬಲ ನೋಡಿ ಆಶ್ಚರ್ಯವಾಗುತ್ತಿದೆ. ನಮ್ಮ ಸರ್ಕಾರಕ್ಕೆ ನೀವು ಮುಂದುವರಿಯಿರಿ ಎಂದು ರಾಜ್ಯದ ಜನರ ಅಭಿಪ್ರಾಯದ ಬೆಂಬಲ ಇದಾಗಿದೆ. ನಮಗೆ ಬೇರೆ ಪಕ್ಷದವರೂ ಮತ ನೀಡಿದ್ದಾರೆ.
■ **ಡಿ.ಕೆ. ಶಿವಕುಮಾರ್,** ಮುಖ್ಯಮಂತ್ರಿ

ಅಡ್ಡ ಮತದಾನವಾಗಿದ್ದರ ಬಗ್ಗೆ ಪಕ್ಷ ಪರಿಶೀಲನೆ ಮಾಡಲಿದೆ. ಲಿಂಗರಾಜ ಪಾಟೀಲ್ ಅವರ ಮೂರು ಮತಗಳು ಅಡ್ಡ ಮತದಾನವಾಗಿದೆ. ರಘು ಅವರ 30 ಮತಗಳಲ್ಲಿ ಒಂದು ಮತ ಅಸಿಂಧುವಾಗಿದೆ. ಇದನ್ನು ಯಾರು ಮಾಡಿದ್ದಾರೆ, ಯಾಕೆ ಮಾಡಿದ್ದಾರೆ ಎಂಬುದನ್ನು ಮುಂದೆ ಪರಿಶೀಲನೆ ನಡೆಸಲಾಗುವುದು.
■ **ಬಿ.ವೈ. ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

6 ಸಂಸದರ ಬಂಡಾಯ | ಶಿಂಧೆ ಬಣದತ್ತ ಹೆಜ್ಜೆ

# ಉದ್ಧವ್ ಶಿವಸೇನೆಗೆ ಮತ್ತೊಂದು ಆಘಾತ



• **ಮುಂಬೈ:** ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆಗೆ ಮತ್ತೊಮ್ಮೆ ದೊಡ್ಡ ರಾಜಕೀಯ ಹಿನ್ನಡೆ ಎದುರಾಗಿದೆ. ಪಕ್ಷದ ಆರು ಬಂಡಾಯ ಸಂಸದರು ಬುಧವಾರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಭೇಟಿ ಮಾಡಿ ತಮ್ಮ ನಿಲುವು ಸ್ಪಷ್ಟಪಡಿಸಿದ್ದಾರೆ. ಪಕ್ಷವು ತನ್ನ ಮೂಲ ಸಿದ್ಧಾಂತದಿಂದ ದೂರ ಸರಿದಿದ್ದು, ಭವಿಷ್ಯದಲ್ಲಿ ಕಾಂಗ್ರೆಸ್‌ನೊಂದಿಗೆ ವಿಲೀನಗೊಳ್ಳುವ ಯೋಜನೆ ರೂಪಿಸಲಾಗುತ್ತಿದೆ ಎಂಬ ಗಂಭೀರ ಆರೋಪವನ್ನು ಅವರು ಮಾಡಿದ್ದಾರೆ.

ಮೂಲಗಳ ಪ್ರಕಾರ, ಇದೇ ಕಾರಣದಿಂದ ಅವರು ಉದ್ಧವ್ ಠಾಕ್ರೆ ಬಣವನ್ನು ತೊರೆದು ಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆ ಬಣದೊಂದಿಗೆ ಕೈಜೋಡಿಸಲು ನಿರ್ಧರಿಸಿದ್ದಾರೆ. ಜತೆಗೆ, ಲೋಕಸಭೆಯಲ್ಲಿ ಶಿಂಧೆ ಬಣದ ಸಂಸದರ ಆಸನಗಳ ಸಮೀಪದಲ್ಲೇ ತಮ್ಮ ಆಸನಗಳನ್ನು ಮರುಹಂಚಿಕೆ ಮಾಡಬೇಕೆಂದು ಸ್ಪೀಕರ್‌ಗೆ ಮನವಿ ಮಾಡಿದ್ದಾರೆ.

**ದಿಲ್ಲಿಯಲ್ಲಿ ರಹಸ್ಯ ಸಭೆ:** ಕಳೆದ ಎರಡು ದಿನಗಳಿಂದ ಸಂಪರ್ಕಕ್ಕೆ ಸಿಗದಿದ್ದ ಆರು ಸಂಸದರು ಇದೀಗ ಬಹಿರಂಗವಾಗಿ ತಮ್ಮ ನಿಲುವು ಪ್ರಕಟಿಸಿದ್ದಾರೆ. ನಂದೇಡ್‌ನ ನಾಗೇಶ್ ಅಷ್ಟೀಕರ್, ಭೌಸಾಹೇಬ್ ವಾಘಚೌರೆ, ಸಂಜಯ್ ದಿನಾ ಪಾಟೀಲ್, ಓಂರಾಜೆ ನಿಂಬಾಳ್ಕರ್, ಸಂಜಯ್ ದೇಶಮುಖ್ ಹಾಗೂ ಸಂಜಯ್ ಜಾಧವ್ ಈ ಬಂಡಾಯ ಗುಂಪಿನ ಸದಸ್ಯರಾಗಿದ್ದಾರೆ. ಇವರು ವಿವಿಧ ನಗರಗಳಿಂದ ಖಾಸಗಿ ವಿಮಾನಗಳಲ್ಲಿ ದಿಲ್ಲಿಗೆ ಆಗಮಿಸಿ, ನೋಯ್ಡಾದ ಹೋಟೆಲ್‌ನಲ್ಲಿ ತಂಗಿದ್ದರು. ಬಳಿಕ ಏಕನಾಥ್ ಶಿಂಧೆ ಹಾಗೂ ಅವರ ಪುತ್ರ ಶ್ರೀಕಾಂತ್ ಶಿಂಧೆ ಅವರೊಂದಿಗೆ ಸಭೆ ನಡೆಸಿ ಸ್ಪೀಕರ್‌ರನ್ನು ಭೇಟಿಯಾಗಿದ್ದಾರೆ. ಪುಟ ೨

### ನಾಯಕತ್ವದ ವಿರುದ್ಧ ಅಸಮಾಧಾನ

ಬಂಡಾಯ ಸಂಸದರು ಉದ್ಧವ್ ಠಾಕ್ರೆ ಅವರ ನಾಯಕತ್ವದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತಮ್ಮ ಕ್ಷೇತ್ರಗಳಿಗೆ ಭೇಟಿ ನೀಡಲು ನಾಯಕತ್ವ ಆಸಕ್ತಿ ತೋರಲಿಲ್ಲ, ಚುನಾವಣೆ ಸಂದರ್ಭ ಅಗತ್ಯ ಬೆಂಬಲ ದೊರೆಯಲಿಲ್ಲ, ಉದ್ಧವ್ ಪುತ್ರ ಆದಿತ್ಯ ಠಾಕ್ರೆ ಅವರನ್ನು ಸಂಪರ್ಕಿಸುವುದು ಕಷ್ಟವಾಗಿತ್ತು ಎಂದು ಅವರು ಆರೋಪಿಸಿದ್ದಾರೆ.



### ಬಂಡಾಯ ಸಂಸದರಿಗೆ ವೈ-ಪ್ಲಸ್ ಭದ್ರತೆ

ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ) ಪಕ್ಷದ ವಿರುದ್ಧ ಬಂಡಾಯ ಎದ್ದಿರುವ ಆರು ಲೋಕಸಭಾ ಸದಸ್ಯರಿಗೆ ಮಹಾರಾಷ್ಟ್ರ ಪೊಲೀಸರು ವೈ-ಪ್ಲಸ್ ಭದ್ರತೆ ಒದಗಿಸಿದ್ದಾರೆ. ಗುಪ್ತಚರ ವಿಭಾಗದ ಆಯುಕ್ತ ಶಿರೀಷ್ ಜೈನ್ ಸಹಿ ಮಾಡಿರುವ ಪತ್ರದ ಪ್ರಕಾರ, ಸಂಜಯ್ ದಿನಾ ಪಾಟೀಲ್, ಸಂಜಯ್ ದೇಶಮುಖ್, ಸಂಜಯ್ ಜಾಧವ್, ಭೌಸಾಹೇಬ್ ವಾಕ್ ಚೌರೆ, ನಾಗೇಶ್ ಪಾಟೀಲ್ -ಅಷ್ಟೀಕರ್ ಹಾಗೂ ಓಂಪ್ರಕಾಶ್ ರಾಜೆ ನಿಂಬಾಳ್ಕರ್ ಅವರಿಗೆ ತಕ್ಷಣದಿಂದಲೇ ಈ ಭದ್ರತೆ ನೀಡಲಾಗಿದೆ. ವೈ-ಪ್ಲಸ್ ಭದ್ರತೆಯಲ್ಲಿ 11 ಭದ್ರತಾ ಸಿಬ್ಬಂದಿ ಇರುತ್ತಾರೆ.

ಅಮೆರಿಕದ ಎಐ ನಿರ್ಬಂಧಗಳ ನಡುವೆ ಪ್ರಧಾನಿ ಮೋದಿ ಕರೆ

# ತಂತ್ರಜ್ಞಾನ ಎಲ್ಲರಿಗೂ ತಲುಪಲಿ



ಭಾರತಕ್ಕೆ ಎಐ ಎಂದರೆ 'ಆಲ್ ಇನ್‌ಕ್ಲೂಸಿವ್'

• **ಪ್ಯಾರಿಸ್:** ತಂತ್ರಜ್ಞಾನವು ಕೆಲವರಿಕ್ಕೆಯಲ್ಲಿ ಸೀಮಿತವಾಗದೆ ಎಲ್ಲರಿಗೂ ಲಭ್ಯವಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು. ಯುರೋಪಿನ ಅತಿದೊಡ್ಡ ತಂತ್ರಜ್ಞಾನ ಮತ್ತು ನಾವೀನ್ಯತಾ ಸಮಾವೇಶವಾದ ವಿವಾಟೆಕ್ 2026ನಲ್ಲಿ ಮಾತನಾಡಿದ ಅವರು, ಭಾರತಕ್ಕೆ ಎಐ(ಕೃತಕ ಬುದ್ಧಿಮತ್ತೆ) ಎಂದರೆ 'ಆಲ್ ಇನ್‌ಕ್ಲೂಸಿವ್' (ಎಲ್ಲರನ್ನೂ ಒಳಗೊಂಡ) ಎಂಬುದಾಗಿದೆ ಎಂದರು. ಅಮೆರಿಕ ಸರ್ಕಾರವು ಕೆಲವು ಸುಧಾರಿತ ಎಐ ಮಾದರಿಗಳ ಬಳಕೆಗೆ ನಿರ್ಬಂಧ ಹೇರಿದ ಹಿನ್ನೆಲೆ ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಲಭ್ಯತೆ ಕುರಿತು ಚರ್ಚೆಗಳು ನಡೆಯುತ್ತಿರುವ ಸಮಯದಲ್ಲೇ ಮೋದಿ ಈ ಅಭಿಪ್ರಾಯ ವ್ಯಕ್ತಪಡಿಸಿದರು. ತಂತ್ರಜ್ಞಾನದಲ್ಲಿ ನಾವೀನ್ಯತೆಯ ಜತೆಗೆ ಅದರ ಪ್ರವೇಶವೂ ಅತ್ಯಂತ ಮುಖ್ಯ. ತಂತ್ರಜ್ಞಾನವು ಪ್ರಗತಿಗೆ ಕಾರಣವಾಗಬೇಕಾದರೆ ಅದು ಜನಸಾಮಾನ್ಯರಿಗೂ ತಲುಪಬೇಕು. ಪುಟ ೨


### ಸ್ಟಾರ್ಟ್‌ಅಪ್ ಶಕ್ತಿಕೇಂದ್ರ

ಭಾರತದಲ್ಲಿ 2 ಲಕ್ಷಕ್ಕೂ ಅಧಿಕ ಸ್ಟಾರ್ಟ್ ಅಪ್‌ಗಳಿದ್ದು, ವಿಶ್ವದ ಅತ್ಯಂತ ಚುರುಕು ನಾವೀನ್ಯತಾ ಪರಿಸರ ವ್ಯವಸ್ಥೆಗಳಲ್ಲಿ ಒಂದಾಗಿದೆ. ವಿವಾಟೆಕ್‌ನಲ್ಲಿ ಸ್ಥಾಪಿಸಲಾದ ಭಾರತದ ಪೆವಿಲಿಯನ್‌ಗೆ ಭೇಟಿ ನೀಡುವಂತೆ ಆಹ್ವಾನಿಸಿದ ಅವರು, 3ಡಿ ಮುದ್ರಿತ ರಾಕೆಟ್ ಎಂಜಿನ್‌ಗಳು, ಜಿನೋಮಿಕ್ ಚಿಕಿತ್ಸೆಗಳು, ಕ್ಯಾನ್ಸರ್ ಪತ್ತೆಹಚ್ಚುವ ಎಐ ಪರಿಹಾರಗಳು, ಸೈಬರ್ ಭದ್ರತಾ ತಂತ್ರಜ್ಞಾನ, ಸ್ವಯಂಚಾಲಿತ ರೋಬೋಟ್‌ಗಳು, ಸ್ಮಾರ್ಟ್ ಸಿಟಿ ಮತ್ತು ಮೊಬಿಲಿಟಿ ಪರಿಹಾರಗಳನ್ನು ಮೋದಿ ಉಲ್ಲೇಖಿಸಿದರು.

ಆರೆಸ್ಸೆಸ್ ಕಚೇರಿ ಮೇಲೆ ಪೆಟ್ರೋಲ್ ಬಾಂಬ್ ದಾಳಿ ಪ್ರಕರಣ


# ಬಂಧಿತರಿಗೆ ಪಾಕ್ ಉಗ್ರ ಸಂಪರ್ಕ

• **ರಾಂಚಿ:** ಜಾರ್ಖಂಡ್‌ನ ರಾಂಚಿಯಲ್ಲಿರುವ ಆರ್‌ಎಸ್‌ಎಸ್ ಕಚೇರಿ ಮೇಲೆ ಪೆಟ್ರೋಲ್ ಬಾಂಬ್ ಎಸೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನ ಮೂಲದ ಉಗ್ರ ಸಂಘಟನೆಗಳ ಸಂಪರ್ಕ ಶಂಕೆ ಹಿನ್ನೆಲೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.



ಬಂಧಿತರಲ್ಲಿ ಒಬ್ಬನಾದ ಸೈಫ್ ಅನ್ಸಾರಿ ಅಲಿಯಾಸ್ ರೋಹಿತ್ ವಿಚಾರಣೆ ವೇಳೆ ಪೊಲೀಸ್ ವಶದಿಂದ ತಪ್ಪಿಸಿಕೊಂಡು ನಂತರ ನಡೆದ ಗುಂಡಿನ ಚಕಮಕಿಯಲ್ಲಿ ಗಾಯಗೊಂಡು ಮತ್ತೆ ಸೆರೆ ಸಿಕ್ಕಿದ್ದಾನೆ. ರಾಂಚಿಯ ನಿವಾರಣಪುರ ಪ್ರದೇಶದಲ್ಲಿರುವ ಆರ್‌ಎಸ್‌ಎಸ್ ಕಚೇರಿ ಮೇಲೆ ಬುಧವಾರ ಮುಂಜಾನೆ ಪೆಟ್ರೋಲ್ ಬಾಂಬ್ ದಾಳಿ ನಡೆದಿತ್ತು. ಈ ಘಟನೆ ಹಿನ್ನೆಲೆಯಲ್ಲಿ ಪೊಲೀಸರು ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಿ ತನಿಖೆ ಆರಂಭಿಸಿದ್ದರು. ಇಬ್ಬರು ಆರೋಪಿಗಳನ್ನು ಬುಧವಾರ ರಾತ್ರಿ ಲೋಹರ್ದಾಗಾ ಜಿಲ್ಲೆಯಲ್ಲಿ ಬಂಧಿಸಲಾಗಿದ್ದು, ದಾಳಿಗೆ ಬಳಸಿದ್ದ ಕಾರನ್ನೂ ವಶಪಡಿಸಿಕೊಳ್ಳಲಾಗಿದೆ. ಪುಟ ೨

■ ಒಬ್ಬ ಆರೋಪಿ ಪರಾರಿಯಾಗಿ ಮತ್ತೆ ಬಂಧನ
■ ಗುಂಡಿನ ಚಕಮಕಿಯಲ್ಲಿ ಆರೋಪಿಗೆ ಗಾಯ




### ಐಎಸ್‌ಐ ಸಂಪರ್ಕ ಶಂಕೆ

ಆರೋಪಿಗಳಿಗೆ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಅಥವಾ ಇತರ ಉಗ್ರ ಸಂಘಟನೆಗಳ ಸಂಪರ್ಕವಿದೆಯೇ ಎಂಬ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಮಧ್ಯಪ್ರಾಚ್ಯ ಯುದ್ಧಕ್ಕೆ ವಿರಾಮ

- ಮಧ್ಯಂತರ ಒಪ್ಪಂದಕ್ಕೆ ಅಮೆರಿಕ-ಇರಾನ್ ಸಹಿ
- ಪರಮಾಣು ಮಾತುಕತೆಗೆ 60 ದಿನಗಳ ಕಾಲಾವಕಾಶ
- ಹಾರ್ಮುಜ್‌ನಲ್ಲಿ ಹಡಗುಗಳಿಗೆ ಮುಕ್ತ ಸಂಚಾರ
- 60 ದಿನಗಳಿಗೆ ಇರಾನ್ ತುಲ್ಕ ವಿಧಿಸುವಂತಿಲ್ಲ



• **ಎವಿಯನ್-ಲೆ-ಬೈನ್ಸ್(ಫ್ರಾನ್ಸ್):** ಇರಾನ್‌ನೊಂದಿಗಿನ ಮಧ್ಯಂತರ ಒಪ್ಪಂದಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ. ಮಧ್ಯಂತರ ಒಪ್ಪಂದಕ್ಕೆ ಟ್ರಂಪ್ ಸಹಿ ಮಾಡುವುದರೊಂದಿಗೆ 111 ದಿನಗಳ ಮಧ್ಯಪ್ರಾಚ್ಯ ಯುದ್ಧವು ತಾತ್ಕಾಲಿಕ ಅಂತ್ಯವನ್ನು ಕಂಡಿದ್ದು, ಒಪ್ಪಂದದಂತೆ ಹಾರ್ಮುಜ್ ಜಲಸಂಧಿ ತಕ್ಷಣವೇ ತೆರೆಯಲಾಗುವುದು. ಪುಟ ೨

### ಹಿಂದೂ ಯುವತಿ ಕರೆದೊಯ್ದ ಮುಸ್ಲಿಂ ಯುವಕನ ಬಂಧನ

• **ಭಟ್ಕಳ:** ಸೂಪರ್ ಮಾರ್ಕೆಟೊಂದರಲ್ಲಿ ಕೆಲಸಕ್ಕಿದ್ದ ಹಿಂದೂ ಯುವತಿಯೊಬ್ಬಳನ್ನು ಕಾರಿನಲ್ಲಿ ಕರೆದೊಯ್ದ ಮುಸ್ಲಿಂ ಯುವಕ ಶಾಹೀದ್ ಖಾನ್ ಎಂಬಾತನನ್ನು ಯುವತಿ ನೀಡಿದ ದೂರಿನ ಮೇರೆಗೆ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ. • ವಿವರ ಪುಟ ೩



ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ 2,60,000 (2,65,000) ಅಪರಂಜಿ ಚಿನ್ನ 1,49,510 (1,51,100) ಆಭರಣ ಚಿನ್ನ 1,37,050 (1,38,500) | ಷೇರು ಸೂಚ್ಯಂಕ ಸೆನ್ಸೆಕ್ಸ್ 77,409 (254↑) ಎನ್‌ಎಸ್‌ಇ 24,168 (82↑) | $1 = ₹94.53

## ಊಟದಲ್ಲಿ ಹುಳು: ವಿದ್ಯಾರ್ಥಿಗಳ ಪ್ರತಿಭಟನೆ

**• ಬೆಳಗಾವಿ:** ಊಟ ಮಾಡಲು ಹೋದರೆ ಅಡುಗೆಯಲ್ಲಿ ಹುಳು ಬರುತ್ತದೆ. ಬಳಕೆಗೆ ಹೋದರೆ ನೀರೇ ಬರುವುದಿಲ್ಲ, ಕುಡಿಯಲು ಶುದ್ಧ ನೀರಿನ ವ್ಯವಸ್ಥೆಯೂ ಇಲ್ಲ, ನಲ್ಲಿ ನೀರು ಕುಡಿದು ಆಸ್ಪತ್ರೆಗೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿ ಬೆಳಗಾವಿಯ ಸಂಗಮೇಶ್ವರ ನಗರದ ಬಾಲಕರ ಮೆಟ್ರಿಕ್ ನಂತರದ ವಸತಿ ನಿಲಯದ ವಿದ್ಯಾರ್ಥಿಗಳು ಗುರುವಾರ ವಿದ್ಯಾರ್ಥಿಗಳು ದಿಢೀರ್ ಪ್ರತಿಭಟನೆ ನಡೆಸಿದರು.

ಕಳೆದ ಹಲವು ದಿನಗಳಿಂದ ವಸತಿ ನಿಲಯದಲ್ಲಿ ತೀವ್ರ ನೀರಿನ ಅಭಾವ ಎದುರಾಗಿದ್ದು, ಶುದ್ಧ ಕುಡಿಯುವ ನೀರು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯಿಂದ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸುತ್ತಿದ್ದಾರೆ. ಶೌಚಾಲಯ ಬಳಕೆಗೆ ಸಹ ನೀರು ಲಭ್ಯವಾಗುತ್ತಿಲ್ಲ ಎಂದು ವಿದ್ಯಾರ್ಥಿಗಳು ದೂರಿದರು.ವಸತಿ ನಿಲಯದ ಊಟದಲ್ಲಿ ಪದೇ ಪದೇ ಹುಳುಗಳು ಪತ್ತೆಯಾಗುತ್ತಿದ್ದು, ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಆತಂಕ ಹೆಚ್ಚಾಗಿದೆ.

## ರಘು ಕೌಟಿಲ್ಯ, ಲಿಂಗರಾಜ್‌ಗೆ ಅಭಿನಂದನೆ

**• ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಅಭ್ಯರ್ಥಿಗಳಾದ ರಘು ಕೌಟಿಲ್ಯ ಮತ್ತು ಲಿಂಗರಾಜ್ ಪಾಟೀಲ್ ಗೆಲುವು ಸಾಧಿಸಿದ್ದಾರೆ. ಅವರನ್ನು ಅಭಿನಂದಿಸುವುದಾಗಿ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮತದಾನ ಪ್ರಕ್ರಿಯೆಯಲ್ಲಿ ನಮ್ಮ ಮೂರು ಮತಗಳು ಅಡ್ಡಮತದಾನ ಆಗಿವೆ ಎಂಬುದು ಗೊತ್ತಾಗಿದೆ. ಅದನ್ನು ಯಾರು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಆ ಕುರಿತು ನಮ್ಮ ಪಕ್ಷ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ತಿಳಿಸಿದರು.

ನಮ್ಮದು ಒಂದು ಮತ ಅಸಿಂಧು ಆಗಿದೆ. 30 ಮತಗಳನ್ನು ರಘು ಅವರಿಗೆ ಕೊಟ್ಟಿದ್ದೆವು. ಅದರಲ್ಲಿ ಒಂದು ಮತ ಅಸಿಂಧು ಆಗಿದೆ. 30 ಮತಗಳನ್ನು ಪಾಟೀಲ್ ಅವರಿಗೆ ಕೊಟ್ಟಿದ್ದೆವು. ಅದರಲ್ಲಿ ಮೂರು ಮತಗಳು ನಮಗೆ ಬಂದಿಲ್ಲ, ಉಳಿದ ಎರಡು ಮತಗಳನ್ನು ಜೆಡಿಎಸ್‌ಗೆ ಕೊಟ್ಟಿತ್ತು. ನಮ್ಮದು ಮೂರು ಮತಗಳು ಹೆಚ್ಚು ಕಡಿಮೆಯಾಗಿರುವುದು ಕಾಣಿಸುತ್ತಿದೆ. ಯಾರೂ ಪಕ್ಷಕ್ಕೆ ದ್ರೋಹ ಬಗೆದಿದ್ದಾರೆ ಎಂಬುದು ಗೊತ್ತಾಗಲಿದೆ ಎಂದು ಅಶೋಕ ಹೇಳಿದರು.

### ರಾಮ ಬಾಣ




## ಪಿತ್ರಾರ್ಜಿತ ಆಸ್ತಿ, ವಿಭಜನೆ ಬಳಿಕ ಕುಟುಂಬದ ಆಸ್ತಿಯಾಗಲ್ಲ: ಹೈ

**• ಬೆಂಗಳೂರು:** ತಾತನು ತನ್ನ ಜೀವಿತಾವಧಿಯಲ್ಲಿ ಸ್ವಂತವಾಗಿ ಸಂಪಾದಿಸಿದ ಆಸ್ತಿಯು ವಿಭಜನೆಯ ನಂತರ ಆ ಆಸ್ತಿ ತಂದೆಯ ಕೈಸೇರಿದರೂ ಅದು ತಂದೆಯ ವೈಯಕ್ತಿಕ ಆಸ್ತಿಯಾಗುತ್ತದೆಯೇ ವಿನಃ ಹಿಂದೂ ಅವಿಭಕ್ತ ಕುಟುಂಬದ ಆಸ್ತಿಯಾಗುವುದಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

ಅಲ್ಲದೆ, ಆ ರೀತಿಯಲ್ಲಿ ವಿಭಜನೆಯಾದ ಆಸ್ತಿಯಲ್ಲಿ ಮೊಮ್ಮಗಳು ಪಾಲು ಕೇಳುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

ಅಮೆರಿಕದಲ್ಲಿ ನೆಲೆಸಿರುವ ಉಷಾ ಎನ್ ಸ್ವಾಮಿ ಸಲ್ಲಿಸಿದ್ದ ಮೇಲ್ಮನವಿ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಿ.ಕೆ.ಸಿಂಗ್ ಮತ್ತು ನ್ಯಾಯಮೂರ್ತಿ ಟಿ.ಎಂ.ನದಾಫ್ ಅವರಿದ್ದ ವಿಭಾಗೀಯ ಪೀಠ, ಈ ಮಹತ್ವದ ತೀರ್ಪು ನೀಡಿದೆ.

ವಾದ-ಪ್ರತಿವಾದ ಆಲಿಸಿ ಪ್ರಕರಣದ ಎಲ್ಲಾ ಅಂಶಗಳನ್ನು ಅವಲೋಕಿಸಿದ ಬಳಿಕ ನ್ಯಾಯಾಲಯ, ಉಷಾ ಉಲ್ಲೇಖಿಸಿರುವ ಆಸ್ತಿಗಳ ದಾಖಲೆಗಳನ್ನು ಪರಿಶೀಲಿಸಿದರೆ ಆಕೆಯ ತಾತ, ಅಂದರೆ ತಂದೆಯ ತಂದೆ ಸ್ವಂತವಾಗಿ ಸಂಪಾದಿಸಿದ್ದರೆಂಬುದು ತಿಳಿದು ಬರಲಿದೆ.

ಆ ಆಸ್ತಿಯನ್ನು ಅವರ ತಾತ, ಅವರ ಮಕ್ಕಳಿಗೆ ಕೌಟುಂಬಿಕ ಒಪ್ಪಂದದ ಮೂಲಕ ಹಂಚಿಕೆ ಮಾಡಿದ್ದಾರೆ. ತಾತನ ಸ್ವಯಾರ್ಜಿತ ಆಸ್ತಿ ಭಾಗವಾಗಿ ತಂದೆಗೆ ಬಂದಾಗ, ಅದು ಆ ತಂದೆಯ ವೈಯಕ್ತಿಕ ಆಸ್ತಿಯಾಗುತ್ತದೆ. ಆದರೆ ಪಿತ್ರಾರ್ಜಿತ ಆಸ್ತಿಯಾಗುವುದಿಲ್ಲ ಎಂದು ಆದೇಶಿಸಿದೆ.

### ಕಿಡಿ ನುಡಿ

• ವಾಸುದೇವರಾವ್ ಕಕ್ಕೆಕೇಜಿ

ಭಾಷೆ , ಪೂಜಾ ಪದ್ಧತಿಗಳು ಬೇರೆ ಬೇರೆಯಾಗಿದ್ದರೂ ಪರೋಪಕಾರವೇ ಪುಣ್ಯ ಪರಪೀಡನೆಯೇ ಪಾಪ ಎಂಬ ತತ್ವದ ಪಾಲನೆಯಿಂದಾಗಿ ಭಾರತ ಇಂದು ಒಂದಾಗಿ ಉಳಿದಿದೆ

\- ಮೋದಿ

**-ದಾರಿಗಳು ಬೇರೆ ಬೇರೆಯಾಗಿದ್ದರೂ ಗುರಿ ಒಂದೇ. ನದಿಗಳು ಬೇರೆ ಬೇರೆಯಾಗಿದ್ದರೂ ಸೇರುವುದು ಒಂದೇ ಸಮುದ್ರಕ್ಕೆ. ಪಕ್ಷಗಳು ಬೇರೆ ಬೇರೆಯಾಗಿದ್ದರೂ ದೇಶ ಒಂದೇ. ಅನೇಕತೆಯಲ್ಲಿ ಏಕತೆಯೇ ಹಿಂದುತ್ವ**

### ದಿನ ಭವಿಷ್ಯ

**ಮೇಷ** ಉದಾಸೀನ ಕಾಡಲಿದೆ. ಕಾರ್ಯ ವಿಳಂಬ. ಶೇರು ಹೂಡಿಕೆ ಲಾಭ ತರುವುದು. ಅವಿವಾಹಿತರಿಗೆ ಸಂಬಂಧ ಕೂಡಿಬರುವ ಸಾಧ್ಯತೆ.

**ವೃಷಭ** ಉದ್ದೇಶಿತ ಕಾರ್ಯ ಪೂರ್ಣವಾಗದೆ ನಿರಾಶೆ. ಪ್ರೀತಿಪಾತ್ರರಿಂದ ಟೀಕೆ ಕೇಳುವಿರಿ. ಹಣದ ವಿಚಾರದಲ್ಲಿ ರಿಸ್ಕ್ ಬೇಡ, ಎಚ್ಚರದ ನಡೆಯಿರಲಿ.

**ಮಿಥುನ** ಕೆಲಸದಲ್ಲಿ ಹೆಚ್ಚು ಪರಿಶ್ರಮ ಅಗತ್ಯ. ನಿಮ್ಮ ಕಾರ್ಯಕ್ಕೆ ಟೀಕೆ ಬಂದೀತು. ಸರಿಯಾಗಿ ತಿಳಿದಿರದ ಕ್ಷೇತ್ರದಲ್ಲಿ ಹಣ ಹೂಡುವ ರಿಸ್ಕ್ ಬೇಡ.

**ಕಟಕ** ಜೀವನದಲ್ಲಿ ನಿಮಗೇನು ಬೇಕು ಎಂದು ಪ್ರಶ್ನಿಸಿಕೊಳ್ಳಿ, ಸ್ಪಷ್ಟ ಗುರಿ ಇಟ್ಟುಕೊಳ್ಳಿ, ಪ್ರಸ್ತುತ ನಿಮ್ಮ ಬದುಕು ಗುರಿಯಿಲ್ಲದ ನಾವೆಯಂತಾಗಿದೆ.

**ಸಿಂಹ** ಭವಿಷ್ಯಕ್ಕೆ ಸೂಕ್ತ ಯೋಜನೆ ಹಾಕಿಕೊಳ್ಳಿ. ಆಸಕ್ತ ವ್ಯಕ್ತಿಯ ಭೇಟಿ, ಸಂಬಂಧ ಗಾಢವಾದೀತು. ಅಲರ್ಜಿಯಂತಹ ಸಮಸ್ಯೆ ಕಾಡಬಹುದು.

**ಕನ್ಯಾ** ಉತ್ತಮ ಉದ್ಯೋಗ ಅವಕಾಶ ದೊರಕೀತು. ಆಪ್ತೀಯರ ಭಾವನೆಗೆ ಸರಿಯಾಗಿ ಸ್ಪಂದಿಸಿ. ನಿರಾಸಕ್ತಿ ತೋರದಿರಿ. ಪ್ರಮುಖ ಕಾರ್ಯಸಿದ್ಧಿ.

**ತುಲಾ** ಕೆಲಸದ ವಿಕಟನಕ ಜೋರ್ ಹೊಡೆಸಬಹುದು. ಹೊಸತನಕ್ಕೆ ತೆರೆದುಕೊಳ್ಳಿ. ಅನವಶ್ಯ ಶಾಪಿಂಗ್ ತಪ್ಪಿಸಿ. ಖರ್ಚು ನಿಯಂತ್ರಿಸಿ.

**ವೃಶ್ಚಿಕ** ಉದ್ಯಮ ವ್ಯವಹಾರದಲ್ಲಿ ಎಚ್ಚರ ವಹಿಸಿ. ವಂಚನೆ ನಡೆದೀತು. ಖಾಸಗಿ ಬದುಕಿನಲ್ಲಿ ಸ್ವರತೆಗೆ ಆದ್ಯತೆ ಕೊಡಿ. ತಲೆನೋವು ಬಾಧಿಸೀತು.

**ಧನು** ವ್ಯಕ್ತಿಗೆ ಸಂಬಂಧಿಸಿ ಶುಭ ಬೆಳವಣಿಗೆ. ಆರೋಗ್ಯದ ವಿಚಾರ ಆತಂಕ ತರಬಹುದು. ಅಗತ್ಯ ಬಿದ್ದರೆ ವೈದ್ಯರ ಕಾಣುವುದು ಒಳಿತು.

**ಮಕರ** ನಿಮ್ಮ ಸುತ್ತ ಶಾಂತ ವಾತಾವರಣ. ಕಾರ್ಯ ಸುಗಮ. ಇತರರ ಸಹಕಾರ ಪಡೆಯುವಿರಿ. ಆಹಾರ ಸೇವನೆಯಲ್ಲಿ ಪಥ್ಯ ಕಾಯ್ದುಕೊಳ್ಳಿ.

**ಕುಂಭ** ವೃತ್ತಿ ಕಾರ್ಯದಲ್ಲಿ ಸಫಲತೆ. ಮ್ಯೂಚುವಲ್ ಫಂಡ್‌ನಲ್ಲಿ ಹಣ ಹೂಡುವಾಗ ಎಚ್ಚರ ವಹಿಸಿ. ವಿವಾಹ ಸಂಬಂಧ ಕೂಡಿಬರಬಹುದು.

**ಮೀನ** ಆರ್ಥಿಕ ಸಫಲತೆ. ನಿಮ್ಮ ಪ್ರಮುಖ ಗುರಿ ಸಾಧಿಸಲ್ಪಡಲಿದೆ. ರಕ್ತ ಸಂಚಾರದ ವೇಳೆ ತುಸು ಜಾಗ್ರತೆ ವಹಿಸಿ. ಖರ್ಚು ನಿಯಂತ್ರಣ.

**ರಾಹುಕಾಲ : 10.30-12.00**
**ಗುಳಿಕಕಾಲ : 7.30-9.00**
ಅದೃಷ್ಟ ಸಂಖ್ಯೆ : 5,9,2,7

### ಮೇಲ್ಮನೆಯಲ್ಲಿ ಕೈ ಚಳಕ | ವಿರೋಧ ಪಕ್ಷಗಳಿಗೆ ಮುಖಭಂಗ

# ಫಲಿಸಿದ ಕಾಂಗ್ರೆಸ್ ತಂತ್ರ

**• ಬೆಂಗಳೂರು:** ತೀವ್ರ ಕುತೂಹಲ ಮೂಡಿಸಿದ್ದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ರೂಪಿಸಿದ್ದ ತಂತ್ರ ಫಲಿಸಿದ್ದು, 5ನೇ ಅಭ್ಯರ್ಥಿಯನ್ನು ಅನಾಯಾಸವಾಗಿ ಗೆಲ್ಲಿಸುವ ಮೂಲಕ ವಿಪಕ್ಷಗಳಿಗೆ ತೀವ್ರ ಮುಖಭಂಗ ಆಗುವಂತೆ ಮಾಡಿದೆ.

ಈ ಚುನಾವಣೆಯಲ್ಲಿ ನಿರೀಕ್ಷೆಗಿಂತ ಹೆಚ್ಚಿಗೆಯೇ ಅಡ್ಡ ಮತದಾನ ಆಗಿರುವುದು ಮೈತ್ರಿ ಪಕ್ಷಗಳಿಗೆ ತೀವ್ರ ಆಘಾತ ಮೂಡಿಸಿದ್ದು, ಎಲ್ಲವೂ ಸರಿ ಇಲ್ಲ ಎಂಬುವುದನ್ನು ತೋರಿಸಿದೆ. ಬಿಜೆಪಿಯಿಂದ 3 ಮತ್ತು ಜೆಡಿಎಸ್‌ನಿಂದ 4 ಅಡ್ಡ ಮತದಾನವಾಗಿದೆ. ಬಿಜೆಪಿಯ ಒಂದು ಮತ ಅಸಿಂಧುವಾಗಿದೆ. ಮೈತ್ರಿ ಪಕ್ಷಗಳು ಕೊನೆ ಗಳಿಗೆಯಲ್ಲಿ ಮ್ಯಾಜಿಕ್ ಮಾಡಿ ಜೆಡಿಎಸ್ ಅಭ್ಯರ್ಥಿ ಗೆಲ್ಲಿಸಬಹುದು ಎಂಬ ನಿರೀಕ್ಷೆ ಸುಳ್ಳಾಗಿದೆ.ಈ ಗೆಲುವಿನ ಮೂಲಕ ಕಾಂಗ್ರೆಸ್ ಮೇಲ್ಮನೆಯಲ್ಲಿ ಹೆಚ್ಚುವರಿಯಾಗಿ 1 ಸ್ಥಾನವನ್ನು ಪಡೆದುಕೊಂಡರೆ, ಬಿಜೆಪಿ 1 ಸ್ಥಾನವನ್ನು ಕಳೆದುಕೊಂಡಿದ್ದು, ಜೆಡಿಎಸ್‌ಗೆ ಯಾವುದೇ ನಷ್ಟವಾಗಿಲ್ಲ. ಫಲಿತಾಂಶದ ನಂತರದ ಈಗಿನ ಸಂಖ್ಯಾಬಲ ಪ್ರಕಾರ ಕಾಂಗ್ರೆಸ್ 38, ಬಿಜೆಪಿ 28, ಜೆಡಿಎಸ್ 7 ಸ್ಥಾನ ಹೊಂದಿದ್ದರೆ, ಪಕ್ಷೇತರ 1 ಮತ್ತು ಸಭಾಧ್ಯಕ್ಷ 1 ಸ್ಥಾನ ಇದೆ.

ಕಾಂಗ್ರೆಸ್‌ನಿಂದ ಖಾಲಿಯಾದ ನಾಲ್ಕು ಸ್ಥಾನಗಳ ಪೈಕಿ ಬಿ.ಕೆ. ಹರಿಪ್ರಸಾದ್ ಮತ್ತು ತಿಪ್ಪಣ್ಣ ಕಮಕನೂರ ಮರು ಆಯ್ಕೆಯಾದರೆ, ಗೋವಿಂದ ರಾಜು, ನಸೀರ್ ಅಹ್ಮದ್ ಸ್ಥಾನಕ್ಕೆ ಪಿ.ವಿ.ಮೋಹನ್, ಬಿ.ಎಸ್. ಶಿವಣ್ಣ ಅವರು ಆಯ್ಕೆಯಾಗಿದ್ದು, ಹೆಚ್ಚುವರಿಯಾಗಿ ವಿನಯ್ ಕಾರ್ತಿಕ್ ಮೇಲ್ಮನೆ ಪ್ರವೇಶಿಸಿದ್ದಾರೆ.ಬಿಜೆಪಿಯಿಂದ ಮೂವರು ಸದಸ್ಯರು ನಿವೃತ್ತಿಗೊಂಡಿದ್ದು, ಸಂಖ್ಯಾ ಬಲದ ಆಧಾರದಲ್ಲಿ ಇಬ್ಬರನ್ನು ಮಾತ್ರ ಗೆಲ್ಲಿಸಲು ಅವಕಾಶ ಇದಿದ್ದರಿಂದ ಒಂದು ಸ್ಥಾನವನ್ನು ಕಳೆದುಕೊಂಡಿದೆ. ಈ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಸೋತಿದ್ದರೂ ಆ ಪಕ್ಷಕ್ಕೆ ಯಾವುದೇ ನಷ್ಟವಾಗಿಲ್ಲ.ಬಿಜೆಪಿ ಮತ್ತು ಜೆಡಿಎಸ್‌ನ ಅಸಮಾಧಾನಿತರನ್ನು ಸೆಳೆಯಲು ಕಾಂಗ್ರೆಸ್ ಯಶಸ್ವಿಯಾಗಿದ್ದು, ಗೆಲುವಿಗಾಗಿ ನಡೆಸಿದ ಪೂರ್ವ ಸಿದ್ಧತೆಯ ಪರಿಣಾಮ ಕಾಂಗ್ರೆಸ್‌ನ 5ನೇ ಅಭ್ಯರ್ಥಿಯು ಗೆಲ್ಲುವಂತಾಗಿದೆ. ಈ ಗೆಲುವಿನಿಂದ ವಿಧಾನ ಪರಿಷತ್‌ಗೆ ಇನ್ನೊಬ್ಬರಿಗೆ ಸಚಿವ ಸ್ಥಾನ ಸಿಗಬಹುದಾಗಿದೆ.

**ಮೇಲ್ಮನೆಯಲ್ಲಿ ಬಹುಮತ?:** ಮೇಲ್ಮನೆಯಲ್ಲಿ ಕಾಂಗ್ರೆಸ್‌ಗೆ 38 ಸ್ಥಾನಗಳಿದ್ದು, ಬಿಜೆಪಿಯ 28, ಜೆಡಿಎಸ್‌ನ 7 ಮತ್ತು ಸಭಾಧ್ಯಕ್ಷ 1 ಸ್ಥಾನ ಸೇರಿದರೆ 35 ಆಗಲಿದ್ದು, ಪಕ್ಷೇತರ ಸದಸ್ಯ ಲಖನ್ ಜಾರಕಿಹೊಳಿ ಅವರು ಕಾಂಗ್ರೆಸ್‌ಗೆ ಬೆಂಬಲ ನೀಡಿದರೆ ಬಹುಮತ ಸಿಗಲಿದ್ದು, ಸಭಾಪತಿ ಸ್ಥಾನ ಪಡೆಯಬಹುದಾಗಿದೆ. ಇದರ ಜತೆಗೆ ಜುಲೈ 21ಕ್ಕೆ 5 ನಾಮನಿರ್ದೇಶಿತ ಸ್ಥಾನಗಳು ಖಾಲಿಯಾಗಲಿದ್ದು, ಇದು ಕಾಂಗ್ರೆಸ್‌ಗೆ ಬೋನಸ್ ಆಗಲಿದೆ.



**ನಾವು ಯಾವುದೇ ತಂತ್ರಗಾರಿಕೆ ಮಾಡಿಲ್ಲ. ಅದರ ಅವಶ್ಯಕತೆ ಇಲ್ಲ, ಎಲ್ಲರೂ ಪ್ರಜ್ಞಾವಂತರು, ಬುದ್ಧಿವಂತರಿದ್ದು, ಜನರ ಪ್ರತಿನಿಧಿಗಳಾಗಿದ್ದಾರೆ. ಅವರು ತಮ್ಮ ಸ್ವಇಚ್ಛೆ ಮೇಲೆ ಯಾರಿಗೆ ಮತ ಹಾಕಬೇಕೋ ಹಾಕಿದ್ದಾರೆ. ನಾನು ನಮ್ಮ ಶಾಸಕರ ಜೊತೆ ಎರಡು ದಿನ ಕಾಲ ಕಳೆದಿದ್ದೇನೆ ಹೊರತು, ಬೇರೆ ಯಾವ ತಂತ್ರಗಾರಿಕೆ ಮಾಡಿಲ್ಲ.**
■ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ

### ಶಾಸಕರಿಗೆ ತರಬೇತಿ ನೀಡಲಾಗಿತ್ತು

**ನಮ್ಮ ಪಕ್ಷದ ಶಾಸಕರ ಒಂದು ಮತವೂ ತಿರಸ್ಕೃತವಾಗಬಾರದು ಎಂದು ತರಬೇತಿ ನೀಡಲಾಗಿತ್ತು. ಇದಕ್ಕೆ ಸಹಕರಿಸಿದ ಎಲ್ಲಾ ಪದಾಧಿಕಾರಿಗಳಿಗೆ ನಾನು ವಿಶೇಷವಾಗಿ ಧನ್ಯವಾದ ಹೇಳುತ್ತೇನೆ. ಇದಕ್ಕೆ ದುಡಿದಂತಹ ಪಕ್ಷದ ಎಲ್ಲಾ ಶಾಸಕರು, ನಾಯಕರು, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅವರು ಹಾಗೂ ಇತರೇ ಕಾರ್ಯದರ್ಶಿಗಳನ್ನು ನಾನು ಅಭಿನಂದಿಸುತ್ತೇನೆ ಎಂದರು. ಮಾಧ್ಯಮಗಳು ಸಹ ಸರ್ಕಾರಕ್ಕೆ ಬೆಂಬಲವಾಗಿ ಸಲಹೆ ನೀಡಿದ್ದೀರಿ. ನಿಮಗೂ ಧನ್ಯವಾದಗಳು ಎಂದರು.**

### ನಮಗೆ ನೀಡಿದ ವಿಶ್ವಾಸ ಜನರಿಗೆ ನೀಡಿದ ಶಕ್ತಿ: ಡಿಕೆಶಿ

# ಶಾಸಕರ ಪಕ್ಷಾತೀತ ಬೆಂಬಲ

**• ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಸರ್ಕಾರಕ್ಕೆ ಶಾಸಕರ ಬೆಂಬಲ ನೋಡಿ ನನಗೆ ಆಶ್ಚರ್ಯವಾಗಿದೆ. ಇದು ನಮ್ಮ ಸರ್ಕಾರಕ್ಕೆ ಮಾತ್ರ ನೀಡಿರುವ ಬೆಂಬಲವಲ್ಲ, ರಾಜ್ಯದ ಜನತೆಯ ಹಿತಕ್ಕಾಗಿ ನಿಮ್ಮ ಜತೆ ಇದ್ದೇವೆ ಎಂದು ನೀಡಿರುವ ಬೆಂಬಲ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ಗುರುವಾರ ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಪಕ್ಷದ ಬಿ.ಕೆ.ಹರಿಪ್ರಸಾದ್, ಮಳವಳ್ಳಿ ಶಿವಣ್ಣ, ಪಿ.ವಿ.ಮೋಹನ್, ವಿನಯ್ ಕಾರ್ತಿಕ್, ತಿಪ್ಪಣ್ಣಪ್ಪ ಕಮಕನೂರು ಅವರನ್ನು ವಿಧಾನಸೌಧದಲ್ಲಿ ಅಭಿನಂದಿಸಿದ ನಂತರ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದರು.

ನಾವು ಯಾವ ಹೆಜ್ಜೆಯನ್ನಿಟ್ಟು ಮುಂದುವರೆಯುತ್ತಿದ್ದೇವೆಯೋ ಅದಕ್ಕೆ ನಾವೂ ಜೊತೆಗಿದ್ದೇವೆ ಎಂದು ಪಕ್ಷಾತೀತವಾಗಿ ಬೆಂಬಲ ನೀಡಿದ್ದಾರೆ. ನಮ್ಮ ಪಕ್ಷದ ಶಾಸಕರೂ ಒಗ್ಗಟ್ಟಾಗಿ ಬೆಂಬಲಿಸಿದ್ದಾರೆ. ನಮಗೆ ಹೆಚ್ಚಿನ ಮತ ನೀಡಿದ ಬೇರೆ, ಬೇರೆ ಪಕ್ಷದ ವಿಶ್ವಾಸವನ್ನು ನಾವು ಉಳಿಸಿಕೊಳ್ಳುತ್ತೇವೆ. ನಿಮ್ಮ ಭಾವನೆಯನ್ನು ಅರಿತುಕೊಂಡು ನಿಮ್ಮ ಸೇವೆಯಲ್ಲಿ ಮುಂದುವರೆಯುತ್ತೇವೆ. ನೀವು ನಮಗೆ ನೀಡಿದ ವಿಶ್ವಾಸ ಜನರಿಗೆ ನೀಡಿದ ಶಕ್ತಿ ಎಂದು ಬಣ್ಣಿಸಿದರು.

**ನಮಗೆ ಹೆಚ್ಚಿನ ಮತ ನೀಡಿದ ಬೇರೆ, ಬೇರೆ ಪಕ್ಷದ ವಿಶ್ವಾಸವನ್ನು ನಾವು ಉಳಿಸಿಕೊಳ್ಳುತ್ತೇವೆ. ನಿಮ್ಮ ಭಾವನೆಯನ್ನು ಅರಿತುಕೊಂಡು ನಿಮ್ಮ ಸೇವೆಯಲ್ಲಿ ಮುಂದುವರೆಯುತ್ತೇವೆ. ನೀವು ನಮಗೆ ನೀಡಿದ ವಿಶ್ವಾಸ ಜನರಿಗೆ ನೀಡಿದ ಶಕ್ತಿ.**
■ ಡಿ.ಕೆ.ಶಿವಕುಮಾರ್, ಸಿಎಂ

### ಇದು ಗುಪ್ತ ಮತದಾನ: ಬೇರೆ ಪಕ್ಷದ ಆಂತರಿಕ ವಿಚಾರ ಗೊತ್ತಿಲ್ಲ

ಅಡ್ಡ ಮತದಾನಕ್ಕಾಗಿ ಕುದುರೆ ವ್ಯಾಪಾರ ನಡೆದಿದೆ ಎಂಬುದಕ್ಕೆ ಪ್ರತಿಕ್ರಿಯೆ ನೀಡಿದ ಸಿಎಂ, ಇದರ ಬಗ್ಗೆ ನನಗೆ ಗೊತ್ತಿಲ್ಲ, ಮತ ಯಾರು ಹಾಕಿದ್ದಾರೆ ಎಂಬುದೂ ನನಗೆ ಗೊತ್ತಿಲ್ಲ, ಇಲ್ಲಿ ನಡೆದಿರುವುದು ಗುಪ್ತ ಮತದಾನ. ಯಾರು ಮತ ಹಾಕಿದ್ದಾರೆ ಎಂದು ಯಾರಿಗೆ ಗೊತ್ತು. ಆತ್ಮವಿಶ್ವಾಸದ ಮತ ಹಾಕಿದ್ದಾರೆ. ನಾನು ಯಾರ ಬಳಿಯೂ ಮಾತನಾಡಲು ಹೋಗಿಲ್ಲ, ಮತ ಕೇಳಲೂ ಹೋಗಿಲ್ಲ, ನಮ್ಮ ಪಕ್ಷದಿಂದ ಐದು ಅಭ್ಯರ್ಥಿಗಳು ನಿಂತಿದ್ದರು. ನಮ್ಮ ಶಾಸಕರ ಸಂಖ್ಯಾ ಬಲ ಎಷ್ಟಿತ್ತು ಎಂಬುದು ಮಾಧ್ಯಮಗಳಿಗೆ ತಿಳಿದಿತ್ತು. ಐದು ಜನ ಗೆಲ್ಲುತ್ತಾರೆ ಎನ್ನುವ ವಿಶ್ವಾಸವಿತ್ತು. ಅವರು ಗೆದ್ದಿದ್ದಾರೆ ಎಂದರು. ದಳ, ಬಿಜೆಪಿ ಸೇರಿದಂತೆ ಯಾವ ಪಕ್ಷದ ಆಂತರಿಕ ವಿಚಾರ ಏನಿದೆಯೋ ಎಂಬುದು ನನಗೆ ಏನೂ ಗೊತ್ತಿಲ್ಲ ಎಂದರು.

**ದಾರಿ ಇಲ್ಲದವರಿಗೆ ದಾರಿ ತೋರಿಸಿದ್ದೇವೆ:** ಕಾಂಗ್ರೆಸ್‌ನವರು ಸಹಕಾರ ಕೋರಿದ್ದಾರೆ ಎಂದು ಎಸ್.ಟಿ. ಸೋಮಶೇಖರ್ ಹೇಳಿದ್ದಾರೆ ಎನ್ನುವುದಕ್ಕೆ ಉತ್ತರಿಸಿದ ಸಿಎಂ, ಅವರನ್ನು ಉಚ್ಚಾಟನೆ ಮಾಡಿ ಕಳಿಸಿದ್ದಾರಲ್ಲವೇ? ನಮ್ಮ ಹತ್ತಿರ ಇರಬೇಡಿ ಎಂದು ಕಳಿಸಿದ್ದರು. ಹೀಗೆ ಕಳಿಸಿದವರನ್ನು ದಾರಿಯಲ್ಲಿಯೇ ಬಿಡಲು ಆಗುತ್ತದೆಯೇ? ನಾವು ದಾರಿ ಇಲ್ಲದವರಿಗೆ ದಾರಿ ತೋರಿಸುವ ಕೆಲಸ ಮಾಡಿದ್ದೇವೆ ಎಂದರು.

# ಮಧ್ಯಪ್ರಾಚ್ಯ ಯುದ್ಧಕ್ಕೆ ವಿರಾಮ

ಪುಟ ೧ ➡ ಜಿ7 ಸಮ್ಮೇಳನದ ಬಳಿಕ ಫ್ರಾನ್ಸ್‌ನ ವರ್ಸೈಲೆಸ್ ಅರಮನೆಯಲ್ಲಿ ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಹಾಗೂ ಫ್ರಾನ್ಸ್ ಪ್ರಥಮ ಮಹಿಳೆ ಬ್ರಿಗಿಟ್ಟೆ ಮ್ಯಾಕ್ರಾನ್ ಬುಧವಾರ ತಡರಾತ್ರಿ ಆಯೋಜಿಸಿದ್ದ ದಿಡಗಳಿಗೂ ಮುನ್ನ ಟ್ರಂಪ್ ಮಧ್ಯಂತರ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಈ ವೇಳೆ ಅಮೆರಿಕ ಗೃಹ ಸಚಿವಾಲಯ ಕಾರ್ಯದರ್ಶಿ ಮಾರ್ಕೊ ರುಬಿಯೊ ಜತೆಗಿದ್ದರು. ಟ್ರಂಪ್ ಸಹಿ ಹಾಕುತ್ತಲೇ ಮ್ಯಾಕ್ರಾನ್, ಶಾಭಾಷ್ ಉತ್ತಮ ಕೆಲಸ ಮಾಡಿದ್ದೀರಿ ಎಂದು ಪ್ರತಿಕ್ರಿಯಿಸಿದ್ದಾರೆ.

ಮಧ್ಯಂತರ ಒಪ್ಪಂದಕ್ಕೆ ಇರಾನ್ ಅಧ್ಯಕ್ಷ ಪೆಜೆಶ್ಕಿಯನ್ ಬುಧವಾರ ಸಹಿ ಮಾಡಿದ್ದರೂ, ಇರಾನ್ ಅಧಿಕೃತ ಹೇಳಿಕೆಗಳನ್ನು ನೀಡಿರಲಿಲ್ಲ, ಶುಕ್ರವಾರ ಜಿನೀವಾದಲ್ಲಿ ಒಪ್ಪಂದದ ಸಹಿ ಹಾಕುವ ಕಾರ್ಯಕ್ರಮ ನಡೆಯಲಿದೆ.

ಒಪ್ಪಂದ ಉಲ್ಲಂಘಿಸಿದ ಲೆಬನಾನ್-ಇಸ್ರೇಲ್: ಲೆಬನಾನ್ ವಿಚಾರದಲ್ಲಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಜವಾಬ್ದಾರಿಯುತ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಟ್ರಂಪ್ ಟೀಕಿಸಿದ್ದರು. ಇದಲ್ಲದೆ, ಮಧ್ಯಂತರ ಒಪ್ಪಂದವನ್ನು ಉಲ್ಲಂಘಿಸಿ ಲೆಬನಾನ್ ಮೇಲೆ ಇಸ್ರೇಲ್ ದಾಳಿ ನಡೆಸಿದೆ. ದಾಳಿಗೆ ಮೂವರು ಲೆಬನಾನ್ ನಾಗರಿಕರು ಬಲಿಯಾಗಿದ್ದಾರೆ.

### 14 ಷರತ್ತುಗಳ ಒಪ್ಪಂದ

ಮಧ್ಯಂತರ ಒಪ್ಪಂದದಲ್ಲಿ 14 ಷರತ್ತುಗಳಿವೆ. ಮಧ್ಯಂತರ ಒಪ್ಪಂದ ಪ್ರಕಾರ, 60 ದಿನಗಳ ಕಾಲ ಇರಾನ್ ಶುಲ್ಕ ವಸೂಲಿ ಮಾಡದೆ ಹಾರ್ಮುಜ್ ತೆರೆಯಬೇಕು. ಅದೇ ರೀತಿ ಇಸ್ರೇಲ್ ಲೆಬನಾನ್ ಮೇಲಿನ ದಾಳಿ ನಿಲ್ಲಿಸಬೇಕು. 30 ದಿನಗಳೊಳಗೆ ಅಮೆರಿಕ ತನ್ನ ಸೇನೆ ಸಂಪೂರ್ಣ ಹಿಂಪಡೆಯಬೇಕು. ಇರಾನ್ 300 ಕೆ.ಜಿ. ಅಣು ಶೇಖರಣೆ ಬಳಸುವಂತಿಲ್ಲ ಮತ್ತು ಮುಂದಿನ 15 ವರ್ಷಗಳ ಕಾಲ ಶೇ.3.67ಕ್ಕಿಂತ ಅಧಿಕ ಯುರೇನಿಯಂ ಪುಷ್ಟೀಕರಿಸುವಂತಿಲ್ಲ,

**ವರ್ಸೈಲೆಸ್‌ನಲ್ಲಿ ಐತಿಹಾಸಿಕ ಸಹಿ!:** 1919ರ ಜೂ.28ರಂದು ಮೊದಲ ಮಹಾಯುದ್ಧದ ಶಾಂತಿ ಒಪ್ಪಂದವನ್ನು ವರ್ಸೈಲೆಸ್‌ನಲ್ಲಿ ಸಹಿ ಹಾಕಲಾಗಿತ್ತು. ಅಮೆರಿಕ-ಇರಾನ್ ಸೇರಿ ಹಲವು ಯುದ್ಧಗಳನ್ನು ಕೊನೆಗೊಳಿಸಲು ವರ್ಸೈಲೆಸ್‌ನಲ್ಲಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

### ತೈಲ ಬೆಲೆ ಭಾರೀ ಇಳಿಕೆ

ತಾತ್ಕಾಲಿಕ ಒಪ್ಪಂದ ಹಿನ್ನೆಲೆ ಜಾಗತಿಕ ಕಚ್ಚಾ ತೈಲ ಬೆಲೆ ಭಾರೀ ಇಳಿಕೆಯಾಗಿದೆ. ಬ್ರೆಂಟ್ ಕಚ್ಚಾ ತೈಲ ಪ್ರತಿ ಬ್ಯಾರೆಲ್‌ಗೆ 78 ಡಾಲರ್‌ನಂತೆ ಮಾರಾಟವಾಗಿದೆ. ಜಾಗತಿಕ ಷೇರು ಪೇಟೆ ಧನಾತ್ಮಕ ಟ್ರೆಂಡ್ ತೋರಿಸಿದೆ.

### ಹಾರ್ಮುಜ್ ಶೀಘ್ರ ತೆರೆಯಲಿದೆ: ಪಾಕ್

ಅಮೆರಿಕ-ಇರಾನ್ ನಡುವಿನ ಮಧ್ಯಂತರ ಒಪ್ಪಂದಕ್ಕೆ ಖಾತರಿದಾರರಾಗಿ ಸಹಿ ಹಾಕಿದ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್, ಹಾರ್ಮುಜ್ ಜಲಸಂಧಿಯನ್ನು ಶೀಘ್ರ ತೆರೆಯಲಾಗುವುದು ಎಂದು ಹೇಳಿದ್ದಾರೆ. ಇದೇ ಸಂದರ್ಭ ಅಧ್ಯಕ್ಷ ಟ್ರಂಪ್ ಮತ್ತು ಇರಾನ್ ಸರ್ವೋಚ್ಚ ನಾಯಕ ಮೊಜ್ತಬಾ ಖಮೇನಿ ಅವರಿಗೆ ಷರೀಫ್ ಕೃತಜ್ಞತೆ ಸಲ್ಲಿಸಿದ್ದಾರೆ.

**ಇದೇ ಅಂತಿಮ ಒಪ್ಪಂದವಲ್ಲ, ಒಂದು ವೇಳೆ ಇರಾನ್ ಷರತ್ತುಗಳನ್ನು ಪಾಲಿಸದಿದ್ದರೆ ಅಥವಾ ನಮ್ಮ ನಿರೀಕ್ಷೆಯಂತೆ ನಡೆದುಕೊಳ್ಳದಿದ್ದರೆ ಮತ್ತೆ ಬಾಂಬ್ ದಾಳಿ ನಡೆಸುತ್ತೇವೆ.**
■ ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

# ಕಾಂಗ್ರೆಸ್ 5, ಬಿಜೆಪಿ 2



ಆರ್. ರಘು ಕೌಟಿಲ್ಯ | ಲಿಂಗರಾಜ ಪಾಟೀಲ | ಬಿ.ಕೆ ಹರಿಪ್ರಸಾದ್ | ಪಿ.ವಿ. ಮೋಹನ್ | ಬಿ.ಎಸ್. ಶಿವಣ್ಣ | ತಿಪ್ಪಣ್ಣಪ್ಪ ಕಮಕನೂರ | ವಿನಯ್ ಕಾರ್ತಿಕ್

ಪುಟ ೧ ➡ ಬಿಜೆಪಿ ವಿಧಾನಸಭೆಯಲ್ಲಿ 62 ಸದಸ್ಯ ಬಲ ಹೊಂದಿದ್ದು, ತನ್ನ ಇಬ್ಬರು ಅಭ್ಯರ್ಥಿಗಳಿಗೆ ತಲಾ 30 ಮತಗಳ ಹಂಚಿಕೆ ಮಾಡಿತ್ತು. ಉಳಿದ ಎರಡು ಮತಗಳನ್ನು ಜೆಡಿಎಸ್ ಅಭ್ಯರ್ಥಿಗೆ ಹಾಕಲು ಸೂಚಿಸಲಾಗಿತ್ತು. ಆದರೆ, ಬಿಜೆಪಿಯ ಲಿಂಗರಾಜ್ ಪಾಟೀಲ್ ಅವರಿಗೆ ಹಂಚಿಕೆಯಾಗಿದ್ದಕ್ಕಿಂತ ಮೂರು ಮತಗಳು ಕಡಿಮೆ ಬಿದ್ದಿವೆ. ಜೆಡಿಎಸ್ 18 ಶಾಸಕರಿದ್ದರೂ ಪಕ್ಷದ ಅಭ್ಯರ್ಥಿಗೆ ಕೇವಲ 14 ಮತಗಳಷ್ಟೇ ಚಲಾವಣೆಯಾಗಿವೆ. ಇಲ್ಲಿ ಉಭಯ ಪಕ್ಷಗಳ ಶಾಸಕರು ಅಡ್ಡ ಮತದಾನ ಮಾಡಿರುವುದು ಸ್ಪಷ್ಟವಾಗಿದೆ. ಇದರಿಂದ ಎರಡನೇ ಪ್ರಾಶಸ್ತ್ಯದ ಮತಗಳೂ ಸೇರಿ 28 ಮತಗಳ ನಿರೀಕ್ಷೆಯಲ್ಲಿದ್ದ ಕಾಂಗ್ರೆಸ್‌ನ ಐದನೇ ಅಭ್ಯರ್ಥಿ ನಿರೀಕ್ಷೆ ಮೀರಿ 32 ಮೊದಲ ಪ್ರಾಶಸ್ತ್ಯದ ಮತಗಳನ್ನೇ ಪಡೆದುಕೊಂಡಿದ್ದಾರೆ.

**ಬಿಜೆಪಿಯ ಒಂದು ಮತ ಅಸಿಂಧು:** ಮತದಾನ ಪ್ರಕ್ರಿಯೆಯ ಕುರಿತು ತರಬೇತಿ, ಪ್ರಾತ್ಯಕ್ಷಿಕೆಯ ನಂತರವೂ ಬಿಜೆಪಿಯ ಶಾಸಕರೊಬ್ಬರ ಮತ ಅಸಿಂಧುವಾಗಿದೆ. ರಘು ಕೌಟಿಲ್ಯ ಅವರಿಗೆ 30 ಮತಗಳ ಹಂಚಿಕೆಯಾಗಿತ್ತು. ಆದರೆ, ಅವರಿಗೆ 29 ಮತಗಳಷ್ಟೇ ಬಿದ್ದಿವೆ. ಅವರ ಪಾಲಿನ ಒಂದು ಮತ ಅಸಿಂಧುವಾಗಿದೆ.

ಕರ್ನಾಟಕ ವಿಧಾನಸಭೆಯು ಒಟ್ಟು 224 ಸ್ಥಾನಗಳ ಪೈಕಿ ಸದ್ಯ 222 ಸದಸ್ಯರಿದ್ದಾರೆ. ಮಾಜಿ ಸಚಿವ ಡಿ.ಸುಧಾಕರ್ ನಿಧನ ಹಾಗೂ ಕಾಂಗ್ರೆಸ್‌ನ ವಿನಯ್ ಕುಲಕರ್ಣಿ ಅನರ್ಹತೆಯಿಂದ 2 ಸ್ಥಾನಗಳು ತೆರವಾಗಿದ್ದವು. ಅಭ್ಯರ್ಥಿಯ ಗೆಲುವಿಗೆ ಮೊದಲ ಪ್ರಾಶಸ್ತ್ಯದಲ್ಲಿ 28 ಮತಗಳ(27.63) ಅಗತ್ಯವಿತ್ತು.

ಬೆಳಗ್ಗೆ 9ರಿಂದ ಸಂಜೆ 4 ಗಂಟೆಯವರೆಗೆ ವಿಧಾನಸೌಧದ ಕೊಠಡಿ ಸಂಖ್ಯೆ 121ರಲ್ಲಿ ಮತದಾನ ನಿಗದಿಯಾಗಿತ್ತು. ಬಳಿಕ ಮತಪೆಟ್ಟಿಗೆಯನ್ನು ಸೀಲ್ ಮಾಡಲಾಯಿತು. ಸಂಜೆ 5.05ರಿಂದ ಮತ ಎಣಿಕೆ ಪ್ರಕ್ರಿಯೆ ಪ್ರಾರಂಭವಾಯಿತು. ಮೊದಲು ಮತಗಳ ಸಿಂಧುತ್ವವನ್ನು ಪರಿಶೀಲಿಸಿದಾಗ ಒಂದು ಮತ ಅಸಿಂಧುವಾಗಿರುವುದು ಪತ್ತೆಯಾಯಿತು. ತರುವಾಯ ಅಭ್ಯರ್ಥಿಗಳು ಪಡೆದಿರುವ ಮತಗಳ ಎಣಿಕೆ ಮಾಡಲಾಯಿತು.

ಕರ್ನಾಟಕ ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಅವರು ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು. ಚುನಾವಣಾ ಫಲಿತಾಂಶ ಘೋಷಿಸಿದ ಅವರು ಗೆಲುವು ಸಾಧಿಸಿದ ಅಭ್ಯರ್ಥಿಗಳಿಗೆ ಪ್ರಮಾಣಪತ್ರ ಹಸ್ತಾಂತರಿಸಿದರು.

## ಬಂಧಿತರಿಗೆ ಪಾಕ್ ಉಗ್ರ ಸಂಪರ್ಕ

ಪುಟ ೧ ➡ ಮತ್ತೋರ್ವ ಆರೋಪಿಯನ್ನು ಗುರುವಾರ ಬಂಧಿಸಲಾಗಿದೆ.

**ಶಿಟಿಕೆ ಒಡೆದು ಪರಾರಿ:** ಕೋಟ್ವಾಲಿ ಪೊಲೀಸ್ ಠಾಣೆಯಲ್ಲಿ ವಿಚಾರಣೆ ನಡೆಯುತ್ತಿದ್ದ ವೇಳೆ ಸೈಫ್ ಅಸ್ಲಾಂ ಶೌಚಾಲಯಕ್ಕೆ ಹೋಗುವ ನೆಪದಲ್ಲಿ ಕಿಟಕಿ ಒಡೆದು ಪರಾರಿಯಾಗಿದ್ದ. ಸಿಸಿಟಿವಿ ದೃಶ್ಯಾವಳಿಗಳ ಆಧಾರದ ಮೇಲೆ ಪೊಲೀಸರು ಆತನನ್ನು ಪತ್ತೆಹಚ್ಚಿ ಚಾರ್ನಿ ಪ್ರದೇಶದ ಟೋಲ್ ಪ್ಲಾಜಾ ಸಮೀಪ ಬಂಧಿಸಿದ್ದಾರೆ.

**ಗುಂಡಿನ ಚಕಮಕಿ:** ಬಂಧಿತನನ್ನು ವಾಪಸ್ ಕರೆತರುತ್ತಿದ್ದಾಗ ಆತ ಪೊಲೀಸ್ ಸಿಬ್ಬಂದಿಯಿಂದ ಶಸ್ತ್ರ ಕಿತ್ತುಕೊಂಡು 2-3 ಸುತ್ತು ಗುಂಡು ಹಾರಿಸಿದ್ದಾನೆ. ಪ್ರತಿಯಾಗಿ ಪೊಲೀಸರು ನಡೆಸಿದ ಗುಂಡಿನ ದಾಳಿಯಲ್ಲಿ ಆತನ ಕಾಲಿಗೆ ಗಾಯವಾಗಿದೆ.

**ಬಿಜೆಪಿ ಆಕ್ರೋಶ:** ಮಾಜಿ ಮುಖ್ಯಮಂತ್ರಿ ರಘುವರ್ ದಾಸ್ ಈ ದಾಳಿಯನ್ನು ಖಂಡಿಸಿದ್ದು, ಇದು ರಾಜ್ಯ ಸರ್ಕಾರದ ತುಷ್ಟೀಕರಣ ಹಾಗೂ ಮತಬ್ಯಾಂಕ್ ರಾಜಕೀಯದ ಪರಿಣಾಮ ಎಂದು ಆರೋಪಿಸಿದ್ದಾರೆ. ರಾಜ್ಯದ ಕಾನೂನು ಸುವ್ಯವಸ್ಥೆ ಬಗ್ಗೆ ಅವರು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ.

### ಆರೋಪಿಗಳ ಗುರುತು ಬಹಿರಂಗ ಪಡಿಸಿ: ವಿಹಿಂಪ

**• ಹೊಸದಿಲ್ಲಿ:** ರಾಂಚಿಯಲ್ಲಿರುವ ಆರ್‌ಎಸ್‌ಎಸ್ ಕಚೇರಿಯ ಮೇಲೆ ನಡೆದ ಪೆಟ್ರೋಲ್ ಬಾಂಬ್ ದಾಳಿ ಪ್ರಕರಣದ ಆರೋಪಿಗಳ ಹೆಸರು ಕೂಡಲೇ ಬಹಿರಂಗಪಡಿಸಬೇಕು ಎಂದು ವಿಶ್ವ ಹಿಂದೂ ಪರಿಷತ್(ವಿಹಿಂಪ) ಗುರುವಾರ ಒತ್ತಾಯಿಸಿದೆ. ಈ ಘಟನೆಯು ಕಾಂಗ್ರೆಸ್‌ನ ಆರ್‌ಎಸ್‌ಎಸ್ ವಿರೋಧಿ ಭಾವನೆಯಿಂದ ಪ್ರೇರಿತವಾಗಿದೆಯೇ ಎಂಬ ವಿಚಾರದ ಬಗ್ಗೆಯೂ ತನಿಖೆ ನಡೆಸುವಂತೆ ವಿಹಿಂಪ ಕೋರಿದೆ. ಆರ್‌ಎಸ್‌ಎಸ್ ಕಚೇರಿ ಮೇಲೆ ದಾಳಿ ನಡೆದು 36 ಗಂಟೆಗಳು ಕಳೆದರೂ, ರಾಂಚಿ ಪೊಲೀಸರು ಇನ್ನೂ ಆರೋಪಿಗಳ ಗುರುತನ್ನು ಬಹಿರಂಗಪಡಿಸಿಲ್ಲ ಏಕೆ ಎಂದು ವಿಹಿಂಪ ರಾಷ್ಟ್ರೀಯ ವಕ್ತಾರ ವಿನೋದ್ ಬನ್ಸಾಲ್ ಹೇಳಿಕೆಯಲ್ಲಿ ಪ್ರಶ್ನಿಸಿದ್ದಾರೆ.

## ತಂತ್ರಜ್ಞಾನ ಎಲ್ಲರಿಗೂ ತಲುಪಲಿ

ಪುಟ ೧ ➡ ಭಾರತವು ತಂತ್ರಜ್ಞಾನದ ಪ್ರಜಾಪ್ರಭುತ್ವೀಕರಣವನ್ನು ನಂಬುತ್ತದೆ ಎಂದು ಮೋದಿ ಹೇಳಿದರು.ಎಐ ಮಾನವ ಜೀವನವನ್ನು ಸುಧಾರಿಸಬೇಕು, ಅವಕಾಶಗಳನ್ನು ವಿಸ್ತರಿಸಬೇಕು, ಆರ್ಥಿಕ ಬೆಳವಣಿಗೆಗೆ ನೆರವಾಗಬೇಕು ಹಾಗೂ ಪರಿಸರ ಸಂರಕ್ಷಣೆಯಲ್ಲಿಯೂ ಪಾತ್ರವಹಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

**ಡಿಜಿಟಲ್ ಭಾರತಕ್ಕೆ ಜಾಗತಿಕ ಮೆಚ್ಚುಗೆ:** ಕಳೆದ ಹತ್ತು ವರ್ಷಗಳಲ್ಲಿ ಭಾರತವು ತಂತ್ರಜ್ಞಾನ ಆಧಾರಿತ ವೇಗದ ಪರಿವರ್ತನೆಯನ್ನು ಕಂಡಿದೆ. ವಿಶ್ವದ ಅತಿದೊಡ್ಡ ಡಿಜಿಟಲ್ ಗುರುತಿನ ವ್ಯವಸ್ಥೆ, ಡಿಜಿಟಲ್ ಪಾವತಿ ವ್ಯವಸ್ಥೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಭಾರತ ಮಾದರಿಯಾಗಿದೆ ಎಂದರು.ಜಾಗತಿಕ ಡಿಜಿಟಲ್ ವಹಿವಾಟುಗಳ ಅರ್ಧಕ್ಕಿಂತ ಹೆಚ್ಚು ಭಾರತದಲ್ಲೇ ನಡೆಯುತ್ತಿವೆ. ಹಣಕಾಸು ಸೇವೆಗಳು, ಶಿಕ್ಷಣ, ಟೆಲಿಮೆಡಿಸಿನ್, ಕೃಷಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ತಂತ್ರಜ್ಞಾನವನ್ನು ದೊಡ್ಡ ಪ್ರಮಾಣದಲ್ಲಿ ಬಳಸಲಾಗುತ್ತಿದೆ ಎಂದು ಹೇಳಿದರು.

### ಹೂಡಿಕೆದಾರರಿಗೆ ಆಹ್ವಾನ

ಭಾರತವು ಮುಕ್ತ ಸಮಾಜವಾಗಿದ್ದು, ವಿಶ್ವದ ಅತಿದೊಡ್ಡ ಪ್ರತಿಭಾ ಸಂಪನ್ಮೂಲವನ್ನು ಹೊಂದಿದೆ. ನಿಯಮಗಳನ್ನು ಸರಳಗೊಳಿಸಲಾಗಿದ್ದು, ಉದ್ಯಮ ಸ್ನೇಹಿ ವಾತಾವರಣ ನಿರ್ಮಿಸಲಾಗಿದೆ. 50 ಬಿಲಿಯನ್ ಡಾಲರ್‌ಗಿಂತ ಹೆಚ್ಚಿನ ಪ್ರೋತ್ಸಾಹಧನ ಯೋಜನೆಗಳ ಮೂಲಕ ಖಾಸಗಿ ಉದ್ಯಮಗಳಿಗೆ ಬೆಂಬಲ ನೀಡಲಾಗುತ್ತಿದೆ ಎಂದರು. ಸರ್ಕಾರ ಅವಕಾಶ ಕಲ್ಪಿಸುತ್ತದೆ, ಕೈಗಾರಿಕೆಗಳು ನಾವೀನ್ಯತೆ ತರುತ್ತವೆ, ಸ್ಟಾರ್ಟಪ್‌ಗಳು ಹೊಸ ದಿಕ್ಕು ತೋರಿಸುತ್ತವೆ. ಜಾಗತಿಕ ಪಾಲುದಾರರು ನಮ್ಮೊಂದಿಗೆ ಬೆಳೆಯಬಹುದು. ಭಾರತದಲ್ಲಿ ಹೂಡಿಕೆ ಮಾಡಿ, ಎಲ್ಲರ ಅಭಿವೃದ್ಧಿಗೆ ಕೈಜೋಡಿಸಿ ಎಂದು ಪ್ರಧಾನಿ ಮೋದಿ ಕರೆ ನೀಡಿದರು.

## ಅಡ್ಡ ಮತದಾನ ಬಗ್ಗೆ ಪಕ್ಷ ಪರಿಶೀಲನೆ: ಬಿವೈವಿ

**• ಬೆಂಗಳೂರು:** ಇಂದು ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನವಾಗಿದ್ದರ ಬಗ್ಗೆ ಪಕ್ಷ ಪರಿಶೀಲನೆ ಮಾಡಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ವಿಧಾನಪರಿಷತ್ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳಿಗೆ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಅಭಿನಂದಿಸಿ ಅವರು ಮಾಧ್ಯಮಗಳೊಂದಿಗೆ ಮಾತನಾಡಿದರು. ಬಿಜೆಪಿಯ ಅಭ್ಯರ್ಥಿಗಳಾದ ರಘು ಕೌಟಿಲ್ಯ ಹಾಗೂ ಲಿಂಗರಾಜ ಪಾಟೀಲ್ ಅವರು, ಜಯಶೀಲರಾಗಿದ್ದು ಅವರಿಗೆ ಅಭಿನಂದನೆ. ಲಿಂಗರಾಜ ಪಾಟೀಲ್ ಅವರ ಮೂರು ಮತಗಳು ಅಡ್ಡ ಮತದಾನ ಆಗಿವೆ. ರಘು ಅವರ ಮೂವತ್ತು ಮತಗಳಲ್ಲಿ ಒಂದು ಮತ ಅಸಿಂಧು ಆಗಿದೆ. ಇದನ್ನು ಯಾರು ಮಾಡಿದ್ದಾರೆ, ಯಾಕೆ ಮಾಡಿದ್ದಾರೆ ಎಂಬುದನ್ನು ಮುಂದೆ ಪರಿಶೀಲನೆ ನಡೆಸಲಾಗುವುದು ಹಾಗೂ ಸೂಕ್ತ ತೀರ್ಮಾನವನ್ನು ಪಕ್ಷ ಕೈಗೊಳ್ಳಲಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಹರೀಶ್ ಪೂಂಜ, ಮಹೇಶ್ ಟೆಂಗಿನಕಾಯಿ, ವಿಧಾನಪರಿಷತ್ ಸದಸ್ಯ ಕೇಶವ ಪ್ರಸಾದ್, ಮಾಜಿ ಸಂಸದ ಎಸ್. ಮುನಿಸ್ವಾಮಿ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ ಉಪಸ್ಥಿತರಿದ್ದರು.

## ಉದ್ಧವ್ ಶಿವಸೇನೆಗೆ ಮತ್ತೊಂದು ಆಘಾತ

ಪುಟ ೧ ➡ **ನಾಳೆ ಏಕನಾಥ್ ಶಿಂಧೆ ಭೇಟಿ:** ಶನಿವಾರ ಮತ್ತೆ ಏಕನಾಥ್ ಶಿಂಧೆ ಅವರನ್ನು ಭೇಟಿಯಾಗಲಿರುವ ಬಂಡಾಯ ಸಂಸದರು, ಸ್ಪೀಕರ್‌ಗೆ ಸಲ್ಲಿಸಿರುವ ಪತ್ರದ ವಿವರಗಳನ್ನು ಬಹಿರಂಗಪಡಿಸುವ ಸಾಧ್ಯತೆ ಇದೆ. ರಾಜಕೀಯ ವಲಯದಲ್ಲಿ ಅವರ ಪಕ್ಷಾಂತರಕ್ಕೆ ಶೀಘ್ರವೇ ಅಧಿಕೃತ ಮಾನ್ಯತೆ ಸಿಗಬಹುದು ಎಂಬ ಚರ್ಚೆ ನಡೆಯುತ್ತಿದೆ.

**ಶೋಕಾಸ್ ನೋಟಿಸ್ ಜಾರಿ:** ಇದಕ್ಕೆ ಪ್ರತಿಯಾಗಿ ಉದ್ಧವ್ ಠಾಕ್ರೆ ಬಣವು, ಆರು ಸಂಸದರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿದೆ. ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವ ಆರೋಪದ ಅನ್ವಯ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ. ಅಲ್ಲದೆ, ಪಕ್ಷ ತೊರೆಯುವ ಹಾಗೂ ಆಸನ ಬದಲಾವಣೆ ಕುರಿತ ಅವರ ಬೇಡಿಕೆಗಳನ್ನು ತಿರಸ್ಕರಿಸುವಂತೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಮನವಿ ಮಾಡಲು ನಿರ್ಧರಿಸಿದೆ. ಪಕ್ಷದ ಸಭೆಗೆ ಹಾಜರಾಗುವಂತೆ ನೀಡಿದ್ದ ವಿಪ್ ಅನ್ನು ಆರು ಸಂಸದರು ನಿರ್ಲಕ್ಷಿಸಿದ ಪರಿಣಾಮ, ಠಾಕ್ರೆ ಬಣದ ಅಸಮಾಧಾನ ಮತ್ತಷ್ಟು ಹೆಚ್ಚಿದೆ. ಪ್ರಸ್ತುತ ಉದ್ಧವ್ ಠಾಕ್ರೆ ಬಣದ ಒಂಬತ್ತು ಲೋಕಸಭಾ ಸದಸ್ಯರ ಪೈಕಿ, ಸಭೆಗೆ ಕೇವಲ ಮೂವರು ಮಾತ್ರ ಹಾಜರಾಗಿದ್ದರು.

## ಫಲವತ್ತಾದ ಭೂಮಿಯಲ್ಲಿ ಟೌನ್‌ಶಿಪ್ ಕೈಬಿಡಿ: ಸಂಸದ

• **ಕುಣಿಗಲ್:** ಬಿಡದಿ ಭಾಗದಲ್ಲಿ ಅಡಿಕೆ, ತೆಂಗು, ರೇಷ್ಮೆ ತೋಟಗಳಿದ್ದು, ಹೈನುಗಾರಿಕೆ ಪ್ರಮುಖ ಆಧಾರವಾಗಿದೆ. ಇಲ್ಲಿನ ರೈತರು ಪ್ರತಿ ತಿಂಗಳು 6 ಲಕ್ಷ ಲೀಟರ್ ಹಾಲು ಡೇರಿಗೆ ಹಾಕುತ್ತಿದ್ದು, ಹೈನುಗಾರಿಕೆಯಿಂದ 30 ಕೋಟಿ ರೂ. ಹಾಗೂ ರೇಷ್ಮೆಯಿಂದ 35 ಕೋಟಿ ರೂ. ವಾರ್ಷಿಕ ಆದಾಯ ಪಡೆಯುತ್ತಿದ್ದಾರೆ. ಇಂತಹ ಹಸಿರು ಭೂಮಿ



ನಾಶಪಡಿಸುವುದು ಸರಿಯಲ್ಲ ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ಕುಣಿಗಲ್ ತಾಲೂಕಿನ ಹುತ್ರಿದುರ್ಗ ಹೋಬಳಿಯ ಕೊಂದಲಗೆರೆ ಗ್ರಾಮದಲ್ಲಿ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ 5 ಲಕ್ಷ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಬಸ್ ತಂಗುದಾಣ ಉದ್ಘಾಟಿಸಿ ಅವರು ಮಾತನಾಡಿದರು. ಬಿಡದಿಯಲ್ಲಿ ಫಲವತ್ತಾದ ಕೃಷಿ ಭೂಮಿ ವಶಪಡಿಸಿಕೊಂಡು ಟೌನ್‌ಶಿಪ್ ಮಾಡಲು ಹೊರಟಿರುವುದಕ್ಕೆ ಸಂಸದರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಬೆಂಗಳೂರಿನ ಶಿವರಾಮ ಕಾರಂತ, ವಿಶ್ವೇಶ್ವರಯ್ಯ, ಕೆಂಪೇಗೌಡ ಲೇಔಟ್‌ಗಳಲ್ಲಿ ನಿವೇಶನಗಳು ಹಾಗೂ ಸುತ್ತಮುತ್ತ ಸುಮಾರು ಮೂರು ಲಕ್ಷ ಅಪಾರ್ಟ್‌ಮೆಂಟ್‌ಗಳು ಖಾಲಿ ಇವೆ. ಹಿಂದೆ ದೇವನಹಳ್ಳಿಯಲ್ಲಿ ಟೌನ್‌ಶಿಪ್ ಮಾಡಲು ಹೊರಟಾಗ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಆಗಿನ ಸಿಎಂ ಸಿದ್ದರಾಮಯ್ಯ ಕೈಬಿಟ್ಟಿದ್ದರು. ಬಿಡದಿಯಲ್ಲೂ ಮೊದಲು ಟೌನ್‌ಶಿಪ್‌ಗೆ ವಿರೋಧ ಬಂದಾಗ ಕುಮಾರಸ್ವಾಮಿ, ಯಡಿಯೂರಪ್ಪ, ಜಗದೀಶ್ ಶೆಟ್ಟರ್, ಸದಾನಂದ ಗೌಡರು ಯೋಜನೆಯನ್ನು ಕೈಬಿಟ್ಟಿದ್ದರು. ಫಲವತ್ತಾದ ಭೂಮಿಯಲ್ಲಿ ಟೌನ್‌ಶಿಪ್ ಮಾಡುವ ಅಧಿಸೂಚನೆಯನ್ನು ಕೈಬಿಡುವ ಮೂಲಕ ಈ ಭಾಗದ ರೈತರಿಗೆ ದೊಡ್ಡ ಕೊಡುಗೆ ನೀಡಿ ಎಂದು ಸಂಸದ ಡಾ. ಸಿ.ಎನ್. ಮಂಜುನಾಥ್ ಹೇಳಿದರು.




ಧಾರವಾಡ ಜಿಲ್ಲೆಯಲ್ಲಿ ಮಳೆಯಾಗದೆ ಬಿಸಿಲಿನ ಬೇಗೆಗೆ ಬಿತ್ತನೆ ಒಣಗುತ್ತಿರುವುದು.

## ಕ್ರಸ್ಟ್‌ಗೇಟ್ ಲೋಕಾರ್ಪಣೆ ಸ್ಥಳ ಪರಿಶೀಲಿಸಿದ ಸಚಿವ

• **ಕೊಪ್ಪಳ:** ರಾಜ್ಯ ಜಲ ಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರು ಪೂರ್ವ ನಿಗದಿಯಂತೆ ಜೂನ್ 18ರಂದು ಕೊಪ್ಪಳ ಜಿಲ್ಲೆಗೆ ಆಗಮಿಸಿ, ತುಂಗಭದ್ರಾ ಜಲಾಶಯಕ್ಕೆ ಹೊಸದಾಗಿ ಅಳವಡಿಸಿದ ಕ್ರಸ್ಟ್ ಗೇಟ್‌ಗಳ ಉದ್ಘಾಟನಾ ಕಾರ್ಯಕ್ರಮದ ಸ್ಥಳ ಪರಿಶೀಲಿಸಿದರು.



ಮುನಿರಾಬಾದ್ ಗ್ರಾಮದ ಹೈಸ್ಕೂಲ್ ಗ್ರೌಂಡ್ ಆವರಣದಲ್ಲಿ ವೇದಿಕೆ ನಿರ್ಮಾಣದ ಸ್ಥಳ ವೀಕ್ಷಣೆ ನಡೆಸಿ, ಸುಗಮ ಸಂಚಾರಕ್ಕೆ ಸೂಕ್ತವಾದ ರಸ್ತೆ, ಬ್ಯಾರಿಕೇಡ್ ಅಳವಡಿಕೆ ಸೇರಿದಂತೆ ನಾನಾ ಸಿದ್ಧತೆಗಳ ಬಗ್ಗೆ ಸೂಚನೆ ನೀಡಿದರು. ಟಿಬಿ ಡ್ಯಾಮ್ ಆವರಣದಿಂದ ಮುನಿರಾಬಾದ್ ಶಾಲಾ ಮೈದಾನಕ್ಕೆ ಬಂದು ಹೋಗಲು ಅನುಕೂಲವಾಗುವಂತೆ ಯಾವ ರಸ್ತೆ ಸೂಕ್ತ ಎಂಬುದರ ಬಗ್ಗೆ ನೋಡಿಕೊಳ್ಳಲು ಸಚಿವರು ತಿಳಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಮುಖ್ಯಮಂತ್ರಿಗಳು ಮತ್ತು ನಾವು ಕೇಂದ್ರದ ಜಲ ಸಂಪನ್ಮೂಲ ಸಚಿವರಿಗೆ ಭೇಟಿ ಮಾಡಿ ಮಹದಾಯಿ, ಮೇಕೆದಾಟು ಯೋಜನೆ ಸೇರಿದಂತೆ ರಾಜ್ಯದ ನಾನಾ ನೀರಾವರಿ ಯೋಜನೆಗಳ ಬಗ್ಗೆ ಚರ್ಚಿಸಿದ್ದೇವೆ. ಕಳೆದ ವರ್ಷ ತುಂಗಭದ್ರಾ ಡ್ಯಾಂನ ಗೇಟ್ ಕೊಚ್ಚಿಹೋದಾಗ 19ನೇ ಗೇಟ್ ಸೇರಿದಂತೆ ಬೇರೆಲ್ಲ ಗೇಟ್‌ಗಳನ್ನು ಬದಲಾಯಿಸಲು ನಿರ್ಣಯಿಸಿ, ಆರಂಭಗೊಂಡ ಕಾಮಗಾರಿ ಈಗ ಪೂರ್ಣಗೊಂಡಿದೆ. ಇದಕ್ಕಾಗಿ 51 ಕೋಟಿ ರೂ. ಖರ್ಚಾಗಿದೆ. ಈ ಗೇಟ್‌ಗಳು 55ರಿಂದ 60 ವರ್ಷಗಳವರೆಗೆ ಬಾಳಿಕೆ ಬರುತ್ತವೆ ಎಂದು ತಿಳಿಸಿದರು. ಹೊಸ ಗೇಟ್‌ಗಳ ಲೋಕಾರ್ಪಣೆ ಸಮಾರಂಭಕ್ಕೆ ಕರ್ನಾಟಕ ಸೇರಿದಂತೆ ತೆಲಂಗಾಣ ಮತ್ತು ಆಂಧ್ರ ರಾಜ್ಯಗಳ ಮುಖ್ಯಮಂತ್ರಿಗಳು, ಸಚಿವರು, ಶಾಸಕರು ಆಗಮಿಸಲಿದ್ದಾರೆ.

## ಕಿರುಸುದ್ದಿ

### ದತ್ತಾಂಶ ಗೌಪ್ಯತೆಗೆ ಹೈಕೋರ್ಟ್ ನಿರ್ದೇಶನ

• **ಬೆಂಗಳೂರು:** ರಾಜ್ಯದಲ್ಲಿ ಜಾತಿಗಳ ಆರ್ಥಿಕ, ಸಾಮಾಜಿಕ ಸಮೀಕ್ಷೆ ನಡೆಸಿ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ವರದಿಯನ್ನು ಮುಚ್ಚಿದ ಲಕೋಟೆಯಿಂದ ತೆರೆಯದಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.ಸಮೀಕ್ಷೆಯ ಸಿಂಧುತ್ವವನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸೇರಿದಂತೆ ಹಲವು ಸಂಘಟನೆಗಳು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಆಗ ಅರ್ಜಿದಾರರ ಪರ ವಕೀಲರು, ಹಿಂದುಳಿದ ವರ್ಗಗಳ ಆಯೋಗ ಸಮೀಕ್ಷಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ.

### ಚನ್ನಕೇಶವ ಟೆಂಗರಿಕರ್ ತೀರ್ಪು ಕಾಯ್ದಿರಿಸಿದ ಹೈ

• **ಬೆಂಗಳೂರು:** ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ನಕಲಿ ಸಾಕ್ಷಿಗಳನ್ನು ಸೃಷ್ಟಿಸಿದ ಅಪರಾಧ ಸಂಬಂಧ ಏಳು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವ ಅಮಾನತುಗೊಂಡಿರುವ ಪೊಲೀಸ್ ಇನ್‌ಸ್ಪೆಕ್ಟರ್ ಚನ್ನಕೇಶವ ಟೆಂಗರಿಕರ್ ಶಿಕ್ಷೆ ಅಮಾನತುಪಡಿಸಿ, ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಪೂರ್ಣಗೊಳಿಸಿರುವ ಹೈಕೋರ್ಟ್ ಗುರುವಾರ ತೀರ್ಪು ಕಾಯ್ದಿರಿಸಿದೆ. ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಶಿಕ್ಷೆಯನ್ನು ಅಮಾನತ್ತಿನಲ್ಲಿರಿಸಿ ಜಾಮೀನು ಮಂಜೂರು ಮಾಡುವಂತೆ ಕೋರಿ ಚನ್ನಕೇಶವ ಟೆಂಗರಿಕರ್ ಸಲ್ಲಿಸಿರುವ ಮೇಲ್ಮನವಿ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಮೊಹಮ್ಮದ್ ನವಾಜ್ ಮತ್ತು ಜಿ.ಬಸವರಾಜ ಅವರ ನೇತೃತ್ವದ ವಿಭಾಗೀಯ ಪೀಠ ನಡೆಸಿತು. ಟೆಂಗರಿಕರ್ ಪರ ಹಿರಿಯ ವಕೀಲ ಪಿ.ಪಿ ಹೆಗ್ಡೆ ಅವರು, ವಿಚಾರಣೆ ನಡೆದಿದ ಹಾಗೂ ಸರಿಯಾಗಿ ತನಿಖೆ ನಡೆದಿಲ್ಲ ಎಂಬ ಆರೋಪ ಟೆಂಗರಿಕರ್ ವಿರುದ್ಧವಿದೆ. ಅದಕ್ಕೆ ಐಪಿಸಿ ಸೆಕ್ಷನ್ 201 ಮತ್ತು 218 ಅಡಿ ಗರಿಷ್ಠ ಏಳು ವರ್ಷ ಶಿಕ್ಷೆ ವಿಧಿಸಲಾಗಿದೆ. ಇವು ಜಾಮೀನುರಹಿತ ಪ್ರಕರಣಗಳಾಗಿವೆ. ಆದ್ದರಿಂದ ಜಾಮೀನು ಮಂಜೂರು ಮಾಡಬೇಕು. ವಿಚಾರಣಾ ಹಂತದಲ್ಲೂ ಟೆಂಗರಿಕರ್ ಅವರಿಗೆ ಜಾಮೀನು ಮಂಜೂರಾಗಿತ್ತು ಎಂದರು.

### ವರದಕ್ಷಿಣೆ: ಕುಕ್ಕರ್‌ನಲ್ಲಿ ಹೊಡೆದು ಪತ್ನಿ ಕೊಲೆ

• **ಕೋಲಾರ:** ವರದಕ್ಷಿಣೆ ತಂದಿಲ್ಲ ಎನ್ನುವ ಕಾರಣಕ್ಕೆ 2 ಮಕ್ಕಳ ತಾಯಿಯನ್ನು ತನ್ನ ಪತಿಯೇ ಕುಕ್ಕರ್‌ನಲ್ಲಿ ಹೊಡೆದು ಕೊಲೆ ಮಾಡಿರುವ ಘಟನೆ ಕೋಲಾರ ತಾಲೂಕಿನ ದೊಡ್ಡ ಹಸಾಳ ಗ್ರಾಮದಲ್ಲಿ ನಡೆದಿದೆ. ತಾಲೂಕಿನ ದೊಡ್ಡ ಹಸಾಳ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಸಹನಾ(24) ಪತಿಯಿಂದಲೇ ದಾರುಣವಾಗಿ ಕೊಲೆಯಾದ ಪತ್ನಿಯಾಗಿದ್ದಾಳೆ. ಡ್ರೈವರ್ ಆಗಿದ್ದ ಮಂಜುನಾಥ್ ಮದುವೆಯಾದ ಕೆಲ ದಿನಗಳಲ್ಲಿ ಗಲಾಟೆ ಮಾಡಿ ಮದುವೆಗೆ ಲಕ್ಷಾಂತರ ರೂಪಾಯಿ ಖರ್ಚಾಗಿದೆ ಎಂದು 2 ಲಕ್ಷ ಹಣ ಕೇಳಿ ಪಡೆದಿದ್ದಾನೆ. ಇತ್ತೀಚೆಗೆ ಮನೆ ಕಟ್ಟೋದಕ್ಕೆ ಎಂದು 10 ಲಕ್ಷಕ್ಕಾಗಿ ಡಿಮ್ಯಾಂಡ್ ಮಾಡಿದ್ದಾನೆ. ಈ ಮಧ್ಯೆ ಪ್ರತಿನಿತ್ಯ ಪದೇ ಪದೇ ಮನೆಯಲ್ಲಿ ಗಲಾಟೆ ನಡೆಯುತ್ತಿತ್ತು. ಆದರೆ ನಿನ್ನೆ ಗಲಾಟೆ ವಿಕೋಪಕ್ಕೆ ತಿರುಗಿ ಕುಕ್ಕರ್‌ನಲ್ಲಿ ತಲೆಗೆ ಹೊಡೆದು ಕೊಲೆ ಮಾಡಿದ್ದಾನೆ.

## ಮೇಕೆದಾಟು ಯೋಜನೆಯಿಂದ ಎರಡು ರಾಜ್ಯಗಳಿಗೂ ಹಿತ: ಸಿಎಂ

# ತ.ನಾಡು ಜತೆ ಚರ್ಚೆಗೆ ಸಿದ್ಧ

• **ಬೆಂಗಳೂರು:** ಮೇಕೆದಾಟು ಯೋಜನೆಯ ವಿಚಾರವಾಗಿ ತಮಿಳುನಾಡು ಜತೆಗೆ ಯಾವಾಗ ಬೇಕಾದರೂ ಮಾತನಾಡಲು ಸಿದ್ಧನಿದ್ದೇನೆ ಎಂದು ಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು. ಮೇಕೆದಾಟು ಯೋಜನೆ ದಕ್ಷಿಣ ಭಾರತದ ಹೃದಯದಂತ ಯೋಜನೆ. ಈ ಯೋಜನೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಹಿತ ಅಡಗಿದೆ ಎಂದು ಹೇಳಿದ್ದಾರೆ.

ವಿಧಾನಸೌಧದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಮೇಕೆದಾಟು ಕೇವಲ ನನ್ನ ಹೃದಯಕ್ಕೆ ಮಾತ್ರ ಹತ್ತಿರವಾಗಿಲ್ಲ, ಮೇಕೆದಾಟು ಯೋಜನೆ ಕರ್ನಾಟಕ ರಾಜ್ಯಕ್ಕಿಂತ ತಮಿಳುನಾಡಿಗೆ ಹೆಚ್ಚು ಅನುಕೂಲ ನೀಡಲಿದೆ. ತಮಿಳುನಾಡು ಪಾಲಿನ 177 ಟಿಎಂಸಿ ನೀರನ್ನು ಬಿಡಲು ನಾವು ಸಿದ್ಧವಾಗಿದ್ದೇವೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಆದೇಶವೂ ಇದೆ. ಈ ಯೋಜನೆ ತೀರ್ಮಾನವನ್ನು ಕೇಂದ್ರ ಜಲ ಆಯೋಗ ಮಾಡಬೇಕು ಎಂದು ಕೋರ್ಟ್ ತಿಳಿಸಿದೆ ಎಂದರು.

ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದ್ದು, ನಾವು ಕೃಷ್ಣಾದಿಂದ ನೀರನ್ನು ತರಲು ಸಾಧ್ಯವಿಲ್ಲ, ಹೀಗಾಗಿ ಕಾವೇರಿ ನಮ್ಮ ಮುಂದಿರುವ ಏಕೈಕ ಆಯ್ಕೆ ಎಂದು ತಿಳಿಸಿದರು. ತಮಿಳುನಾಡು, ಕರ್ನಾಟಕದವರು ಭಾರತೀಯರು. ನಾವು ಕಾವೇರಿ ನೀರು ಕುಡಿಯಬೇಕು. ತಮಿಳುನಾಡಿನಿಂದ ಇಲ್ಲಿಗೆ ಬಂದು ವ್ಯಕ್ತಿ ಮಾಡುತ್ತಿರುವ ಅನೇಕ ಜನರಿದ್ದಾರೆ. ಇಲ್ಲಿಂದ ಹೋಗಿ ಅಲ್ಲಿ ಕೆಲಸ ಮಾಡುತ್ತಿರುವವರೂ ಇದ್ದಾರೆ. ನಾವು ಅವರನ್ನು ಪ್ರತ್ಯೇಕಿಸುವುದಿಲ್ಲ, ಸಮತೋಲಿತ ಜಲಾಶಯದ ನಿರ್ಮಾಣದಿಂದ ಕಷ್ಟ ಕಾಲದಲ್ಲಿ ತಮಿಳುನಾಡಿನ ಪಾಲಿನ ನೀರನ್ನು ಹರಿಸಲು ನೆರವಾಗುತ್ತದೆ. ಅತಿ ಕಡಿಮೆ ವೆಚ್ಚದಲ್ಲಿ ಯೋಜನೆ ಆಗುವ ವಿಶ್ವಾಸವಿದೆ ಎಂದು ತಿಳಿಸಿದರು.





> ನಾವು ತಮಿಳುನಾಡಿನ ರೈತರ ಹಿತವನ್ನೂ ಕಾಪಾಡಬೇಕು. ಇದು ಸಮತೋಲಿತ ಜಲಾಶಯ. ಇಲ್ಲಿ ಒಂದೇ ಒಂದು ಬಕೆಟ್ ನೀರನ್ನೂ ನೀರಾವರಿಗೆ ಬಳಸುವುದಿಲ್ಲ, ಬೆಂಗಳೂರು ನಗರದ ಕುಡಿಯುವ ನೀರು ಪೂರೈಕೆಗೆ ಮಾತ್ರ ಬಳಸಲಾಗುವುದು.
> ■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

### ಎಲ್ಲಾ ಸಂಸದರ ಮೇಲೆ ವಿಶ್ವಾಸ: ಡಿಕೆಶಿ

ತಮಿಳುನಾಡಿನಲ್ಲಿ ನಿಮ್ಮ ಮೈತ್ರಿ ಇದೆ ಎಂದು ಕೇಳಿದಾಗ, ನಾವು ಅವರಿಗೆ ಏನು ಮನವಿ ಮಾಡಬೇಕೋ ಮನವಿ ಮಾಡುತ್ತೇವೆ. ಇಲ್ಲಿ ರಾಜಕಾರಣ ಏನಿಲ್ಲ, ಎರಡು ರಾಜ್ಯಗಳ ಜನರ ಹಿತ ಕಾಪಾಡಿಕೊಂಡು ಹೋಗೋಣ ಎಂದರು. ನಮ್ಮ ರಾಜ್ಯದಿಂದ ಆಯ್ಕೆಯಾಗಿರುವ ಕಾಂಗ್ರೆಸ್, ಬಿಜೆಪಿ, ದಳ ಎಲ್ಲಾ ಸಂಸದರು ಒಗ್ಗಟ್ಟಾಗಿ ನಮ್ಮ ರಾಜ್ಯದ ಹಿತ ಕಾಪಾಡುತ್ತಾರೆ ಎಂಬ ವಿಶ್ವಾಸ ನಮಗಿದೆ ಎಂದು ಸಿಎಂ ತಿಳಿಸಿದರು.

ಕಳೆದ ವರ್ಷ 400ಕ್ಕೂ ಹೆಚ್ಚು ಟಿಎಂಸಿ ಹೆಚ್ಚುವರಿ ನೀರು ಸಮುದ್ರ ಸೇರಿದೆ. ಅವರು ಕೆಳ ಹಂತದಲ್ಲಿ ಸಾಕಷ್ಟು ಅಣೆಕಟ್ಟು ನಿರ್ಮಾಣ ಮಾಡುತ್ತಿದ್ದು, ನಾವು ಯಾವುದಕ್ಕೂ ಆಕ್ಷೇಪ ವ್ಯಕ್ತಪಡಿಸಿಲ್ಲ, ಅವರ ನೆಲದಲ್ಲಿ ಅವರು ನಿರ್ಮಿಸಿಕೊಳ್ಳುತ್ತಿದ್ದಾರೆ.

ಇದೇ ವಿಚಾರ ಸುಪ್ರೀಂ ಕೋರ್ಟ್‌ನಲ್ಲೂ ಚರ್ಚೆಯಾಗಿದೆ. ಈ ಯೋಜನೆಗೆ ನಾವು ಯಾವುದೇ ಆರ್ಥಿಕ ನೆರವಾಗಲಿ ಇತರೆ ವಿಚಾರವನ್ನು ಕೇಳುತ್ತಿಲ್ಲ, ಈ ಯೋಜನೆಯಿಂದ 400 ಮೆ.ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವುದು ಇಂಧನ ಕ್ಷೇತ್ರದಲ್ಲಿ ನಮಗೆ ಅನುಕೂಲ ಮಾಡಿಕೊಡಲಿದೆ ಎಂದರು.

**ತ.ನಾಡಿನ ರಾಜಕೀಯದಲ್ಲಿ ಹಸ್ತಕ್ಷೇಪವಿಲ್ಲ:** ತಮಿಳುನಾಡಿನವರು ಕಳೆದ 40 ವರ್ಷಗಳಿಂದ ರಾಜಕೀಯ ಅಜೆಂಡಾ ಇಟ್ಟುಕೊಂಡಿದ್ದಾರೆ.

ಅವರ ರಾಜಕೀಯದಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ, ಈ ವಿಚಾರದ ಬಗ್ಗೆ ನ್ಯಾಯಾಲಯ ನಿರ್ದೇಶನ ನೀಡಿದೆ.

ತಮಿಳುನಾಡಿನಲ್ಲಿ ರಾಜಕೀಯ ಉಳಿವಿಗಾಗಿ ಧ್ವನಿ ಎತ್ತುತ್ತಿದ್ದಾರೆ. ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ತೀರ್ಪು ಬಂದ ಬಳಿಕ ಮತ್ತೇನಿದೆ? ಕರ್ನಾಟಕ 177 ಟಿಎಂಸಿ ನೀರು ಬಿಡಬೇಕು ಎಂದು ನೀಡಿದ ನಿರ್ದೇಶನವನ್ನು ನಾವು ಒಪ್ಪಿಕೊಳ್ಳಲಿಲ್ಲವೇ ಎಂದರು.

## ಕ್ಷೀರ ಭಾಗ್ಯ, ಉಪಾಹಾರ | ಅನುದಾನ ಬಿಡುಗಡೆ

# ಅಕ್ರಮ ತಡೆಗೆ ಸೂಚನೆ

• **ಬೆಂಗಳೂರು:** ರಾಜ್ಯದಲ್ಲಿ ಜಾರಿಯಲ್ಲಿರುವ ಕ್ಷೀರ ಭಾಗ್ಯ ಮತ್ತು ಮಧ್ಯಾಹ್ನ ಉಪಾಹಾರ ಯೋಜನೆಯಲ್ಲಿ ಮೊದಲನೇ ತ್ರೈಮಾಸಿಕದ ವೆಚ್ಚವಾಗಿ 215.93 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ. ಜತೆಗೆ ಈ ಯೋಜನೆಯಲ್ಲಿ ನಕಲು, ವಿದ್ಯಾರ್ಥಿಗಳ ಹಾಜರಾತಿಯಲ್ಲಿ ಅಕ್ರಮ ಮುಂತಾದವನ್ನು ತಡೆಯಲು ಹಲವು ಕಟ್ಟುನಿಟ್ಟಿನ ಸೂಚನೆ ಶಾಲಾ ಶಿಕ್ಷಣ ಇಲಾಖೆ ನೀಡಿದೆ.

ಮಕ್ಕಳ ಮುಖ ಗುರುತಿನ ಹಾಜರಾತಿ ದಿನಕ್ಕೆ ಮೂರು ಬಾರಿ(ಬೆಳಗ್ಗೆ ಎರಡು ಬಾರಿ, ಮಧ್ಯಾಹ್ನ ಒಂದು ಬಾರಿ) ಪಡೆಯುವುದು ಕಡ್ಡಾಯಗೊಳಿಸಲಾಗಿದೆ.

ಒಂದು ವೇಳೆ ಮಕ್ಕಳ ಮುಖ ಗುರುತಿನ ಹಾಜರಾತಿಯನ್ನು ದಾಖಲಿಸದೇ ಇದ್ದರೆ ಶಾಲಾ ಮುಖ್ಯ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿ, ಉಪ ನಿರ್ದೇಶಕರು ಮತ್ತು ಮಧ್ಯಾಹ್ನ ಉಪಹಾರ ಯೋಜನೆಯ ಶಿಕ್ಷಣಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಇನ್ನು ಸ್ಯಾಟ್ಸ್‌ನಲ್ಲಿ ಮಕ್ಕಳ ಹಾಜರಾತಿಯನ್ನು ಘಟನೋತ್ತರವಾಗಿ ದಾಖಲಿಸುವುದನ್ನು ರದ್ದುಗೊಳಿಸಬೇಕು. ವಿದ್ಯಾರ್ಥಿಗಳ ಹಾಜರಾತಿಯನ್ನು ಹೆಚ್ಚಾಗಿ ದಾಖಲಿಸುವುದು, ಹಾಜರಾತಿಯನ್ನು ಘಟನೋತ್ತರವಾಗಿ ದಾಖಲಿಸುವುದನ್ನು ಹಣಕಾಸು ಅಕ್ರಮವೆಂದು ಪರಿಗಣಿಸಲಾಗುವುದು ಎಂದು ಎಚ್ಚರಿಕೆ



ನೀಡಲಾಗಿದೆ ಎಂದು ಇಲಾಖೆ ತಿಳಿಸಿದೆ.


ಮಧ್ಯಾಹ್ನದ ಊಟ, ಬಾಳೆಹಣ್ಣು, ಮೊಟ್ಟೆ ಹಾಗೂ ಹಾಲು ಸೇವಿಸಿದ ಮತ್ತು ಸೇವಿಸದ ವಿದ್ಯಾರ್ಥಿಗಳನ್ನು ಸ್ಯಾಟ್ಸ್‌ನಲ್ಲಿ ನಮೂದಿಸುವುದು ಕಡ್ಡಾಯಗೊಳಿಸಲಾಗಿದೆ. ಮಕ್ಕಳಿಗೆ ಮೊಟ್ಟೆ ಅಥವಾ ಬಾಳೆ ಹಣ್ಣು ವಿತರಿಸುವ ಸಂದರ್ಭದಲ್ಲಿ ಪೋಷಕರ ಒಪ್ಪಿಗೆ ಪತ್ರ ಪಡೆಯುವುದು ಕಡ್ಡಾಯ. ಈ ಒಪ್ಪಿಗೆ ಪತ್ರವನ್ನು ಬದಲಾಯಿಸುವಂತಿಲ್ಲ, ಮೊಟ್ಟೆ ಕನಿಷ್ಠ 50 ಗ್ರಾಂ. ತೂಕವಿರಬೇಕು. ಎರಡು ಬಾಳೆಹಣ್ಣು ನೀಡಬೇಕು ಎಂದು ಸೂಚಿಸಲಾಗಿದೆ.

ಜತೆಗೆ ಮಕ್ಕಳಿಗೆ ಮೊಟ್ಟೆ ಹಾಗೂ ಬಾಳೆಹಣ್ಣಿನ ಪೋಷಕಾಂಶಗಳ ಪ್ರಯೋಜನ ಹಾಗೂ ಮೊಟ್ಟೆ ಮತ್ತು ಬಿಸಿ ಹಾಲು ಸೇವನೆಯ ಬಗ್ಗೆ ಮಕ್ಕಳಲ್ಲಿರಬಹುದಾದ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಬೆಳಗ್ಗಿನ ಪ್ರಾರ್ಥನೆಯ ವೇಳೆ ಹತ್ತು ನಿಮಿಷಗಳ ಕಾಲ ಸೂಕ್ತ ವೈಜ್ಞಾನಿಕ ಮಾಹಿತಿ ನೀಡುವಂತೆ ಮುಖ್ಯ ಶಿಕ್ಷಕರಿಗೆ ಸೂಚಿಸುವಂತೆ ನಿರ್ದೇಶನ ನೀಡಬೇಕು ಎಂದು ಆಯುಕ್ತರಿಗೆ ಸೂಚಿಸಲಾಗಿದೆ.

## ವಿಎಸ್‌ಕೆ ಮಾಧ್ಯಮ ಪ್ರಶಸ್ತಿ ಪುರಸ್ಕೃತರ ಪಟ್ಟಿ ಪ್ರಕಟ







• **ಬೆಂಗಳೂರು:** ವಿಶ್ವ ಸಂವಾದ ಕೇಂದ್ರ ಕರ್ನಾಟಕದಿಂದ ನೀಡಲಾಗುವ ವಾರ್ಷಿಕ ವಿಎಸ್‌ಕೆ ಮಾಧ್ಯಮ ಪ್ರಶಸ್ತಿ-2026ನೇ ಸಾಲಿನ ಪುರಸ್ಕೃತರ ಪಟ್ಟಿ ಪ್ರಕಟಿಸಲಾಗಿದೆ. ತಿ.ತಾ. ಶರ್ಮ ಪತ್ರಿಕೋದ್ಯಮ ಪ್ರಶಸ್ತಿಗೆ ವಿಜಯವಾಣಿ ಸಂಪಾದಕ ಕೆ.ಎನ್. ಚನ್ನೇಗೌಡ, ಬೆ.ಸು.ನಾ. ಮಲ್ಯ ಪತ್ರಿಕೋದ್ಯಮ ಪ್ರಶಸ್ತಿಗೆ ಅಡಿಕೆ ಪತ್ರಿಕೆ ಸಹಾಯಕ ಸಂಪಾದಕ ನಾ.ಕಾರಂತ ಪೆರಾಜೆ, ಎಂ.ವಿ.ಕಾಮತ್ ಪತ್ರಿಕೋದ್ಯಮ ಪ್ರಶಸ್ತಿಗೆ ಇಂಡಿಯಾ ಟುಡೇ ದಕ್ಷಿಣ ಭಾರತ ಆವೃತ್ತಿ ಸಂಪಾದಕ ನಾಗಾರ್ಜುನ್ ದ್ವಾರಕನಾಥ್, ಚಂದ್ರಶೇಖರ ಭಂಡಾರಿ ಪತ್ರಿಕೋದ್ಯಮ ಪ್ರಶಸ್ತಿಗೆ ಟಿವಿ-9 ಕನ್ನಡದ ಮುಖ್ಯ ನಿರ್ಮಾಪಕ ರಂಗನಾಥ್ ಭಾರದ್ವಾಜ್, ಹೊ.ವೆ. ಶೇಷಾದ್ರಿ ಅಂಕಣಕಾರ ಪ್ರಶಸ್ತಿ ಅಂಕಣಕಾರ ಡಾ.ಅರಕಲಗೂಡು ಸೂರ್ಯಪ್ರಕಾಶ್ ಹಾಗೂ ವಿಎಸ್‌ಕೆ ಡಿಜಿಟಲ್ ಮಾಧ್ಯಮ ಪ್ರಶಸ್ತಿಗೆ ಯುಟ್ಯೂಬರ್ ರಶ್ಮಿ ಆರ್.ರಾವ್ (ಡ್ಯಾಡಿಸ್ ರಶ್ಮಿ) ಆಯ್ಕೆಯಾಗಿದ್ದಾರೆ.


ವಿಎಸ್‌ಕೆ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭವು ಜು.12 ಬೆಳಗ್ಗೆ 10.30ಕ್ಕೆ ಬಸವನಗುಡಿಯ ಬಿ.ಎಂ.ಎಸ್.ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ. ಪದ್ಮಭೂಷಣ ಪುರಸ್ಕೃತ ವಿದ್ವಾಂಸ ಶತಾವಧಾನಿ ಡಾ.ಆರ್. ಗಣೇಶ್ ಹಾಗೂ ವಿಶ್ವ ಸಂವಾದ ಕೇಂದ್ರ ಕರ್ನಾಟಕದ ನಿರ್ವಾಹಕ ವಿಶ್ವಸ್ಥರಾದ ಡಾ. ಎಂ.ಕೆ.ಶ್ರೀಧರನ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

## ತೇಜೋವಧೆ ಸಲ್ಲದು | ಇಂಥ ಕೆಲಸ ತಕ್ಷಣವೇ ನಿಲ್ಲಿಸಿ

# ಮಟ್ಟಣ್ಣನವರ್‌ಗೆ ಹೈ ತಾಕೀತು

• **ಬೆಂಗಳೂರು:** ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ, ಪೋಸ್ಟ್ ಹಾಕಿದ ಗಿರೀಶ್ ಮಟ್ಟಣ್ಣನವರ್‌ಗೆ, ಸಾರ್ವಜನಿಕವಾಗಿ ತೇಜೋವಧೆ ಮಾಡುವುದು ಸಲ್ಲದು. ಇಂಥ ಕೆಲಸಗಳನ್ನು ತಕ್ಷಣವೇ ನಿಲ್ಲಿಸಿ ಎಂದು ಹೈಕೋರ್ಟ್ ತಾಕೀತು ಮಾಡಿದೆ.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ ಆರೋಪದಲ್ಲಿ ಧರ್ಮಸ್ಥಳ ಪೊಲೀಸ್



ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದು ಕೋರಿ ಗಿರೀಶ್ ಮಟ್ಟಣ್ಣನವರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಪೀಠವು ಗಿರೀಶ್ ಮಟ್ಟಣ್ಣನವರ್ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡಿತಲ್ಲದೆ, ಸಾಮಾಜಿಕ ಜಾಲತಾಣಗಳಲ್ಲಿ ಇಂತಹ ಬೇಜವಾಬ್ದಾರಿಯುತ ಪ್ರವೃತ್ತಿಗಳನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಮಟ್ಟಣ್ಣನವರ್‌ಗೆ ತಾಕೀತು ಮಾಡಿತು. ಜತೆಗೆ, ಈ ಕುರಿತು ಮುಂದಿನ ವಿಚಾರಣೆಯೊಳಗೆ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಬೇಕು ಎಂದು ತಾಕೀತು ಮಾಡಿ ವಿಚಾರಣೆ ಜೂನ್ 22ಕ್ಕೆ ಮುಂದೂಡಿತು. ಮಟ್ಟಣ್ಣನವರ ಪರ ವಕೀಲ ರಂಗನಾಥ್ ರೆಡ್ಡಿ ವಾದ ಮಂಡಿಸಿ, ಪ್ರಕರಣದಲ್ಲಿ ಸಾರ್ವಜನಿಕ ಶಾಂತಿ ಭಂಗ ಉಂಟಾದ ಅಥವಾ ಗಲಭೆ ನಡೆದ ಯಾವುದೇ ನಿರ್ದಿಷ್ಟ ಘಟನೆಯ ಉಲ್ಲೇಖವಿಲ್ಲ, ಕೇವಲ ಸಾರ್ವಜನಿಕ ಅಶಾಂತಿ ಸೃಷ್ಟಿಯಾಗಬಹುದು ಎಂಬ ಊಹೆಯ ಮೇಲೆ ಮೂರನೇ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಲಾಗಿದೆ. ಹಳೆ ಪೋಸ್ಟ್‌ಗಳನ್ನೆಲ್ಲ ಹುಡುಕಿ ತಂದು ಈ ದೂರು ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ಬಾಧಿತ ವ್ಯಕ್ತಿ ದೂರು ದಾಖಲಿಸಿಲ್ಲ ಎಂದು ಪೀಠಕ್ಕೆ ವಿವರಿಸಿದರು.

### ಇದೆಲ್ಲ ನಿಮಗೇಕೆ ಬೇಕು? ಕೋರ್ಟ್ ತರಾಟೆ

ಗಿರೀಶ್ ಮಟ್ಟಣ್ಣನವರ್ ಪೋಸ್ಟ್ ಮಾಡಿದ್ದಾರೆನ್ನಲಾದ ಚಿತ್ರವನ್ನು ಗಮನಿಸಿದ ಪೀಠವು ನಿಮಗೆ ಇದೆಲ್ಲ ಏಕೆ ಬೇಕು? ಇದರ ಅಗತ್ಯವೇನಿದೆ? ನೀವು ನಿಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ವಿಮರ್ಶೆ ಮಾಡಿ. ಯಾವುದೇ ತೊಂದರೆಯಿಲ್ಲ, ಭಿನ್ನಾಭಿಪ್ರಾಯ ಪ್ರಜಾಪ್ರಭುತ್ವದ ಸಾರವಾಗಿರಬಹುದು. ಆದರೆ ಇಂತಹ ನಡೆ ಪ್ರಜಾಪ್ರಭುತ್ವದ ಸಾರವಲ್ಲ, ಇದು ಸರಿಯಲ್ಲ ಎಂದು ಹೇಳಿತು.

ರಾಜ್ಯ ಸರ್ಕಾರಿ ಅಭಿಯೋಜಕ ಬಿ.ಎನ್.ಜಗದೀಶ್ ಅವರು, ಆರೋಪಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ ವಿವಾದಾತ್ಮಕ ಚಿತ್ರಗಳನ್ನು ನ್ಯಾಯಾಲಯದ ಗಮನಕ್ಕೆ ತಂದರಲ್ಲದೆ, ಕ್ರಿಮಿನಲ್ ಕಾನೂನನ್ನು ಜಾರಿಗೆ ತರಲು ಕೇವಲ ಸಂತ್ರಸ್ತರೇ ಆಗಬೇಕಿಲ್ಲ, ಯಾರು ಬೇಕಾದರೂ ದೂರು ನೀಡಬಹುದು ಎಂದು ಪ್ರತಿಪಾದಿಸಿದರು.

## ಹಿಂದೂ ಯುವತಿ ಕರೆದೊಯ್ದ ಮುಸ್ಲಿಂ ಯುವಕನ ಬಂಧನ

• **ಭಟ್ಕಳ:** ಸೂಪರ್ ಮಾರ್ಕೆಟೊಂದರಲ್ಲಿ ಕೆಲಸಕ್ಕಿದ್ದ ಹಿಂದೂ ಯುವತಿಯೊಬ್ಬಳನ್ನು ಕಾರಿನಲ್ಲಿ ಕರೆದೊಯ್ದ ಮುಸ್ಲಿಂ ಯುವಕ ಶಾಹಿದ್ ಖಾನ್ ಎಂಬಾತನನ್ನು ಯುವತಿ ದೂರಿನ ಮೇರೆಗೆ ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನ ವಿಧಿಸಿದೆ.

ಬುಧವಾರ ಬೆಳಗ್ಗೆ ಪಟ್ಟಣದ ಸೂಪರ್ ಮಾರ್ಕೆಟೊಂದರಲ್ಲಿ ಕೆಲಸ ಮಾಡುತ್ತಿದ್ದ ಮುರುಡೇಶ್ವರ ಭಾಗದ ಹಿಂದೂ ಯುವತಿಯೊಬ್ಬಳನ್ನು ಅದೇ ಸೂಪರ್ ಮಾರ್ಕೆಟ್‌ನಲ್ಲಿ ಸೇಲ್ಸ್‌ಮನ್ ಆಗಿರುವ ಕಾರವಾರದ ಶಾಹಿದ್ ಖಾನ್ ಎಂಬಾತ ಕಾರಿನಲ್ಲಿ ಕರೆದೊಯ್ಯುವಾಗ ಹಿಂದೂ ಸಂಘಟನೆ ಕಾರ್ಯಕರ್ತರು ತಡೆದು ಪೊಲೀಸರಿಗೆ ಒಪ್ಪಿಸಿದ್ದರು. ಆದರೆ, ಪೊಲೀಸರು ಆರೋಪಿ ಮೇಲೆ ಮೊದಲು ಪ್ರಕರಣ ದಾಖಲಿಸುವುದನ್ನು ಬಿಟ್ಟು ಯುವತಿಯನ್ನು ರಕ್ಷಿಸಿದ ಹಿಂದೂ ಕಾರ್ಯಕರ್ತರಿಬ್ಬರ ಮೇಲೆ ಪ್ರಕರಣ ದಾಖಲಿಸಿಕೊಂಡಿದ್ದರು.

ಇದರಿಂದ ತೀವ್ರ ಆಕ್ರೋಶಗೊಂಡ ಬಿಜೆಪಿ ಮತ್ತು ಹಿಂದೂ ಸಂಘಟನೆ ಕಾರ್ಯಕರ್ತರು ಬುಧವಾರ ರಾತ್ರಿ ನಗರ ಪೊಲೀಸ್ ಠಾಣೆ ಮುಂದೆ ಧರಣಿ ನಡೆಸಿ ಆರೋಪಿಯನ್ನು ಬಂಧಿಸಬೇಕು ಮತ್ತು ಹಿಂದೂ ಕಾರ್ಯಕರ್ತರ ಮೇಲಿನ ಪ್ರಕರಣ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದ್ದರು. ಸ್ಥಳಕ್ಕೆ ಹೆಚ್ಚುವರಿ ಎಸ್ಪಿ ಕೃಷ್ಣಮೂರ್ತಿ ಆಗಮಿಸಿ ಪ್ರಕರಣ ಗುರುವಾರ ಇತ್ಯರ್ಥ ಪಡಿಸುವ ಭರವಸೆ ನೀಡಿದ್ದರಿಂದ ಪ್ರತಿಭಟನಾಕಾರರು ಧರಣಿ ಕೈಬಿಟ್ಟಿದ್ದರು.

## ಶಿರಾಡಿ ಘಾಟಿಯಲ್ಲಿ ರೈಲು, ರಸ್ತೆಗೆ ಹೊಸ ಯೋಜನೆ: ಕ್ಯಾ. ಬ್ರಿಜೇಶ್ ಚೌಟ

# ಸುರಂಗ ಹಳಿ ಪ್ರತ್ಯೇಕ ನಿರ್ಮಾಣ

• **ಪುತ್ತೂರು:** ಶಿರಾಡಿ ಘಾಟಿಯಲ್ಲಿ ರಸ್ತೆ ಸುರಂಗ ಮಾರ್ಗ ಮತ್ತು ರೈಲು ಸಂಚರಿಸುವ ಸುರಂಗ ಹಳಿ ಪ್ರತ್ಯೇಕವಾಗಿ ನಿರ್ಮಿಸಲು ನಿರ್ಧರಿಸಲಾಗಿದೆ ಎಂದು ಸಂಸದ ಕ್ಯಾ.ಬ್ರಿಜೇಶ್ ಚೌಟ ಹೇಳಿದ್ದಾರೆ.

ಗುರುವಾರ ಪುತ್ತೂರಿನಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ರಸ್ತೆ ಮತ್ತು ರೈಲು ಹಳಿ ಜಂಟಿಯಾಗಿ ನಿರ್ಮಿಸುವ



ಸಂಬಂಧ ರೈಲ್ವೆ ಮತ್ತು ಭೂಸಾರಿಗೆ ಇಲಾಖೆ ಜಂಟಿ ಸಮೀಕ್ಷೆ ನಡೆಸಿದ ಬಳಿಕ ಆ ಯೋಜನೆ ಕೈಬಿಟ್ಟು ಪ್ರತ್ಯೇಕ ಯೋಜನೆಗೆ ನಿರ್ಧರಿಸಲಾಗಿದೆ ಎಂದರು.

ಶಿರಾಡಿ ಘಾಟಿಯಲ್ಲಿ ಗ್ರೇಡಿಯೆಂಟ್ (ಇಳಿಜಾರು ಸಮತಟ್ಟು) 0-50ರ ಅನುಪಾತದಲ್ಲಿದೆ. ಸುರಂಗ ರೈಲು ಹಳಿ ನಿರ್ಮಿಸಲು ಇಳಿಜಾರು ಸಮತಟ್ಟು 0-10ರ ಅನುಪಾತದಲ್ಲಿ ಇರಬೇಕಾಗುತ್ತದೆ. 0-20ರ ಇಳಿಜಾರು ಸಮತಟ್ಟಿನಲ್ಲಿ ಸುರಂಗ ರಸ್ತೆ ನಿರ್ಮಿಸಲು ಸಾಧ್ಯವಿದೆ. ಎರಡರ ಜೋಡಣೆ (ಎಲೈನ್‌ಮೆಂಟ್) ಸಾಧ್ಯವಾಗದ ಕಾರಣ ಜಂಟಿ ಯೋಜನೆ ಕೈಬಿಡಲಾಗಿದೆ ಎಂದು ಹೇಳಿದರು.

ಸುರಂಗ ಹಳಿಯ ಹಾದಿಯಲ್ಲೇ ಸುರಂಗ ರಸ್ತೆ ನಿರ್ಮಿಸಿದರೆ ಘಾಟಿಯಲ್ಲಿ ಸುರಂಗದ ಉದ್ದ 88 ಕಿ.ಮೀ. ಆಗುತ್ತದೆ.

ಸುರಂಗ ರಸ್ತೆಯನ್ನು 1-50 ಇಳಿಜಾರು ಸಮತಟ್ಟು ಅನುಪಾತದಲ್ಲಿ ಮಾಡಿದರೆ 38 ಕಿ.ಮೀ.ನಲ್ಲಿ ಸಾಧ್ಯವಾಗುತ್ತದೆ. 38 ಕಿ.ಮೀ. ಸುರಂಗ ರಸ್ತೆಯನ್ನು 88 ಕಿ.ಮೀ. ಉದ್ದಕ್ಕೆ ನಿರ್ಮಿಸುವುದು ಕಾರ್ಯಸಾಧ್ಯವೂ ಇಲ್ಲ, ಹೀಗಾಗಿ ಸುರಂಗ ರಸ್ತೆಗೆ ಭೂಸಾರಿಗೆ ಇಲಾಖೆಯವರು ಪ್ರತ್ಯೇಕ ಎಲೈನ್‌ಮೆಂಟ್ ನಕ್ಷೆ ತಯಾರಿಸಿ ಡಿಪಿಆರ್ ಮಾಡಲಿದ್ದಾರೆ. ರೈಲ್ವೆಯವರು ಮುಂದಿನ ದಿನಗಳಲ್ಲಿ ಪ್ರತ್ಯೇಕ ಲೊಕೇಶನ್ ಸರ್ವೆ ಮಾಡಿ ಡಿಪಿಆರ್ ಮಾಡಲಿದ್ದಾರೆ. ಒಟ್ಟು ಮಾಡಲು ಪ್ರಯತ್ನಿಸಿದ್ದೂ, ಭೌಗೋಳಿಕತೆಯ ಕಾರಣದಿಂದ ಸಾಧ್ಯವಾಗಲಿಲ್ಲ.

ಮಳೆಗಾಲದ ಅಧಿವೇಶನದ ಸಂದರ್ಭ ಎರಡೂ ಇಲಾಖೆಗಳ ಕಾರ್ಯದರ್ಶಿ ಮತ್ತು ಸಚಿವರನ್ನು ಭೇಟಿ ಮಾಡಿ ಶಿರಾಡಿ ಘಾಟ ಸುರಂಗ ಯೋಜನೆ ಜಾರಿಗೆ ಒತ್ತಾಯಿಸಲಿದ್ದೇವೆ. ಇದರಲ್ಲಿ ಸುರಂಗ ರಸ್ತೆಯು ಮೊದಲು ಜಾರಿಯಾಗುವ ಸಾಧ್ಯತೆ ಇದೆ ಎಂದು ಸಂಸದರು ಹೇಳಿದರು.

> ಮಾಣಿ-ಸಂಪಾಜೆ ಚತುಷ್ಪಥ ಹೆದ್ದಾರಿ ನಕ್ಷೆ ಅಧ್ಯಯನದಲ್ಲಿದೆ. ಎಸ್ಎಲ್ ಮತ್ತು ಎಸ್ಎಲ್ಎ ಸೇರ್ಪಡೆ ವಿಚಾರದಲ್ಲಿ ಸ್ವಲ್ಪ ಗೊಂದಲವಿದೆ. ಇದು ಶೀಘ್ರ ನಿವಾರಣೆಯಾಗಲಿದೆ. ಚತುಷ್ಪಥ ಸಂಬಂಧ ಒಂದು ಹಂತದ ಡಿಪಿಆರ್ ಆಗಿದೆ.
> ■ ಕ್ಯಾ.ಬ್ರಿಜೇಶ್ ಚೌಟ, ಸಂಸದ

## ಮೇಜರ್ ಪಿ.ಮಣಿವಣ್ಣನ್‌ಗೆ ನಗರ ಭೂ ಸಾರಿಗೆ ಆಯುಕ್ತರ ಹೆಚ್ಚುವರಿ ಹೊಣೆ

# 14 ಐಎಎಸ್ ಅಧಿಕಾರಿಗಳ ವರ್ಗಾವಣೆ

• **ಬೆಂಗಳೂರು:** ರಾಜ್ಯ ಸರ್ಕಾರದಲ್ಲಿ ವರ್ಗಾವಣೆ ಪರ್ವ ಮತ್ತೆ ಮುಂದುವರಿದಿದೆ. ಗುರುವಾರ 14 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಮೇಜರ್ ಪಿ.ಮಣಿವಣ್ಣನ್ ಅವರಿಗೆ ನಗರ ಭೂ ಸಾರಿಗೆ ನಿರ್ದೇಶನಾಲಯದ ಆಯುಕ್ತರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ವಹಿಸಲಾಗಿದೆ. ಹೊಸದಿಲ್ಲಿಯ ಕರ್ನಾಟಕ ಭವನದ ಪ್ರಾದೇಶಿಕ ಆಯುಕ್ತೆ ಇಮ್ಕೊಂಗ್ಲಾ ಜಮೀರ್ ಅವರನ್ನು ಕರ್ನಾಟಕ ಭವನದ ಕಾರ್ಯದರ್ಶಿ(ಸಂಯೋಜನೆ)ಯಾಗಿ ವರ್ಗಾವಣೆ ಮಾಡಲಾಗಿದೆ.

ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ಡಾ. ಪ್ರಸಾದ್ ಎನ್.ವಿ. ಅವರನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಸಮೀರ್ ಶುಕ್ಲಾ ಅವರನ್ನು ಕರ್ನಾಟಕ ಭವನದ ಪ್ರಾದೇಶಿಕ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಕುಮಾರ್ ಕೆ.ಬಿ. ಅವರನ್ನು ಕೆಎಸ್ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಾಗಿ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಡಾ.ರಾಮ್ ಪ್ರಸಾತ್ ಮನೋಹರ್ ವಿ. ಅವರನ್ನು ಪ್ರವಾಸೋದ್ಯಮ ಇಲಾಖೆಯ



ಆಯುಕ್ತರಾಗಿ ವರ್ಗಾವಣೆ ಮಾಡಲಾಗಿದೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯ ನಿರ್ದೇಶಕ ಡಾ.ಸತೀಶ ಬಿ.ಸಿ. ಅವರನ್ನು ಕೃಷಿ ಇಲಾಖೆಯ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ತುಳಸಿ ಮದ್ದಿನೇನಿ ಅವರನ್ನು ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯಾಗಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ(ಪಂಚಾಯತ್ ರಾಜ್) ರಣದೀಪ್ ಡಿ. ಅವರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ.

ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ಅಕ್ರಮ್ ಪಾಷ ಅವರನ್ನು ರಾಷ್ಟ್ರೀಯ ಆರೋಗ್ಯ ಮಿಷನ್ ಮತ್ತು ಆರೋಗ್ಯ ಆಯುಕ್ತಾಲಯದ ಯೋಜನಾ ನಿರ್ದೇಶಕರನ್ನಾಗಿ ನಿಯುಕ್ತಿ ಮಾಡಲಾಗಿದೆ. ಖಜಾನೆ ಇಲಾಖೆಯ ಆಯುಕ್ತ ರಘುನಂದನ್ ಮೂರ್ತಿ ಅವರನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ. ಇದರ ಜೊತೆಗೆ ಖಜಾನೆ ಇಲಾಖೆಯ ಆಯುಕ್ತರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ವಹಿಸಲಾಗಿದೆ.

ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ನಿತೀಶ್ ಕೆ. ಅವರನ್ನು ಪೌರಾಡಳಿತ ಇಲಾಖೆಯ ನಿರ್ದೇಶಕರಾಗಿ, ರಾಜ್ಯ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕ ಜ್ಞಾನೇಂದ್ರ ಕುಮಾರ್ ಗಂಗವಾರ್ ಅವರನ್ನು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಬಾಗಲಕೋಟೆಯ ಕೃಷ್ಣಾ ಮೇಲ್ದಂಡೆ ಯೋಜನೆಯ ಆರ್ ಆ್ಯಂಡ್ ಆರ್ ಹಾಗೂ ಭೂ ಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕ ಗಜಾನನ ಬಳೆ ಅವರನ್ನು ಬಾಗಲಕೋಟೆ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ. ಇದರೊಂದಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯ ಆರ್ ಆ್ಯಂಡ್ ಆರ್ ಹಾಗೂ ಭೂ ಸ್ವಾಧೀನ ವಿಭಾಗದ ಪ್ರಧಾನ ವ್ಯವಸ್ಥಾಪಕ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ.

## ಕಿರುಸುದ್ದಿ

### ಮತದಾರರ ಹಕ್ಕು ಕಸಿಯಬಾರದು

• **ಮೈಸೂರು:** ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಹೆಸರಿನಲ್ಲಿ ಮತದಾರರ ಹಕ್ಕು ಕಸಿಯಬಾರದು ಎಂದು ಒತ್ತಾಯಿಸಿ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದಿಂದ ಮೈಸೂರಿನ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಮ್ಯಾಚಿಂಗ್ ಮತ್ತು ಮ್ಯಾಪಿಂಗ್ ಪ್ರಕ್ರಿಯೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಮತದಾರರು ಮ್ಯಾಪಿಂಗ್ ಆಗದೆ ಹೊರಗುಳಿಯುತ್ತಿದ್ದಾರೆ. ರಾಜ್ಯದಲ್ಲಿ ಜೂ.30ರಿಂದ ಎಸ್‌ಐಆರ್ ಪ್ರಕ್ರಿಯೆ ಆರಂಭವಾಗಲಿದ್ದು, ಸಮಸ್ಯೆಗಳು ಅಲ್ಲಿಂದಲೇ ಹೆಚ್ಚಾಗಲಿವೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಮೃತಪಟ್ಟವರು, ನಕಲಿ ಮತದಾರರು, ಶಾಶ್ವತವಾಗಿ ಸ್ಥಳಾಂತರಗೊಂಡವರನ್ನು ಮತದಾರರ ಪಟ್ಟಿಯಿಂದ ಹೊರಹಾಕುವ ಪ್ರಕ್ರಿಯೆ ಪ್ರತಿವರ್ಷ ನಡೆಯುತ್ತದೆ. ಆದರೆ, ಅದರ ನೆಪದಲ್ಲಿ ಕೋಟ್ಯಂತರ ಬಡಜನರು, ಕೂಲಿಕಾರರು, ವಲಸೆ ಕಾರ್ಮಿಕರು, ಮಹಿಳೆಯರು, ದಲಿತರು, ಆದಿವಾಸಿಗಳು, ಅಲ್ಪಸಂಖ್ಯಾತರು ಹಾಗೂ ತಳ ಸಮುದಾಯಗಳ ಜನರ ಮತದಾನದ ಹಕ್ಕನ್ನೇ ಕಸಿಯುವ ಅಪಾಯ ಉಂಟು ಮಾಡುತ್ತಿದೆ. ದೇಶದಲ್ಲಿ ಈಗಾಗಲೇ ಎಸ್‌ಐಆರ್ ನಡೆಸಲಾಗಿರುವ ರಾಜ್ಯಗಳಲ್ಲಿ ಸುಮಾರು 6.5. ಕೋಟಿ ಜನ ಮತದಾರರು ಪಟ್ಟಿಯಿಂದ ಹೊರಗುಳಿಯುವಂತಾಗಿದೆ ಎಂದು ದೂರಿದರು. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ಮುಖಂಡರಾದ ಎಸ್.ವಿಜಯ್ ಕುಮಾರ್, ಜಿ.ಜಯರಾಂ, ಸುಬ್ರಹ್ಮಣ್ಯ, ಶ್ರೀಧರ್, ಪುಟ್ಟಮಲ್ಲಯ್ಯ, ನೂರ್ ಮರ್ಚೆಂಟ್, ಅಸ್ಲಂ ಮರ್ಚೆಂಟ್, ರಹಮಾನ್ ಷರೀಫ್, ಅಬ್ದಾರುಫ್ ಖಾನ್ ಮತ್ತಿತರರು ಇದ್ದರು.

### ಕಬ್ಬು ಬೆಳೆಗೆ ನೀರು ಬಿಡುಗಡೆ ಆಗ್ರಹ

• **ಪಾಂಡವಪುರ:** ಕೆ.ಆರ್.ಎಸ್ ಜಲಾಶಯದ ವಿಶ್ವೇಶ್ವರಯ್ಯ ನಾಲಾ ಅಚ್ಚುಕಟ್ಟು ಪ್ರದೇಶದಲ್ಲಿ ರೈತರು ಬೆಳೆದಿರುವ ಕಬ್ಬು ನೀರಿಲ್ಲದೆ ಒಣಗುತ್ತಿದೆ. ಹೀಗಾಗಿ ಕೆಆರ್ ಎಸ್ ಜಲಾಶಯದಿಂದ ಒಂದು ಕಟ್ಟು ನೀರು ಬಿಡಬೇಕು ಎಂದು ಕಾಂಗ್ರೆಸ್ ಯುವ ಮುಖಂಡ ಎಸ್.ದಿಲೀಪ್ (ದೀಪು) ಆಗ್ರಹಿಸಿದ್ದಾರೆ. ಈಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬೆಳೆದು ನಿಂತಿರುವ ಕಬ್ಬಿಗೆ ಒಂದರಿಂದ ಎರಡು ಕಟ್ಟು ನೀರು ಬೇಕಾಗಿದೆ. ಕಬ್ಬಿನ ಬೆಳೆಗೆ ಕೆಆರ್ ಎಸ್ ನಿಂದ ನೀರು ಬಿಡದಿದ್ದರೆ



ಇಡೀ ವರ್ಷ ಕಷ್ಟಪಟ್ಟು ಬೆಳೆದಿರುವ ಕಬ್ಬು ರೈತರ ಕೈಗೆ ಸಿಗುವುದಿಲ್ಲ, ಹೀಗಾಗಿ ಕಬ್ಬು ಬೆಳೆಗಾರರ ಸಂಕಷ್ಟವನ್ನು ಅರ್ಥಮಾಡಿಕೊಂಡು ಶಾಸಕರು, ಜಿಲ್ಲಾಡಳಿತ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳು ನೀರು ಹರಿಸುವ ಬಗ್ಗೆ ಈ ಕೂಡಲೇ ಸೂಕ್ತ ಕ್ರಮವಹಿಸಬೇಕೆಂದಿದ್ದಾರೆ.

### ಮಹಿಳಾ, ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಮಾನತು

• **ಚಾಮರಾಜನಗರ:** ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಎಚ್.ಆರ್. ಸುರೇಶ್ ಅವರನ್ನು ಸೇವೆಯಿಂದ ಅಮಾನತು ಮಾಡಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವಾಲಯದ ಕಾರ್ಯದರ್ಶಿ ಎಂ.ಎಸ್.ರಶ್ಮಿ ಆದೇಶ ಹೊರಡಿಸಿದ್ದಾರೆ. ಸುರೇಶ್ ಅವರ ವಿರುದ್ಧ ವಿವಿಧ ಸಂಘಟನೆಗಳು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳಿಂದ ದೂರುಗಳು ಸ್ವೀಕೃತವಾಗಿರುವ ಹಿನ್ನೆಲೆಯಲ್ಲಿ ಹಾಗೂ ತಮ್ಮ ವ್ಯಾಪ್ತಿಯ ಕಚೇರಿಯ ಮೇಲ್ವಿಚಾರಣೆ, ಅಧೀನ ಅಧಿಕಾರಿ/ಸಿಬ್ಬಂದಿಗಳ ಜೊತೆಗೆ ವಿಶ್ವಾಸದಿಂದ ಕರ್ತವ್ಯ ನಿರ್ವಹಿಸದಿರುವುದು, ಕಡತಗಳ ಚಲನವಲನಕ್ಕೆ ಬಾಹ್ಯಮೂಲ ಸಿಬ್ಬಂದಿಗಳ ಬಳಕೆ, ನಿಯಮಾನುಸಾರ ಕರ್ತವ್ಯ ನಿರ್ವಹಿಸದಿರುವುದು, ಸರ್ಕಾರದ ಮಾರ್ಗಸೂಚಿ ಆದೇಶ ಪಾಲಿಸದೇ ಇರುವುದು ಇತ್ಯಾದಿ ಕರ್ತವ್ಯ ಲೋಪ ಎಸಗಿರುವ ಆರೋಪದ ಮೇಲೆ ಅಮಾನತು ಮಾಡಿರುವುದಾಗಿ ಆದೇಶದಲ್ಲಿ ತಿಳಿಸಿದ್ದಾರೆ.

### ಜೂಜು ಅಡ್ಡೆ ಮೇಲೆ ದಾಳಿ: 24 ಮಂದಿ ಬಂಧನ

• **ಯಳಂದೂರು:** ಜೂಜಾಟ ಅಡ್ಡೆ ಮೇಲೆ ದಾಳಿ ನಡೆಸಿರುವ ಪೊಲೀಸರು 24 ಮಂದಿಯನ್ನು ಬಂಧಿಸಿದ್ದಾರೆ. ಖಚಿತ ಮಾಹಿತಿ ಮೇರೆಗೆ ತಾಲೂಕಿನ ವಡಗೆರೆ ಗ್ರಾಮದ ಕಿತ್ತೂರು ರಾಣಿ ವಸತಿ ಶಾಲೆ ಸಮೀಪದ ಸಾರ್ವಜನಿಕ ಸ್ಥಳದಲ್ಲಿ ಜೂಜಾಟ ಆಡುತ್ತಿದ್ದವರ ಮೇಲೆ ಪೊಲೀಸರು ದಾಳಿ ನಡೆಸಿದ್ದು, ಜೂಜಾಟದಲ್ಲಿ ತೊಡಗಿದ್ದ 24 ಮಂದಿಯನ್ನು ಬಂಧಿಸಿ ವಶಕ್ಕೆ ಪಡೆದ್ದ 1,54,200 ರೂ.ಗಳು ಹಾಗೂ ವಿವಿಧ ಮಾದರಿಯ ಏಳು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಈ ಸಂಬಂಧ ಯಳಂದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಶೋಕೆಯ ಮೂಲಮಠದಲ್ಲಿ ಆಹ್ವಾನ ಪತ್ರಿಕೆ ಲೋಕಾರ್ಪಣೆ | ರಾಘವೇಶ್ವರ ಭಾರತೀ ಸ್ವಾಮೀಜಿ

# ಅನ್ನಬ್ರಹ್ಮ ಚಾತುರ್ಮಾಸ್ಯ ಆಚರಣೆಗೆ ಸಿದ್ಧತೆ



• **ಗೋಕರ್ಣ:** ಆಹಾರವನ್ನು ದೇವರೆಂದು ಪರಿಗಣಿಸುವ ಸನಾತನ ಭಾರತೀಯ ಪರಂಪರೆಯ ಮಹತ್ವವನ್ನು ಸಾರುವ ಉದ್ದೇಶದಿಂದ ಈ ವರ್ಷದ ಚಾತುರ್ಮಾಸ್ಯವನ್ನು ಅನ್ನಬ್ರಹ್ಮ ಚಾತುರ್ಮಾಸ್ಯವಾಗಿ ಆಚರಿಸಲಾಗುತ್ತಿದ್ದು, ಆಹಾರದ ಕುರಿತಾದ ಜನಜಾಗೃತಿ ಕಾರ್ಯಕ್ರಮಗಳಿಗೆ ವಿಶೇಷ ಆದ್ಯತೆ ನೀಡಲಾಗುವುದು ಎಂದು ರಾಮಚಂದ್ರಾಪುರ ಮಠದ ಶ್ರೀರಾಘವೇಶ್ವರ ಭಾರತೀ ಸ್ವಾಮೀಜಿಗಳು ಹೇಳಿದರು.

ಗೋಕರ್ಣದ ಅಶೋಕೆಯ ಮೂಲಮಠದ ಆವರಣದಲ್ಲಿ ಬುಧವಾರ ಅನ್ನಬ್ರಹ್ಮ ಚಾತುರ್ಮಾಸ್ಯದ ಆಹ್ವಾನ ಪತ್ರಿಕೆಯನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ಚಾತುರ್ಮಾಸ್ಯ ವ್ರತವು ಗುರುಗಳಿಗೆ ತಪಸ್ಸಾದರೆ, ಶಿಷ್ಯಭಕ್ತರಿಗೆ ಹಬ್ಬವಾಗಿದೆ. ಜ್ಞಾನೋದ್ದೀಪನದ ಜತೆಗೆ ಆಹಾರದ ಕುರಿತಾದ ಯಥಾರ್ಥದರ್ಶನವನ್ನು ಸಮಾಜಕ್ಕೆ ಪರಿಚಯಿಸುವ ವೇದಿಕೆಯಾಗಿಯೂ ಈ ಚಾತುರ್ಮಾಸ್ಯವನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಅನ್ನವು ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಗೆ ಮಾತ್ರವಲ್ಲದೆ ಪರಲೋಕದಲ್ಲಿಯೂ ಉತ್ತಮ ಗತಿ ಪ್ರಾಪ್ತಿಗೆ ಕಾರಣವಾಗುತ್ತದೆ. ಆದರೆ, ಇತ್ತೀಚಿನ ದಿನಗಳಲ್ಲಿ ಸಂಪತ್ತು ಹೆಚ್ಚಿದಂತೆ ಆಹಾರವನ್ನು ವ್ಯರ್ಥ ಮಾಡುವ ಪ್ರವೃತ್ತಿಯೂ ಹೆಚ್ಚಾಗಿದ್ದು, ಅದನ್ನು ತಡೆಯಲು ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಹೇಳಿದರು.

ಪ್ರಾಣಿ-ಪಕ್ಷಿಗಳು ತಮ್ಮ ಜೀವನದ ಬಹುಭಾಗವನ್ನು ಆಹಾರ ಹುಡುಕುವುದರಲ್ಲಿ ಕಳೆಯುತ್ತಿದ್ದರೂ, ಅವು ಯೋಗ್ಯವಾದ ಆಹಾರವನ್ನೇ ಸ್ವೀಕರಿಸುತ್ತವೆ. ಆದರೆ, ಮನುಷ್ಯ ಮಾತ್ರ ಅನಾರೋಗ್ಯಕರ ಆಹಾರ ಪದ್ಧತಿಗಳತ್ತ ಸಾಗುತ್ತಿರುವುದು ವಿಷಾದನೀಯ ಬೆಳವಣಿಗೆಯಾಗಿದೆ. ಆಹಾರದ ಹಿನ್ನೆಲೆ, ಅದರ ತಯಾರಿ ಮತ್ತು ಸೇವನೆಗೆ ಸಮರ್ಪಕ ಮಹತ್ವ ನೀಡಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು. ಭೋಜನವೆಂಬ ತಪಸ್ಸು, ಆಹಾರ ಸೇವನೆಗೆ ಸೂಕ್ತ ಸಮಯ, ಜಲಪಾನದ ನಿಯಮಗಳು, ಆಹಾರದ ಉದ್ದೇಶ, ಉಪವಾಸದ ಮಹತ್ವ, ಭೋಜನದ ನಂತರ ಪಾಲಿಸಬೇಕಾದ ನಿಯಮಗಳು, ಭೋಜನ ಪಾತ್ರೆಗಳ ವೈಶಿಷ್ಟ್ಯ ಸೇರಿದಂತೆ ಹಲವು ವಿಷಯಗಳ ಕುರಿತು ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿಗಳು ವಿಶೇಷ ಪ್ರವಚನ ಮಾಲಿಕೆಯನ್ನು ನಡೆಸಲಿದ್ದಾರೆ. ಜ್ಞಾನೋದ್ದೀಪನದೊಂದಿಗೆ ಪ್ರಾಚೀನ ಆಹಾರ ಪದ್ಧತಿಗಳಿಗೂ ಚಾತುರ್ಮಾಸ್ಯದಲ್ಲಿ ಆದ್ಯತೆ ನೀಡಲಾಗುವುದು. ರಾಮಚಂದ್ರಾಪುರ ಮಠದ ಆಡಳಿತಾಧಿಕಾರಿ ಸಂತೋಷ್ ಹೆಗಡೆ, ವಿತ್ತಾಧ್ಯಕ್ಷ ಗಣೇಶ್ ಜೆ.ಎಲ್., ಹವ್ಯಕ ಮಹಾಮಂಡಲದ ಅಧ್ಯಕ್ಷ ಹರಿಪ್ರಸಾದ್ ಪೆರಿಯಾಪು, ಡಿ.ಡಿ. ಶರ್ಮಾ ಸೇರಿದಂತೆ ಇತರರಿದ್ದರು.

**ಆಹಾರ ಕುರಿತು ಜಾಗೃತಿ**

ಈ ವರ್ಷದ ಚಾತುರ್ಮಾಸ್ಯವು ಜು.29 ರಿಂದ ಸೆ.26ರವರೆಗೆ ಗೋಕರ್ಣದ ಅಶೋಕೆಯ ಪರಿಸರದಲ್ಲಿ ನಡೆಯಲಿದ್ದು, ಅನ್ನಬ್ರಹ್ಮ ಚಾತುರ್ಮಾಸ್ಯದ ಅಂಗವಾಗಿ ಆಹಾರದ ಕುರಿತು ಜಾಗೃತಿ ಮೂಡಿಸುವ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

## ನೀರು ಬಿಡುಗಡೆ ಮಾಡದಿದ್ದಲ್ಲಿ ಪ್ರತಿಭಟನೆ: ಸಿಎಸ್‌ಪಿ ಎಚ್ಚರಿಕೆ



• **ಪಾಂಡವಪುರ:** ಕೆಆರ್ ಎಸ್ ಜಲಾಶಯದಿಂದ ರೈತರ ಬೆಳೆ ರಕ್ಷಣೆಗೆ ತಕ್ಷಣ ನಾಲೆಗಳಿಗೆ ನೀರು ಬಿಡುಗಡೆ ಮಾಡಲು ಜಿಲ್ಲಾಡಳಿತ ಮುಂದಾಗಬೇಕು, ಇಲ್ಲವೇ ರೈತರಿಗೆ ಪರಿಹಾರ ಘೋಷಿಸಬೇಕು. ಈ ವಿಷಯದಲ್ಲಿ ಉದಾಸೀನತೆ ತೋರಿದರೆ ಮುಂದಾಗುವ ರೈತರ ಹೋರಾಟವನ್ನು ಎದುರಿಸಬೇಕಾಗುತ್ತದೆ ಎಂದು ಮಾಜಿ ಶಾಸಕ ಸಿ.ಎಸ್.ಪುಟ್ಟರಾಜು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮಳೆ ಬಾರದ ಕಾರಣ ಬೆಳೆ ಕೈಗೆ ಬಾರದೆ ರೈತರು ಕಂಗಾಲಾಗಿದ್ದಾರೆ. ಇನ್ನೊಂದೆಡೆ ಜಲಾಶಯ ನೀರಿಲ್ಲದೆ ಬರಿದಾಗಿದೆ. ಕೆಆರ್ ಎಸ್ ಜಲಾಶಯ ನಿಗದಿತ ಅವಧಿಗೆ ಭರ್ತಿಯಾದರೂ ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು ನೀರನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡುವಲ್ಲಿ ವಿಫಲರಾಗಿ ಜಲಾಶಯ ಬರಿದಾಗುವಂತೆ ಮಾಡಿದ್ದಾರೆ. ಜಲಾಶಯದಲ್ಲಿ ಇನ್ನೂ ಎರಡು ತಿಂಗಳಿಗೆ ನೀರಿದೆ ಎಂಬುದಿದ್ದರೂ ದಿಢೀರ್ ನೀರಿನ ಕುಸಿತಕ್ಕೆ ಕಾರಣವೇನು ಎಂದು ಸುದ್ದಿಗೋಷ್ಠಿಯಲ್ಲಿ ಪುಟ್ಟರಾಜು ಪ್ರಶ್ನಿಸಿದರು. ನಾವು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಅವಧಿಯಲ್ಲಿ ವ್ಯವಸ್ಥಿತ ರೀತಿಯಲ್ಲಿ ಕಾವೇರಿ ನೀರಾವರಿ ಸಲಹಾ ಸಮಿತಿ ಸಭೆ ಕರೆದು ತೀರ್ಮಾನಕ್ಕೆಗೊಳ್ಳಲಾಗುತ್ತಿತ್ತು. ಜತೆಗೆ ರೈತರಿಗೆ ನೀರಿನ ಅರಿವು ಮೂಡಿಸಿ ಸಮರ್ಪಕವಾಗಿ ನೀರಿನ ನಿರ್ವಹಣೆ ಮಾಡಿಕೊಂಡು ಬಂದಿದ್ದೇವೆ. ಆದರೆ ಈಗಿನ ಸರ್ಕಾರ ಜಲಾಶಯದಲ್ಲಿ ಬೇಜವಾಬ್ದಾರಿಯುತವಾಗಿ ನೀರಿನ ನಿರ್ವಹಣೆ ಮಾಡದೆ ಖಾಲಿ ಮಾಡಿ ರೈತರನ್ನು ಬೀದಿಗೆ ನಿಲ್ಲಿಸಿದ್ದಾರೆ. ಇದೊಂದು ದಲ್ಲಾಳಿ ಸರ್ಕಾರ ಎಂದು ಟೀಕಿಸಿದರು.

ಜಲಾಶಯದಲ್ಲಿ 17 ಟಿಎಂಸಿ ನೀರಿರುವ ಮಾಹಿತಿ ನನಗೆ ತಿಳಿದಿದೆ. ಬೆಂಗಳೂರು ನಗರವಾಸಿಗಳಿಗೆ ಕುಡಿಯುವ ನೀರು ಕೊಡುವುದನ್ನು ಗಮನದಲ್ಲಿರಿಸಿಕೊಂಡು ಜಿಲ್ಲಾಡಳಿತ ಎರಡು- ಮೂರು ದಿನಗಳಲ್ಲಿ ನಾಲೆಗಳಿಗೆ ನೀರು ಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಗೋಷ್ಠಿಯಲ್ಲಿ ಪುರಸಭೆ ಮಾಜಿ ಸದಸ್ಯ ಆರ್. ಸೋಮಶೇಖರ್, ಗ್ರಾ.ಪಂ ಮಾಜಿ ಅಧ್ಯಕ್ಷ ಅರಳಕುಪ್ಪೆ ಮಹದೇವು, ಹಾರೋಹಳ್ಳಿ ಎಚ್.ಕೆ.ಕುಳ್ಳೇಗೌಡ ಇತರರಿದ್ದರು.

## ಅವಿರೋಧ ಆಯ್ಕೆ: ಅಭಿನಂದನೆ



• **ಮದ್ದೂರು:** ಪಟ್ಟಣದ ನಗರದ ಪ್ರವಾಸಿ ಮಂದಿರದಲ್ಲಿ ಆಹಿಂದ ಸಂರಕ್ಷಣಾ ವೇದಿಕೆಯಿಂದ ಜಿಲ್ಲಾ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘದ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಡಿ.ಸಿ.ಮಹೇಂದ್ರ ಅವರನ್ನು ಅಭಿನಂದಿಸಲಾಯಿತು.

ಆಹಿಂದಸಂರಕ್ಷಣಾವೇದಿಕೆಯನಿರ್ದೇಶಕ ಕೆ.ಟಿ.ಶಿವಕುಮಾರ್ ಡಿ.ಸಿ.ಮಹೇಂದ್ರ ಅಭಿನಂದಿಸಿ ಮಾತನಾಡಿ, ತಾಲೂಕಿನ ಆಹಿಂದ ಸಂರಕ್ಷಣಾ ವೇದಿಕೆಯ ಸಹ ಕಾರ್ಯದರ್ಶಿಯಾಗಿ ಇನ್ನೂ ಹಲವಾರು ಸಂಘಟನೆಗಳಲ್ಲಿ ಸೇವೆ ಸಲ್ಲಿಸುವ ಜತೆಗೆ ಈಗ ಮಂಡ್ಯ ಜಿಲ್ಲಾ ಕೈಗಾರಿಕಾ ಸರಬರಾಜು ಮತ್ತು ಮಾರಾಟ ಸಹಕಾರ ಸಂಘದ ನಿರ್ದೇಶಕರಾಗಿ ಆಯ್ಕೆಯಾಗಿರುವುದು ಹೆಮ್ಮೆ ಪಡುವ ವಿಚಾರವಾಗಿದೆ ಎಂದರು.

ಮಹೇಂದ್ರ ಅವರು ತಂದೆ ಚಿಕ್ಕಣ್ಣ ಹೆಸರಿನಲ್ಲಿ ಟ್ರಸ್ಟ್ ಸ್ಥಾಪಿಸಿ ಶಾಲಾ ಮಕ್ಕಳಿಗೆ ನೋಟ್ ಪುಸ್ತಕ ವಿತರಣೆ, ರೋಗಿಗಳಿಗೆ ಹಣ್ಣು ವಿತರಣೆ, ಸಸಿಗಳ ವಿತರಣೆ ಹೀಗೆ ಹಲವಾರು ಸಮಾಜ ಸೇವೆ ಮಾಡುವ ಮುಖಾಂತರ ಸೇವೆ ಸಲ್ಲಿಸಿದ್ದಾರೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಆಹಿಂದ ಸಂರಕ್ಷಣಾ ವೇದಿಕೆಯ ಸಂಚಾಲಕ ಆಶಿಫ್ ಪಾಷಾ, ಆಹಿಂದ ಚಳವಳಿ ಸಂಘಟನೆಯ ರಾಜ್ಯ ಸಂಚಾಲಕ ಲೋಕೇಶ್, ಆಹಿಂದ ಸಂರಕ್ಷಣಾ ವೇದಿಕೆಯ ಸಂಘಟನಾ ಕಾರ್ಯದರ್ಶಿ ಪಿ.ಶಶಿಕುಮಾರ್, ಮುಖಂಡರಾದ ರಾಚಯ್ಯ, ಪುಟ್ಟಲಿಂಗಯ್ಯ, ಮಹದೇವಯ್ಯ, ಮಂಡ್ಯ ಜಿಲ್ಲಾ ಗುತ್ತಿಗೆದಾರರ ಕಾರ್ಯದರ್ಶಿ ಶಾಂತಕುಮಾರ್, ಪ್ರೊ. ಅಭಿಲಾಷ್, ಸಿ.ವೈ.ನಿತ್ಯಾನಂದ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂಚಾಲಕ ಗುಡಿಗೆರೆ ಬಸವರಾಜು, ಡಿ.ಎ.ಕೆರೆ ಚಿಕ್ಕಣ್ಣ ಇದ್ದರು.

ಕೋಲಾರದಲ್ಲಿ ಶಿಶಿಕ್ಷು, ನಿಯೋಜನೆ ತರಬೇತಿ ಮೇಳ

# ಕೌಶಲ ತರಬೇತಿಯಿಂದ ಉದ್ಯೋಗ ಲಭ್ಯ



• **ಕೋಲಾರ:** ಜಿಲ್ಲೆಯ ಹಲವು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಪಠ್ಯದ ಜೊತೆ ಬಹು ಕೌಶಲ್ಯವನ್ನು ಹೊಂದಿದ್ದರೆ ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಪ್ರತಿಷ್ಠಿತ ಕೈಗಾರಿಕೆ ಗಳಲ್ಲಿ ಉದ್ಯೋಗವನ್ನು ಪಡೆಯುವುದು ಸುಲಭವಾಗುತ್ತದೆ ಎಂದು ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿ ಶ್ರೀನಿವಾಸ ಕರೆ ನೀಡಿದರು.

ಜಿಲ್ಲೆಯ ಕೆಜಿಎಫ್‌ನ ಬಿಇಎಂಎಲ್ ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಿಂದ ಆಯೋಜಿಸಿದ್ದ ಶಿಶಿಕ್ಷು, ನಿಯೋಜನೆ ತರಬೇತಿ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿ, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಆಧುನಿಕ ಕೌಶಲ್ಯಗಳನ್ನು ಬೋಧಿಸಲು ಅಗತ್ಯವಾದ ಯಂತ್ರೋಪಕರಣಗಳು ಹಾಗೂ ಬೋಧನಾ ಸಿಬ್ಬಂದಿ ಸೌಲಭ್ಯಗಳನ್ನು ಸರ್ಕಾರದ ವತಿಯಿಂದ ಒದಗಿಸಲಾಗಿದ್ದು ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಬಳಸಿಕೊಂಡು ತಮ್ಮ ಕೌಶಲತೆಯನ್ನು ಹೆಚ್ಚಿಸಿಕೊಂಡರೆ ಶೀಘ್ರ ಉದ್ಯೋಗ ದೊರೆಯಲು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಿ.ಇ.ಎಂ.ಎಲ್ ಕಾರ್ಖಾನೆಯ ತರಬೇತಿ ಅಧಿಕಾರಿ ಎಂ.ಸಿ. ಲಕ್ಷ್ಮೀ ಮಾತನಾಡಿ, ಬಿ.ಇ.ಎಂ.ಎಲ್ ಕಾರ್ಖಾನೆಯಲ್ಲಿ ಲಭ್ಯವಿರುವ ವಿವಿಧ ಶಿಶಿಕ್ಷು ತರಬೇತಿ ಯೋಜನೆಗಳು, ಅರ್ಜಿ ಸಲ್ಲಿಸುವ ವಿಧಾನ ಹಾಗೂ ಆಯ್ಕೆ ಪ್ರಕ್ರಿಯೆಗಳ ಬಗ್ಗೆ ಮಾಹಿತಿ ನೀಡಿದರು. ಸಭೆಯಲ್ಲಿ ಪಾಲ್ಗೊಂಡ ವಿವಿಧ ಖಾಸಗಿ ಕೈಗಾರಿಕೆಗಳ ಪ್ರತಿನಿಧಿಗಳು ತಮ್ಮಲ್ಲಿ ಲಭ್ಯವಿರುವ ಶಿಶಿಕ್ಷು ತರಬೇತಿ ಅವಕಾಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೈಗಾರಿಕೆ ತರಬೇತಿ ಸಂಸ್ಥೆಯ ಪ್ರಾಂಶುಪಾಲ ವೆಂಕಟೇಶ ಮಾತನಾಡಿ, ಈ ರೀತಿಯ ಮೇಳಗಳನ್ನು ಜಿಲ್ಲೆಯ ಹಲವು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಆಯೋಜಿಸುವಂತೆ ಇಲಾಖೆ ವತಿಯಿಂದ ಸೂಚಿಸಿದ್ದು ಪ್ರಥಮವಾಗಿ ಕೆ.ಜಿ.ಎಫ್ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಮೇಳವನ್ನು ಆಯೋಜಿಸಿರುವುದಾಗಿ ತಿಳಿಸಿದರು. ಮೇಳದಲ್ಲಿ ವಿವಿಧ ಕೈಗಾರಿಕೆಗಳಲ್ಲಿ ಲಭ್ಯವಿರುವ ಅಪ್ರೆಂಟಿಸ್‌ಶಿಪ್/ಶಿಶಿಕ್ಷು ತರಬೇತಿಗೆ ಹಾಗೂ ಕೆಲವು ಕೈಗಾರಿಕೆಗಳಲ್ಲಿ ಶಿಶಿಕ್ಷು ತರಬೇತಿ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಉದ್ಯೋಗಕ್ಕಾಗಿ ಆಯ್ಕೆ ಮಾಡಲಾಯಿತು.

## ಕಿರುಸುದ್ದಿ

### ದಾಸರಹಳ್ಳಿಯಲ್ಲಿ 10.50 ಕೋಟಿ ರೂ. ಆಸ್ತಿ ವಶ

• **ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಮುಂದುವರೆಸಿದ್ದು, ಗುರುವಾರ ನಡೆದ ಕಾರ್ಯಾಚರಣೆಯಲ್ಲಿ ಅಗ್ರಹಾರ ದಾಸರಹಳ್ಳಿಯಲ್ಲಿ 10.50 ಕೋಟಿ ರೂ. ಆಸ್ತಿಯನ್ನು ವಶಪಡಿಸಿಕೊಂಡಿದೆ. ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಅಗ್ರಹಾರ ದಾಸರಹಳ್ಳಿ ಗ್ರಾಮದ ಸರ್ವೆ ನಂ. 14, 15/1, 2,3ರಲ್ಲಿ ಅನಧಿಕೃತ ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸಿ, ಸುಮಾರು 10.50 ಕೋಟಿ ರೂ.ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು. ಈ ಕಾರ್ಯಾಚರಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕರು, ಪಶ್ಚಿಮ ವಿಭಾಗದ ಕಾರ್ಯಪಾಲಕ ಅಭಿಯಂತರರು, ಸಹಾಯಕ ಕಾರ್ಯಪಾಲಕ ಅಭಿಯಂತರರು, ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನೆರವೇರಿಸಲಾಯಿತು.

### ಅಸಂ ಆ್ಯಪ್‌ನಿಂದ ಸಮಸ್ಯೆಗಳಿಗೆ ಪರಿಹಾರ

• **ಬೆಂಗಳೂರು:** ತುರ್ತು ಸಂದರ್ಭಗಳಲ್ಲಿ ಹಾಗೂ ಸಾರ್ವಜನಿಕ ದೂರುಗಳನ್ನು ಪರಿಹರಿಸುವಲ್ಲಿ ಅಸ್ಸಂ ಆ್ಯಪ್ ಪ್ರಮುಖ ಪಾತ್ರ ವಹಿಸಲಿದೆ. ಆದರಿಂದ ಎಲ್ಲಾ ಅಭಿಯಂತರರು ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸುವಂತೆ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಮುಖ್ಯ ಆಯುಕ್ತರ ಬಸವರಾಜ್ ಕಬಾಡೆ ಸೂಚನೆ ನೀಡಿದರು. ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳು, ಮಳೆ ಹಾನಿ ಹಾಗೂ ಮಳೆ-ಗಾಳಿಗೆ ಬಿದ್ದ ಮರ ತೆರವು ಸೇರಿದಂತೆ ಇನ್ನಿತರ ಸಾರ್ವಜನಿಕ ದೂರುಗಳಿಗೆ ತಕ್ಷಣ ಸ್ಪಂದಿಸಲು ಅಭಿವೃದ್ಧಿಪಡಿಸಿರುವ ಬೆಂಗಳೂರು ಸಂಚಾರ ಪೊಲೀಸ್ ಬಳಸುತ್ತಿರುವ ಅಸ್ಸಂ ಆನ್ ಆ್ಯಪ್ ಪರಿಣಾಮಕಾರಿಯಾಗಿ ಬಳಸಲು ಪಾಲಿಕೆಯ ಅಭಿಯಂತರರು ಕಾರ್ಯಾಗಾರವನ್ನು ಪಾಲಿಕೆಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಮಾತನಾಡಿದ ಅವರು, ಸಾರ್ವಜನಿಕರ ಅಥವಾ ಸಂಚಾರ ಪೊಲೀಸರು ಈ ಆ್ಯಪ್ ಮೂಲಕ ವರದಿ ಮಾಡುವ ಸಮಸ್ಯೆಗಳ ಸ್ಥಳಗಳಿಗೆ ತಕ್ಷಣವೇ ಭೇಟಿ ನೀಡಿ, ಸಮಸ್ಯೆ ಬಗೆಹರಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದರು.

### ಮೆಟ್ರೊ ಕ್ರಮಕ್ಕೆ ತೇಜಸ್ವಿ ಸೂರ್ಯ ಆಕ್ಷೇಪ

• **ಬೆಂಗಳೂರು:** ನಮ್ಮ ಮೆಟ್ರೊ ಕೆಂಪು ಬಣ್ಣದ ಯೋಜನೆಯಲ್ಲಿ ಹಮ್ಮಿದ್ದಕ್ಷಿಣ ಕಾರಿಡಾರ್ ನಿಲ್ದಾಣವನ್ನು ಕೈಬಿಟ್ಟಿರುವ ಬೆಂಗಳೂರು ಮೆಟ್ರೊ ರೈಲು ನಿಗಮದ ಕ್ರಮಕ್ಕೆ ಸಂಸದ ತೇಜಸ್ವಿ ಸೂರ್ಯ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಬಿಎಂಆರ್‌ಸಿಎಲ್ ಕಡಿಮೆ ಪ್ರಯಾಣಿಕರ ಸಂಖ್ಯೆ ಕಾರಣ ನೀಡಿ ನಿಲ್ದಾಣ ಕೈಬಿಟ್ಟಿದೆ. ಆದರೆ ಸಿದ್ಧಪಡಿಸಿರುವ ವಿವರವಾದ ಯೋಜನಾ ವರದಿ (ಡಿಪಿಆರ್) ಪ್ರಕಾರ 2031ರ ವೇಳೆಗೆ ಈ ನಿಲ್ದಾಣದಲ್ಲಿ ಪ್ರತಿದಿನ 18,303 ಮಂದಿ ಪ್ರಯಾಣಿಕರು ಏರಿಳಿಯಲಿದ್ದಾರೆ ಎಂದು ಅಂದಾಜಿಸಲಾಗಿದೆ. ಇದು ಹಲವು ಪ್ರಸ್ತಾವಿತ ನಿಲ್ದಾಣಗಳಿಗಿಂತಲೂ ಹೆಚ್ಚಾಗಿದೆ ಎಂದು ಸೂರ್ಯ ಹೇಳಿದ್ದಾರೆ. ಶಾರ್ಟ್ ಟನಲ್ ರಸ್ತೆ ಯೋಜನೆಗೆ ಅವಕಾಶ ಕಲ್ಪಿಸುವ ಉದ್ದೇಶದಿಂದ ಮೊದಲು ಭೂಗತ ನಿಲ್ದಾಣವಾಗಿ, ಬಳಿಕ ಮೇಲ್ಸೇತುವೆ ನಿಲ್ದಾಣವಾಗಿ ಪರಿವರ್ತಿಸಲ್ಪಟ್ಟಿದ್ದ ಈ ನಿಲ್ದಾಣವನ್ನು ಇದೀಗ ಸಂಪೂರ್ಣವಾಗಿ ಕೈಬಿಡಲಾಗಿದೆ ಎಂದು ಆರೋಪಿಸಿದರು. 2033ರ ವೇಳೆಗೆ ಕೆಂಪು ಬಣ್ಣದ ಪ್ರತಿ ದಿಕ್ಕಿಗೆ ಗಂಟೆಗೆ 24 ಸಾವಿರ ಪ್ರಯಾಣಿಕರು ಸಂಚರಿಸುವ ನಿರೀಕ್ಷೆಯಿದ್ದು, ದಿನಕ್ಕೆ 8 ಲಕ್ಷಕ್ಕೂ ಹೆಚ್ಚು ಮಂದಿ ಈ ಮಾರ್ಗವನ್ನು ಬಳಸಲಿದ್ದಾರೆ. ಆದರೆ ಕಾರಿಡಾರ್‌ನ ಮಾತ್ರ ಮೀಸಲಾದ ಸುರಂಗ ರಸ್ತೆ ಯೋಜನೆಯ ಸಾಮರ್ಥ್ಯ ಪ್ರತಿ ದಿಕ್ಕಿಗೆ ಕೇವಲ 6,500 ವಾಹನಗಳಷ್ಟೇ ಎಂದು ತಿಳಿಸಿದರು.

### ಗೋಡೆ ಕುಸಿದು ಮಗು ಸಾವು

• **ಬೆಂಗಳೂರು:** ಮನೆ ಮುಂದೆ ಆಟವಾಡುತ್ತಿದ್ದಾಗ ಕಾಂಪೌಂಡ್ ಗೋಡೆ ಕುಸಿದು ಐದು ವರ್ಷದ ಬಾಲಕ ಮೃತಪಟ್ಟಿದ್ದಾನೆ. ಮಹೋರ್ ಬಾಲಕ ಗಂಭೀರವಾಗಿ ಗಾಯಗೊಂಡಿರುವುದು ಬಾಗಲೂರು ಪೊಲೀಸ್ ಠಾಣಾ ವ್ಯಾಪ್ತಿಯ ಬಂಡಿಕೊಡಿಗೇಹಳ್ಳಿಯಲ್ಲಿ ನಡೆದಿದೆ. ಅಫಿನ್ (5) ಸಾವನ್ನಪ್ಪಿದ ಬಾಲಕ. ಸಮ್ರಿನ್ (5) ಗಾಯಗೊಂಡ ಬಾಲಕ. ಬುಧವಾರ ಸಂಜೆ ಮನೆಯ ಅಂಗಳದಲ್ಲಿ ಮಕ್ಕಳು ಆಟವಾಡುತ್ತಿದ್ದಾಗ ಏಕಾಏಕಿ ಕಾಂಪೌಂಡ್ ಗೋಡೆ ಕುಸಿದು ಮಕ್ಕಳ ಮೇಲೆ ಬಿದ್ದಿದೆ. ತೀವ್ರ ಗಾಯಗೊಂಡಿದ್ದ ಬಾಲಕ ಮೃತಪಟ್ಟಿದ್ದಾನೆ. ಮೃತದೇಹವನ್ನು ಸಮೀಪದ ಆಸ್ಪತ್ರೆಗೆ ಕಳುಹಿಸಲಾಗಿದೆ. ಗಾಯಗೊಂಡಿರುವ ಬಾಲಕನನ್ನು ಯಲಹಂಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಬಂಗಾರಪೇಟೆ ನಗರಸಭೆ ಯೋಜನೆ ವಿಫಲ | ಹಳ್ಳಹಿಡಿದ ಬೀದಿ ನಾಯಿಗಳಿಗೆ ಆಹಾರ ಫೀಡಿಂಗ್ ಯೋಜನೆ

# ಅನ್ನವನ್ನೇ ತಿನ್ನದ ಬೀದಿನಾಯಿಗಳು

▸ ಬಂಗಾರಪೇಟೆ ಆನಂದ್

• **ಬಂಗಾರಪೇಟೆ:** ಬೀದಿ ನಾಯಿಗಳನ್ನು ನಿಯಂತ್ರಿಸಲು ನಗರಸಭೆ ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ನಗರದ ಎಲ್ಲಾ ಬಡಾವಣೆಗಳಲ್ಲಿ ಒಂದೇ ಕಡೆ ಆಹಾರ ಸಿಗುವಂತೆ ಮಾಡಿದ್ದ ಯೋಜನೆ ಎರಡೇ ತಿಂಗಳಿಗೆ ಹಳ್ಳ ಹಿಡಿದಿದ್ದು, ಲಕ್ಷಾಂತರ ರೂ. ನೀರಿನಲ್ಲಿ ಹೋಮ ಮಾಡಿದಂತಾಗಿದೆ.

ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರದಲ್ಲಿ ಬೀದಿ ನಾಯಿಗಳು ಎಲ್ಲೆಂದರಲ್ಲಿ ರಸ್ತೆಗಳಲ್ಲಿ ನಡೆದುಕೊಂಡು ಹೋಗುವ ಸಾರ್ವಜನಿಕರನ್ನು ಕಚ್ಚುವ ದಾಳಿ ಮಾಡಿಕೊಂಡಿದ್ದವು, ಸಮಯಕ್ಕೆ ಆಹಾರ ಸಿಗದ ಏಳ್ನೆಲ ರಸ್ತೆಗಳಲ್ಲಿ ನಡೆದುಕೊಂಡು ಹೋಗುವವರ ಮೇಲೆ ಎರಗುತ್ತಿದ್ದವು. ಇದನ್ನು ತಡೆಯಲು ಜಿಲ್ಲಾಧಿಕಾರಿಗಳು ನಗರದ ಎಲ್ಲಾ ಬಡಾವಣೆಗಳಲ್ಲಿ ಎರಡು ಮೂರು ಕಡೆ ನಾಗರಿಕರ ಮನೆಗಳಲ್ಲಿ ಉಳಿಯುವ ಆಹಾರವನ್ನು ಬೇಕಾಬಿಟ್ಟಿಯಾಗಿ ಎಸೆಯದೆ ನಗರಸಭೆ ನಿಗದಿಪಡಿಸಿದ ಸ್ಥಳದಲ್ಲಿ ಮಾತ್ರ ನಾಯಿಗಳಿಗೆ ಆಹಾರ ಸಿಕ್ಕರೆ ಅವುಗಳು ಅಲ್ಲಿ ಹೋಗಿ ತಿನ್ನುವ ಅಭ್ಯಾಸ ಮಾಡಿಕೊಳ್ಳಲಿವೆ. ಆಗ ಅವುಗಳು ಮನೆಗಳ ಬಳಿ ಬರುವುದು ತಪ್ಪುತ್ತದೆ, ಜನರನ್ನು ಯಾರನ್ನು ಕಚ್ಚುವುದಿಲ್ಲ ಎಂಬ ಯೋಜನೆ ಜಾರಿಗೊಳಿಸಿ ನಗರಸಭೆಯಿಂದ ಲಕ್ಷಾಂತರ ವ್ಯಯಿಸಲಾಗಿತ್ತು.

ಆದರೆ ಎರಡೇ ತಿಂಗಳಲ್ಲಿ ಯೋಜನೆ ನಗರದಲ್ಲಿ ಹಳ್ಳ ಹಿಡಿದಿದೆ, ಯಾವ ನಾಯಿಯೂ ನಗರಸಭೆ ನಿಗದಿಪಡಿಸಿದ ಸ್ಥಳದಲ್ಲಿ ಆಹಾರ ತಿನ್ನುತ್ತಿಲ್ಲ, ಮಹಿಳೆಯರು ತಮ್ಮ ಮನೆಗಳಲ್ಲಿ ಉಳಿದಿರುವ ಆಹಾರವನ್ನು ನಗರಸಭೆ ನಿಗದಿಪಡಿಸಿದ ಸ್ಥಳದಲ್ಲಿ ಹಾಕಿದರು, ಆದರೆ ಅದನ್ನು ನೋಡಿದರೆ ಯಾವ ನಾಯಿ ಸಹ ತಿನ್ನಲು ಮುಂದೆ ಬರುವುದಿಲ್ಲ, ಅಷ್ಟೊಂದು ವಾಸನೆ ಬರುವಂತೆ ಇರುತ್ತದೆ.

**ನಿರ್ವಹಣೆ ಕೊರತೆ:** ನಗರದ ಯಾವ ಬಡಾವಣೆಗಳಲ್ಲಿಯೂ ನಾಯಿಗಳು ಹೋಗಿ ನಿಗದಿತ ಸ್ಥಳದಲ್ಲಿ ತಿನ್ನದೆ ಎಂದಿನಂತೆ ಮನೆಗಳ ಬಳಿಯೇ ಕಾವಲು ಕಾಯುವುದು, ನಗರಸಭೆ ನಿಗದಿಪಡಿಸಿರುವ ಸ್ಥಳದಲ್ಲಿ ಬೀದಿ ಹಸುಗಳು ಮಾತ್ರ ಹೋಗಿ ತಿನ್ನುತ್ತವೆ, ಕೆಲವು ಕಡೆ ಹಸುಗಳು ಸಹ ಮೂಸಿಯೂ ನೋಡುವುದಿಲ್ಲ, ದಿನನಿತ್ಯ ಮನೆಗಳಲ್ಲಿ ಉಳಿದಿರುವ ಅನ್ನ ಹಾಗೂ ಇತರೇ ಆಹಾರವನ್ನು ತಂದು ಸುರಿಯುವರು, ಆದರೆ ವಾರಗಟ್ಟಲೆ ಅದು ಕೊಳೆಯುವುದರಿಂದ ದುರ್ವಾಸನೆ ಬೀರುತ್ತಿದೆ, ರಸ್ತೆಯಲ್ಲಿ ಸಂಚರಿಸುವವರು ಮೂಗು ಮುಚ್ಚಿ ಕೊಂಡು ಹೋಗುವಂತಾಗಿದೆ. ನಗರಸಭೆ ನಿತ್ಯ ಸ್ವಚ್ಛಗೊಳಿಸದ ಕಾರಣ ಈ ಅವ್ಯವಸ್ಥೆ ನಿರ್ಮಾಣವಾಗಿದೆ. ನಗರಸಭೆ ಎಲ್ಲಾ ಕಡೆ ಯೋಜನೆ ಯಶಸ್ವಿಯಾಗುವಂತೆ ತಿಳಿದು ಹೊಸ ಕಡೆ ನಾಯಿಗಳ ಫೀಡಿಂಗ್ ಸ್ಥಳಗಳನ್ನು ಸ್ಥಾಪಿಸುತ್ತಿದೆ, ನಗರದಲ್ಲಿ ನಾಯಿಗಳ ಸಂತತಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ, ಆದರೆ ನಗರಸಭೆ ಮಾತ್ರ ಅವುಗಳ ನಿಯಂತ್ರಿಸಲು ವಿಫಲವಾಗಿದೆ. ನಾಯಿಗಳ ಸಂತತಿಯನ್ನು ಕಡಿಮೆ ಮಾಡಲು ಸಂತಾನಹರಣ ಚಿಕಿತ್ಸೆ ನೀಡುವ ಮೂಲಕ ಸಂತಾನ ಕ್ಷೀಣಿಸುವ ಕಾರ್ಯಕ್ಕೆ ಕೈ ಹಾಕಿತ್ತು, ಆದರೆ ಈಗ ಅದೂ ಸ್ಥಗಿತವಾಗಿದೆ, ಸರ್ಕಾರದಿಂದ ಮಾನ್ಯತೆ ಪಡೆಯುವವರೆಗೆ ಟೆಂಡರ್ ನೀಡದ್ದರಿಂದ ಟೆಂಡರ್ ವಾಪಸ್ ಪಡೆಯಲಾಗಿದೆ. ನಾಯಿಗಳಿಗೆ ಸಂತಾನಹರಣ ಚಿಕಿತ್ಸೆ ನೀಡುವ ಯೋಜನೆ ಸಹ ವಿಫಲವಾಗಿದೆ. ಈಗ ಮತ್ತೆ ನಗರದಲ್ಲಿ ನಾಯಿಗಳ ಉಪಟಳ ಮಿತಿ ಮೀರಿದೆ.




**ಮನೆ ಊಟಕ್ಕಾಗಿ ಕಾಯುವ ನಾಯಿಗಳು**

ನಗರದ ಯಾವ ಬಡಾವಣೆಯಲ್ಲಿಯೂ ನಾಯಿಗಳು ಹೋಗಿ ನಿಗದಿತ ಸ್ಥಳದಲ್ಲಿ ತಿನ್ನದೆ ಎಂದಿನಂತೆ ಮನೆಗಳ ಬಳಿಯೇ ಕಾವಲು ಕಾಯುವುದು, ನಗರಸಭೆ ನಿಗದಿಪಡಿಸಿರುವ ಸ್ಥಳದಲ್ಲಿ ಬೀದಿ ಹಸುಗಳು ಮಾತ್ರ ಹೋಗಿ ತಿನ್ನುತ್ತವೆ. ಕೆಲವು ಕಡೆ ಹಸುಗಳು ಸಹ ಮೂಸಿಯೂ ನೋಡುವುದಿಲ್ಲ, ದಿನನಿತ್ಯ ಮನೆಗಳಲ್ಲಿ ಉಳಿದಿರುವ ಅನ್ನ ಹಾಗೂ ಇತರೇ ಆಹಾರವನ್ನು ತಂದು ಸುರಿಯುವರು, ಆದರೆ ವಾರಗಟ್ಟಲೆ ಅದು ಕೊಳೆಯುವುದರಿಂದ ದುರ್ವಾಸನೆ ಬೀರುತ್ತಿದೆ, ರಸ್ತೆಯಲ್ಲಿ ಸಂಚರಿಸುವವರು ಮೂಗು ಮುಚ್ಚಿಕೊಂಡು ಹೋಗುವಂತಾಗಿದೆ.

**ನಾಯಿಗಳ ಸಂತತಿ ಹೆಚ್ಚುತ್ತಲೇ ಇದೆ**

ನಗರಸಭೆ ನಿತ್ಯ ಸ್ವಚ್ಛಗೊಳಿಸದ ಕಾರಣ ಈ ಅವ್ಯವಸ್ಥೆ ನಿರ್ಮಾಣವಾಗಿದೆ. ಆದರೂ ನಗರಸಭೆ ಎಲ್ಲಾ ಕಡೆ ಯೋಜನೆ ಯಶಸ್ವಿಯಾಗುವಂತೆ ತಿಳಿದು ಹೊಸ ಕಡೆ ನಾಯಿಗಳ ಫೀಡಿಂಗ್ ಸ್ಥಳಗಳನ್ನು ಸ್ಥಾಪಿಸುತ್ತಿದೆ. ನಗರದಲ್ಲಿ ನಾಯಿಗಳ ಸಂತತಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ, ಆದರೆ ನಗರಸಭೆ ಮಾತ್ರ ಅವುಗಳ ನಿಯಂತ್ರಿಸಲು ವಿಫಲವಾಗಿದೆ.

**ಸ್ಥಗಿತಗೊಂಡ ಸಂತಾನ ಹರಣ ಶಸ್ತ್ರ ಚಿಕಿತ್ಸೆ**

ನಾಯಿಗಳ ಸಂತತಿಯನ್ನು ಕಡಿಮೆ ಮಾಡಲು ಸಂತಾನಹರಣ ಚಿಕಿತ್ಸೆ ನೀಡುವ ಮೂಲಕ ಸಂತಾನ ಕ್ಷೀಣಿಸುವ ಕಾರ್ಯಕ್ಕೆ ಕೈ ಹಾಕಿತ್ತು, ಆದರೆ ಈಗ ಅದೂ ಸ್ಥಗಿತವಾಗಿದೆ, ಸರ್ಕಾರದಿಂದ ಮಾನ್ಯತೆ ಪಡೆಯುವವರೆಗೆ ಟೆಂಡರ್ ನೀಡದ್ದರಿಂದ ಟೆಂಡರ್ ವಾಪಸ್ ಪಡೆಯಲಾಗಿದೆ. ನಾಯಿಗಳಿಗೆ ಸಂತಾನಹರಣ ಚಿಕಿತ್ಸೆ ನೀಡುವ ಯೋಜನೆ ಸಹ ವಿಫಲವಾಗಿದೆ. ಈಗ ಮತ್ತೆ ನಗರದಲ್ಲಿ ನಾಯಿಗಳ ಉಪಟಳ ಮಿತಿ ಮೀರಿದೆ.

## ವಿದ್ಯುತ್ ನಿಗಮ ಖಾಸಗೀಕರಣಕ್ಕೆ ವಿರೋಧ

• **ಹೊಸಕೋಟೆ:** ಸಾರ್ವಜನಿಕ ಉದ್ದಿಮೆಯಾಗಿರುವ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣ ಮಾಡಲು ಹೊರಟಿರುವ ಸರ್ಕಾರದ ನಡೆ ಸರಿಯಲ್ಲ ಎಂದು ಬೆಸ್ಕಾಂ ಇಇ ವೇಣುಗೋಪಾಲ್ ತಿಳಿಸಿದರು.

ನಗರದ ಬೆಸ್ಕಾಂ ಕಚೇರಿ ಎದುರು ನಡೆದ ವಿದ್ಯುತ್ ಖಾಸಗೀಕರಣ ವಿರುದ್ಧದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದರು. ಗ್ರಾಹಕರಿಗೆ ಉತ್ತಮ ಗುಣಮಟ್ಟದ ಹಾಗೂ ನಿರಂತರ ವಿದ್ಯುತ್ ಪೂರೈಕೆಯನ್ನು ಈಗಾಗಲೇ ಒದಗಿಸಲಾಗುತ್ತಿದೆ. ನೌಕರರು ದಿನದ 24 ಗಂಟೆ ಎಂತಹ ತುರ್ತು ಸಂದರ್ಭದಲ್ಲೂ ಸಮಸ್ಯೆ ಆಲಿಸಿ ಪರಿಹಾರ ಒದಗಿಸುತ್ತಿದ್ದಾರೆ. ಆದರೆ, ಪ್ರಸ್ತುತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಒಂದು ಮಹತ್ವದ ಸಮಸ್ಯೆ ಎದುರಾಗಿದೆ. ಟಾಟಾ ಪವರ್ ಕಂಪನಿ ಲಿಮಿಟೆಡ್ ಸಂಸ್ಥೆಯು ಕೆಇಆರ್‌ಸಿ ಮುಂದೆ ಪ್ಯಾರಲಲ್ ಲೈಸೆನ್ಸಿಂಗ್‌ಗೆ ಸಂಬಂಧಿಸಿದಂತೆ ಮೇಲ್ಮನವಿ ಸಲ್ಲಿಸಿದೆ. ಈ ಪ್ಯಾರಲಲ್ ಲೈಸೆನ್ಸಿಂಗ್ ಜಾರಿಯಾದರೆ ಆದರ ಸಾಧಕ-ಬಾಧಕಗಳ ಜೊತೆಗೆ ಹಲವು ದುರಿಣಾಮಗಳೂ ಉಂಟಾಗುವ ಸಾಧ್ಯತೆ ಇದೆ. ಇದರ ಪರಿಣಾಮ ಗೃಹ ಬಳಕೆದಾರರು, ವಾಣಿಜ್ಯ ಗ್ರಾಹಕರು, ಕೈಗಾರಿಕಾ ವಲಯದ ಗ್ರಾಹಕರು ಹಾಗೂ ಕೃಷಿ ಪಂಪ್‌ಸೆಟ್ ಬಳಕೆದಾರರ ಮೇಲೂ ಬೀಳಬಹುದು. ಸಾರ್ವಜನಿಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಬೆಸ್ಕಾಂ ಒಂದು ಸಾರ್ವಜನಿಕ ಉದ್ದಿಮೆಯಾಗಿದ್ದು, ಜನಸೇವೆಯೇ ಇದರ ಮುಖ್ಯ ಗುರಿಯಾಗಿದೆ. ಸಾರ್ವಜನಿಕರೊಂದಿಗೆ ನೇರ ಸಂಪರ್ಕ ಹೊಂದಿರುವ ಈ ಸೇವೆಯನ್ನು ಯಾವುದೇ ಕಾರಣಕ್ಕೂ ದುರ್ಬಲಗೊಳಿಸಬಾರದು. ಜನರಿಗೆ ನಿರಂತರವಾಗಿ ಸೇವೆ ಸಿಗುವಂತೆ ವ್ಯವಸ್ಥೆ ಮುಂದುವರಿಯಬೇಕು.

ಆದ್ದರಿಂದ ಟಾಟಾ ಪವರ್ ಕಂಪನಿ ಸಲ್ಲಿಸಿರುವ ಪ್ಯಾರಲಲ್ ಲೈಸೆನ್ಸಿಂಗ್ ಅರ್ಜಿಯನ್ನು ರದ್ದುಗೊಳಿಸುವಂತೆ ಸರ್ಕಾರ ಮತ್ತು ಕೆಇಆರ್‌ಸಿಗೆ ಮನವಿ ಸಲ್ಲಿಸುವ ಕುರಿತು ಅರಿವು ಮೂಡಿಸಲು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳೊಂದಿಗೆ ಚರ್ಚಿಸಲು ಈ ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಖಾಸಗಿ ವಲಯ ಆದರೆ ಅವರು ಸೇವೆ ಮಾಡಲು ಬರುವುದಿಲ್ಲ ಬದಲಾಗಿ ಹಣ ಹಾಕಿ ಲಾಭ ಮಾಡಲು ಬರುತ್ತಾರೆ. ಮುಖ್ಯವಾಗಿ ಗೃಹಜ್ಯೋತಿ, ರೈತರ ಉಚಿತ ವಿದ್ಯುತ್‌ಗೆ ಅಪಾಯ, ಕೃಷಿ ಉತ್ಪಾದನಾ ವೆಚ್ಚ ಹೆಚ್ಚಳ, ವಿದ್ಯುತ್ ದರ ಏರಿಕೆ, ಗ್ರಾಮೀಣ ಪ್ರದೇಶಗಳ ನಿರ್ಲಕ್ಷ್ಯ, ಉದ್ಯೋಗ ಭದ್ರತೆಗೆ ಅನಿಶ್ಚಿತತೆ, ಸಾರ್ವಜನಿಕ ಉತ್ತರದಾಯಿತ್ವ ಮತ್ತು ಪಾರದರ್ಶಕತೆ ಕುಂಠಿತ, ರಾಜ್ಯದ ಸಾರ್ವಜನಿಕ ಆಸ್ತಿಯ ಮೇಲಿನ ನಿಯಂತ್ರಣ ಕುಂಠಿತ ಸೇರಿದಂತೆ ನೌಕರರಿಗೂ ಉದ್ಯೋಗದ ಅಭದ್ರತೆ ಕಾಡಲಿದೆ ಎಂದರು.

ಬೆಸ್ಕಾಂ ಎಇಇ ಪುಟ್ಟಸ್ವಾಮಿ, ಅನಿಲ್ ಕುಮಾರ್, ಪ್ರವೀಣ್, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನೌಕರರ ಸಂಘದ 659ನೇ ಕೇಂದ್ರ ಸಮಿತಿ ಸಹ ಕಾರ್ಯದರ್ಶಿ ಹರೀಶ್ ಕುಮಾರ್, ಸಮಿತಿ ಸದಸ್ಯ ಎಂ.ಎಸ್.ಶಿವಣ್ಣ, ಸ್ಥಳೀಯ ಸಮಿತಿ ಅಧ್ಯಕ್ಷ ಎಲ್.ಎನ್.ಪ್ರಕಾಶ್, ಕಾರ್ಯದರ್ಶಿ ಹರೀಶ್ ಕುಮಾರ್ ಸೇರಿದಂತೆ ಸಮಿತಿ ಪದಾಧಿಕಾರಿಗಳು, ಸದಸ್ಯರು, ನೌಕರರು ಹಾಜರಿದ್ದರು.



## ಮಕ್ಕಳಿಗೆ ಕಲಿಕಾ ಸಾಮಗ್ರಿ ವಿತರಣೆ

• **ಆನೇಕಲ್:** ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜ್ ಆವರಣದಲ್ಲಿ ಬಡ ವಿದ್ಯಾರ್ಥಿಗಳಿಗೆ ಉಚಿತ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು.

ಸರ್ಜಾಪುರ ಹೋಬಳಿ ದೊಮ್ಮಸಂದ್ರ ಗ್ರಾಮದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣದಲ್ಲಿ 70 ಬಡ ವಿದ್ಯಾರ್ಥಿಗಳಿಗೆ ಉಚಿತ ಕಲಿಕಾ ಸಾಮಗ್ರಿಗಳನ್ನು ವಿತರಿಸಿ ಮಾತನಾಡಿದ ಕಾಲೇಜು ಉಪಾಧ್ಯಕ್ಷ ನಾರಾಯಣಪ್ಪ (ಮೊದಲಿಯಾರ್) ನಮ್ಮ ತಾಲ್ಲೂಕಿನಲ್ಲಿ ಎಂದೇ ಸರ್ಕಾರಿ ಕಾಲೇಜ್ ಇದ್ದು ಒಂದು ಆನೇಕಲ್ ಇನ್ನೊಂದು ದೊಮ್ಮಸಂದ್ರ ಗ್ರಾಮದಲ್ಲಿ, ಈ ಕಾಲೇಜ್ ನಲ್ಲಿ ವಿದ್ಯಾಭ್ಯಾಸ ಪಡೆಯುವ ಎಲ್ಲ ಮಕ್ಕಳಿಗೂ ಶಿಕ್ಷಣಕ್ಕೆ ಬೇಕಾದ ಕಲಿಕಾ ಸಾಮಗ್ರಿಗಳು ಪುಸ್ತಕ,ಪೆನ್ನು,ಪೆನ್ಸಿಲ್,ಬ್ಯಾಗ್,ಸಮವಸ್ತ್ರ,ಊಟದ ತಟ್ಟೆ,ಶಿಕ್ಷಣಕ್ಕೆ ಶುಲ್ಕವನ್ನು ಇತ್ಯಾದಿ ಉಚಿತವಾಗಿ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಕೊಡಲಾಗುತ್ತದೆ ಎಂದು ತಿಳಿಸಿದರು.

ಆರ್.ಎಂ.ಎಮ್.ನಿಕೇತನ ಶಾಲೆ ಸಂಸ್ಥೆಯ ಸಂಸ್ಥಾಪಕರು ಚಂದ್ರಹಾಸ್ ಶೆಕೆಲಾ ಅವರು ಮಾತನಾಡಿ, ವಿದ್ಯೆ ಆರೋಗ್ಯ ರಕ್ಷಣೆಗೆ ಲಕ್ಷಾಂತರ ರೂಪಾಯಿ ಚೆಲ್ಲುತ್ತಿದ್ದು, ಹಣ ವ್ಯಾಯವಾಗುತ್ತಿದ್ದು ಕಡು ಬಡ ಕುಟುಂಬದಲ್ಲಿ ಜನಿಸಿದ ಮಕ್ಕಳು ವಿದ್ಯೆಗೆ ವಂಚಿತರಾಗಬಾರದೆಂದು ಸರ್ಕಾರಿ ಕಾಲೇಜು ಮಕ್ಕಳಿಗೆ ಕಲಿಕಾ ಸಾಮಗ್ರಿಗಳನ್ನು ವಿತರಿಸಿ ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಉತ್ತೇಜನ ನೀಡಿದರೆ ಭವಿಷ್ಯದಲ್ಲಿ ಅವರು ಸಹ ಉನ್ನತ ಶಿಖರಕ್ಕೆ ಏರಿ ಭವಿಷ್ಯದಲ್ಲಿ ಐಎಎಸ್, ಐಪಿಎಸ್, ಕೆಎಎಸ್, ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಸಮಾಜಕ್ಕೆ ಉತ್ತಮ ಪ್ರಜೆಗಳಾಗಿ ನಾಯಕತ್ವ ಗುಣಗಳನ್ನು ಬೆಳೆಸಿಕೊಂಡು ಸಮಾಜದ ಏಳಿಗೆಗೆ ಶ್ರಮಿಸಲಿ ಎಂದರು.

ಕಾಲೇಜು ಕಾರ್ಯದರ್ಶಿ ಡಿ.ಎಸ್.ಎನ್, ದೊಮ್ಮಸಂದ್ರ ಮುನಿರಾಜು ಮಾತನಾಡಿ, ಒಂದು ಕಾಲದಲ್ಲಿ ಶಿಕ್ಷಣ ಎಂಬುದು ರಾಜ, ಗೌಡ, ಒಡೆಯರ್, ಶ್ರೀಮಂತರು, ಶಿಕ್ಷಣ ಪಡೆಯುತ್ತಿದ್ದು ಸ್ವತಂತ್ರದ ನಂತರ ಶಿಕ್ಷಣ ಸಂವಿಧಾನ ಆಡಿಯಲ್ಲಿ ಎಲ್ಲ ವರ್ಗದವರಿಗೂ ಸಮಪಾಲು ಸಮಬಾಳುವಿನಿಂದ ಇವತ್ತು ಎಲ್ಲಾ ಜಾತಿ ವರ್ಗದವರು ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ವೀರಪ್ಪ, ಉಪನ್ಯಾಸಕರು ನಾರಾಯಣಪ್ಪ, ರಮೇಶ್, ಪೂರ್ಣಿಮಾ, ಖಜಾಂಚಿ/ಗೋವಿಂದರಾಜು, ಕಾರ್ಯದರ್ಶಿ ಧನಲಕ್ಷ್ಮಿ, ರಮೇಶ್,ಪುಷ್ಪರಾಣಿ, ಆರ್.ಎಂ.ಎಮ್.ನಿಕೇತನ ಶಾಲೆಯ ಸಂಸ್ಥಾಪಕರು ಚಂದ್ರಹಾಸ್, ಶಶಿಕಲಾ,ದೈಹಿಕ ಶಿಕ್ಷಕರು ಗಣೇಶ್,ವಿದ್ಯಾರ್ಥಿಗಳು ವಿದ್ಯಾರ್ಥಿನಿಯರು ಭಾಗವಹಿಸಿದ್ದರು.



## ವಾರ್ಡ್ ಮಾರ್ಷಲ್ ವಜಾಕ್ಕೆ ಸುನೀಲ್ ಕುಮಾರ್ ನಿರ್ದೇಶನ



• **ಬೆಂಗಳೂರು:** ಕರ್ತವ್ಯ ನಿರ್ವಹಣೆಯಲ್ಲಿ ಗಂಭೀರ ನಿರ್ಲಕ್ಷ್ಯ ಹಾಗೂ ಹಾಜರಾತಿ ವ್ಯವಸ್ಥೆಯ ದುರ್ಬಳಕೆ ಕಂಡುಬಂದ ಹಿನ್ನೆಲೆಯಲ್ಲಿ ಸಂಬಂಧಿತ ವಾರ್ಡ್ ಮಾರ್ಷಲ್‌ಗಳನ್ನು ತಕ್ಷಣ ಕರ್ತವ್ಯದಿಂದ ಬಿಡುಗಡೆಗೊಳಿಸಲು ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪುನರಾವರ್ತಿತವಾಗಿ ಸಾರ್ವಜನಿಕರಿಂದ ಬಂದಿರುವ ದೂರುಗಳ ಹಿನ್ನೆಲೆಯಲ್ಲಿ ಗುರುವಾರ ಆಚೀಲ್ ಮಾರ್ನಿಂಗ್ ಪಾಯಿಂಟ್‌ಗಳ ತಪಾಸಣೆ ನಡೆಸಲು 4 ತಂಡಗಳನ್ನು ರಚಿಸಿ, ಘನ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಯ ಕುರಿತು ನಗರದ ವಿವಿಧ ಪ್ರದೇಶಗಳಲ್ಲಿ ಆಯುಕ್ತರು ಹಾಗೂ ಅಧಿಕಾರಿಗಳು ಅಚ್ಚರಿ ಪರಿಶೀಲನೆ ನಡೆಸಿದರು. ಈ ವೇಳೆ ಮಾತನಾಡಿದ ಅವರು, ಸಾರ್ವಜನಿಕ ಸೇವೆಯಲ್ಲಿ ಯಾವುದೇ ರೀತಿಯ ಬೇಜವಾಬ್ದಾರಿ ಅಥವಾ ಅಕ್ರಮವನ್ನು ಸಹಿಸಲಾಗುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ನಗರದಲ್ಲಿ ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಸಮಸ್ಯೆಗಳು ಹೊಸ ಟೆಂಡರ್‌ಗಳ ಕೊರತೆಯಿಂದ ಉಂಟಾಗುತ್ತಿಲ್ಲ, ಈಗಾಗಲೇ ಜಾರಿಯಲ್ಲಿರುವ ವ್ಯವಸ್ಥೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದಿರುವುದು, ಮೇಲ್ವಿಚಾರಣೆಯ ಕೊರತೆ ಹಾಗೂ ಸಮಯ ಪಾಲನೆಯ ಅಭಾವವೇ ಪ್ರಮುಖ ಕಾರಣಗಳಾಗಿವೆ ಎಂದು ಆಯುಕ್ತರು ತಿಳಿಸಿದರು.

## ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಚಾಲನೆ

• **ಯಲಹಂಕ:** ಯೋಗವನ್ನು ಪ್ರತಿಯೊಬ್ಬರೂ ತಮ್ಮ ದಿನನಿತ್ಯದ ಜೀವನಶೈಲಿಯ ಭಾಗವಾಗಿ ಅಳವಡಿಸಿಕೊಳ್ಳಬೇಕು ಎಂದು ಯಶವಂತಪುರದ ವಿವೇಕಾನಂದ ಯೋಗ ಕೇಂದ್ರದ ಮುಖ್ಯಸ್ಥ ಸಿ.ಡಿ.ಸಂತೋಷ್ ಕುಮಾರ್ ಗುರೂಜಿ ಸಲಹೆ ನೀಡಿದರು.

ದೈನಂದಿನ ಜೀವನದಲ್ಲಿ ಯೋಗ ಎಂಬ ಧ್ಯೇಯವಾಕ್ಯದೊಂದಿಗೆ ನಿಟ್ಟೆ ಮೀನಾಕ್ಷಿ ವಿಶ್ವವಿದ್ಯಾ ನಿಲಯದ (ಡೀಮ್ಡ್ ಟು ಬಿ ಯುನಿವರ್ಸಿಟಿ) ಕ್ಯಾಂಪಸ್‌ನಲ್ಲಿ ಜೂ.18 ರಿಂದ 21ರವರೆಗೆ ಆಯೋಜಿಸಿರುವ, ನಾಲ್ಕು ದಿನಗಳ ಅಂತಾರಾಷ್ಟ್ರೀಯ ಯೋಗ ದಿನಾಚರಣೆ-2026 ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಉತ್ತಮ ಆರೋಗ್ಯ, ಮಾನಸಿಕ ಸಮತೋಲನ ಮತ್ತು ಸಮಗ್ರ ಜೀವನಮಟ್ಟ ಕಾಪಾಡಿಕೊಳ್ಳುವಲ್ಲಿ ಯೋಗಾಭ್ಯಾಸ ಮಹತ್ವದ ಪಾತ್ರ ವಹಿಸುತ್ತದೆ ಎಂದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಎಚ್.ಸಿ.ನಾಗರಾಜ್ ಮಾತನಾಡಿ, ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿಗಳಲ್ಲಿ ದೈಹಿಕ ಆರೋಗ್ಯ, ಮಾನಸಿಕ ನೆಮ್ಮದಿ ತರುವ ದಿಸೆಯಲ್ಲಿ ಯೋಗವನ್ನು ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿ ಅಳವಡಿಸಿಕೊಳ್ಳಲು ಪ್ರೋತ್ಸಾಹಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಸಮಗ್ರ ವ್ಯಕ್ತಿತ್ವ ವಿಕಾಸ ಮತ್ತು ಆರೋಗ್ಯಕರ ಜೀವನದ ಬಗ್ಗೆ ನಿಟ್ಟೆ ಸಂಸ್ಥೆ ಹೊಂದಿರುವ ಬದ್ಧತೆಯನ್ನು ಈ ಕಾರ್ಯಕ್ರಮ ಪ್ರತಿಬಿಂಬಿಸುತ್ತದೆ ಎಂದರು. ನಿಟ್ಟೆ ಬೆಂಗಳೂರು ಕ್ಯಾಂಪಸ್‌ನ ವಿವಿಧ ಸಂಸ್ಥೆಗಳ ಪ್ರಾಂಶುಪಾಲರು, ಅಧ್ಯಾಪಕರು ಹಾಗೂ ಸಿಬ್ಬಂದಿ ವರ್ಗದವರಿದ್ದರು.

## ಬಡವರ ಏಳಿಗೆಗೆ ರೋಟರಿ ಶ್ರಮ



• **ಕೆಂಗೇರಿ:** ಸಮಾಜದಲ್ಲಿ ಬಡತನರೇಖೆಯಲ್ಲಿರುವವರ ಬಾಳಿಗೆ ಬೆಳಕಾಗುವುದೇ ರೋಟರಿ ಕ್ಲಬ್ ನ ಮುಖ್ಯ ಧ್ಯೇಯವಾಗಿದೆ ಎಂದು ರೋಟರಿ ಜಿಲ್ಲಾ ಪಾಲಕ ಶ್ರೀಧರ್.ಬಿ.ಆರ್ ತಿಳಿಸಿದರು.

ಬೆಂಗಳೂರು ದಕ್ಷಿಣ ತಾಲೂಕು ದೊಡ್ಡ ಆಲದಮರ ಸಮೀಪದ ಚಂದ್ರಪ್ಪ ಸರ್ಕಲ್‌ನಲ್ಲಿ ನೂತನ ರೋಟರಿ ಕ್ಲಬ್ ಶಾಖಾ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಡವರು ಮತ್ತು ಮಧ್ಯಮ ವರ್ಗದ ಜನರ ಶೈಕ್ಷಣಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಸಮಾಜದಲ್ಲಿ ಜಾಗೃತಿ ಮೂಡಿಸಲು ರೋಟರಿ ಕ್ಲಬ್ ಮುಂಚೂಣಿಯಲ್ಲಿ ನಿಂತು ಸಹಕಾರ ನೀಡುತ್ತದೆ ಎಂದರು.

ಚಂದ್ರಪ್ಪ ಸರ್ಕಲ್ ರೋಟರಿ ಕ್ಲಬ್ ಅಧ್ಯಕ್ಷ ನರಸೇಗೌಡ ಮಾತನಾಡಿ, ಗ್ರಾಮೀಣ ಪ್ರದೇಶದ ಜನರ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ ಸರ್ಕಾರಿ ಶಾಲೆಗಳ ಅಭಿವೃದ್ಧಿ ಹಾಗೂ ವಿದ್ಯೆ ರೈತ ಮಹಿಳೆಯರ ಸ್ವಾವಲಂಬನೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸರ್ಕಾರಿ ಶಾಲೆಗಳಿಗೆ ಡೆಸ್ಕ್ ವಿತರಣೆ, ವಿಜ್ಞಾನ ಕಿಟ್, ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಧನ ಸಹಾಯ, ವಿಧವ ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣೆ ಹಾಗೂ ಡಯಾಲಿಸಿಸ್ ಕೇಂದ್ರಕ್ಕೆ ರೆಫ್ರಿಜರೇಟರ್ ನೀಡಲಾಯಿತು. ಚಂದ್ರಪ್ಪ ಸರ್ಕಲ್ ರೋಟರಿ ಕ್ಲಬ್ ಅಧ್ಯಕ್ಷ ನರಸೇಗೌಡ, ಮಾಜಿ ಪುರಸಭೆ ಹಲಿಕೇಶ್ ನಟರಾಜ್, ಕಾರ್ಯದರ್ಶಿ ವಿಶ್ವನಾಥ್, ಜಂಟಿ ಕಾರ್ಯದರ್ಶಿ ಲೋಕೇಶ್, ಪ್ರಭಾಕರ್, ಉಪಾಧ್ಯಕ್ಷ ಜಗನ್ನಾಥ್, ಡಾ.ಮಂಜುನಾಥ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಆರೋಗ್ಯ ಸಚಿವ ಯು.ಟಿ. ಖಾದರ್ ಭರವಸೆ

## ಅಧಿಕಾರಿಗಳ ಕಿರುಕುಳ: ಕ್ರಮ

• **ಬೆಂಗಳೂರು:** ಬೇಕಾ, ಕಾಂಟ್ರಾಕ್ಟ್ ಮತ್ತಿತರ ಅಂಗಡಿ ಮುಂಗ್ಗುಟ್ಟುಗಳಿಗೆ ಜಿಬಿಎ, ಆರೋಗ್ಯ ಮತ್ತು ಪೊಲೀಸ್ ಇಲಾಖೆಯಿಂದ ನೀಡುತ್ತಿರುವ ಕಿರುಕುಳ ತಪ್ಪಿಸಲು, ಶೀಘ್ರದಲ್ಲೇ ಸಭೆ ಕರೆಯುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ಭರವಸೆ ನೀಡಿದ್ದಾರೆ.

ನಗರದ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿ ಮಾತನಾಡಿದ ಸಚಿವರು, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಆರೋಗ್ಯ ಮತ್ತು ಪೊಲೀಸ್ ಅಧಿಕಾರಿಗಳ ಕಿರುಕುಳ ಕುರಿತು ಸಭೆ ಕರೆದು ಚರ್ಚಿಸಿ ಸೂಕ್ತ ಪರಿಹಾರ ರೂಪಿಸುವುದಾಗಿ ಹೇಳಿದರು.

ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ತಿನ ರಾಜ್ಯಾಧ್ಯಕ್ಷ ರವಿಶೆಟ್ಟಿ ಬೈಂದೂರ್ ಮಾತನಾಡಿ, ಸಣ್ಣ ಉದ್ದಿಮೆದಾರರ 27 ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಗುತ್ತಿದೆ. ಕಿರುಕುಳ ಮುಂದುವರಿದರೆ ಹೋರಾಟ ತೀವ್ರಗೊಳಿಸುತ್ತೇವೆ. ನಮ್ಮ ಸಮಸ್ಯೆಗಳಿಗೆ ಸರ್ಕಾರ ಕೂಡಲೇ ಸ್ಪಂದಿಸಬೇಕು ಎಂದರು. ಸಣ್ಣ ವ್ಯಾಪಾರಿಗಳ ಮೇಲೆ ನಡೆಯುತ್ತಿರುವ ದಂಡದ ಹಾವಳಿ, ಅಧಿಕಾರಿಗಳ ಕಿರುಕುಳ, ಪರವಾನಗಿ ಸಮಸ್ಯೆಗಳು ಹಾಗೂ ಜೀವನೋಪಾಯಕ್ಕೆ ಧಕ್ಕೆಯಾಗುತ್ತಿದೆ. ವ್ಯಾಪಾರಿಗಳು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.



ಪತ್ರಕರ್ತ ಡಿ.ಎನ್.ಶ್ರೀಪಾದು-75: ಹಿತೈಷಿಗಳಿಂದ ಅಭಿನಂದನೆ

## ನಿರಂತರ ಶ್ರಮ ಸಾಧನೆಗೆ ದಾರಿದೀಪ

• **ಮಂಡ್ಯ:** ಒಳ್ಳೆಯ ಸಾಧನೆಗಳು ಸಮಾಜದ ಬೆಳವಣಿಗೆಗೆ ಪೂರಕವಾಗಿರುತ್ತವೆಯಲ್ಲದೆ, ಮುಂದಿನ ಪೀಳಿಗೆಗೂ ದಾರಿದೀಪವಾಗಿರುತ್ತವೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅಭಿಪ್ರಾಯಪಟ್ಟರು.

ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಡಿ.ಎನ್.ಶ್ರೀಪಾದು ಹಿತೈಷಿ ಬಳಗದ ವತಿಯಿಂದ ಹಿರಿಯ ಪತ್ರಕರ್ತ ಡಿ.ಎನ್. ಶ್ರೀಪಾದು-75 ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿ, ಹಳೆಯ ಬೇರು-ಹೊಸ ಚಿಗುರು ಕೂಡಿರಲು ಮರ ಸೊಗಸು ಎಂಬ ಡಿವಿಜಿಯವರ ಮಾತಿನಂತೆ ಹಿರಿಯರ ಆದರ್ಶಗಳು ಕಿರಿಯರಿಗೆ ಮಾರ್ಗದರ್ಶಕವಾಗಬೇಕು. ಸಾಹಿತ್ಯ ಮತ್ತು ಮಾಧ್ಯಮ ಒಂದೇ ನಾಣ್ಯದ ಎರಡು ಮುಖಗಳು. ಮಾಧ್ಯಮ ಯಾವಾಗಲೂ ಸಮಾಜದ ಬೆಳವಣಿಗೆಯನ್ನು ಗುರಿಯಾಗಿರಿಸಿಕೊಂಡು ಕೆಲಸ ಮಾಡಬೇಕು. ಸಮಾಜದ ಋಣ ತೀರಿಸುವ ಕೆಲಸ ಮಾಡಿದಾಗ ಬದುಕು ಸಾರ್ಥಕವಾಗುತ್ತದೆ ಎಂದರು.

ಡಿ.ಎನ್.ಶ್ರೀಪಾದು ಅವರು ಪ್ರಾಮಾಣಿಕತೆ ಮತ್ತು ಬದ್ಧತೆಯನ್ನಿಟ್ಟುಕೊಂಡು ಸುದೀರ್ಘಕಾಲ ಪತ್ರಿಕೆಯನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಒಳ್ಳೆಯತನವನ್ನು ಉಳಿಸಿಕೊಂಡು ಹೋಗುವುದು ಸಾಹಸದ ಕೆಲಸ. ಹಣ, ಅಂತಸ್ತು ಆಸೆಯಿಲ್ಲದೆ ಪತ್ರಿಕೆಯನ್ನು ಶ್ರದ್ಧೆಯಿಂದ ಅದನ್ನು ಒಂದು ವಾರವೂ ತಪ್ಪದ ರೀತಿಯಲ್ಲಿ ಮುನ್ನಡೆಸಿಕೊಂಡು ಬಂದಿದ್ದಾರೆ. ಅವರ ಬದುಕಿನ ಮೌಲ್ಯಗಳನ್ನು ಕಿರಿಯರೂ ಅನುಸರಿಸುವಂತೆ ಸಲಹೆ ನೀಡಿದರು. ಚಿತ್ರನಟ ಮಂಡ್ಯ ರಮೇಶ್ ಮಾತನಾಡಿ, ಡಿ.ಎನ್.ಶ್ರೀಪಾದು ಅವರೊಂದಿಗಿನ ಸ್ನೇಹ ಐವತ್ತು ವರ್ಷ ಹಳೆಯದು. ಚಿಕ್ಕಂದಿನಿಂದಲೂ ಅವರಲ್ಲಿ ಉತ್ತಮವಾದ ಸಂಘಟನಾ ಚಾತುರ್ಯವಿದೆ ಎಂದರು. ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ತಾಪಂ ಮಾಜಿ ಅಧ್ಯಕ್ಷ ಸಿ.ತ್ಯಾಗರಾಜು, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಮಾಜಿ ನಿರ್ದೇಶಕ ಎಂ.ಕೃಷ್ಣ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಎನ್.ರಾಘವೇಂದ್ರ, ಮಾಜಿ ಅಧ್ಯಕ್ಷ ಕೆ.ಸಿ.ಮಂಜುನಾಥ್, ಕೆ.ಶ್ರೀನಿವಾಸ್ ಉಪಸ್ಥಿತರಿದ್ದರು.



## ಬೆಂ. ವಿವಿ ಕುಲಪತಿ ಡಾ.ಜಯಕರ ಕಿವಿಮಾತು ಪಠ್ಯ ಜತೆ ಪಠ್ಯೇತರ ಚಟುವಟಿಕೆ ಇರಲಿ



• **ಬೆಂಗಳೂರು:** ದೇಶದ ಪ್ರಗತಿಯಲ್ಲಿ ಶಿಕ್ಷಣದ ಪಾತ್ರ ಬಹಳ ದೊಡ್ಡದು. ರಾಷ್ಟ್ರಕವಿ ಕುವೆಂಪು ಹೇಳಿರುವಂತೆ ಅಲ್ಪಮಾನವನನ್ನು ವಿಶ್ವಮಾನವನನ್ನಾಗಿ ಮಾಡುವುದೇ ಶಿಕ್ಷಣದ ಮುಖ್ಯ ಉದ್ದೇಶವಾಗಬೇಕು. ಶಿಕ್ಷಣದಿಂದ ಮಾತ್ರ ವ್ಯಕ್ತಿತ್ವ ವಿಕಸನ ಸಾಧ್ಯ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಜಯಕರ ಎಸ್. ಎಮ್ ತಿಳಿಸಿದರು.

ನಗರದ ಆರ್‌ಎನ್‌ಎಸ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರಥಮ ಪದವಿ ತರಗತಿಗಳ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಶಿಕ್ಷಕರು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಜ್ಞಾನ ಬತ್ತಿ ಅವರನ್ನು ಜ್ಞಾನಿಗಳನ್ನಾಗಿ ಪರಿವರ್ತಿಸಬೇಕು. ಆಗ ಉತ್ತಮ ಸಮಾಜ ರೂಪುಗೊಳ್ಳಲು ಸಾಧ್ಯವಾಗುತ್ತದೆ. ಹಾಗಾಗಿ ಶಿಕ್ಷಣದಿಂದ ಮಾತ್ರ ವ್ಯಕ್ತಿತ್ವ ವಿಕಸನ ಸಾಧ್ಯ ಎಂದರು. ಬೆಂಗಳೂರಿನ ಎಲ್ ಟಿ ಎಮ್ ಚೀಫ್ ಇನ್ಫರ್ಮೇಷನ್ ಆಫೀಸರ್ ರಾಜೇಶ್ ಕುಮಾರ್ ಆರ್ ಮಾತನಾಡಿ, ಶಿಕ್ಷಣದ ಜತೆಗೆ ಕೌಶಲ್ಯಗಳ ವೃದ್ಧಿಯ ಕಡೆಗೆ ವಿದ್ಯಾರ್ಥಿಗಳು ಗಮನ ಹರಿಸಬೇಕು. ಧನಾತ್ಮಕ ಚಿಂತನೆ ಬೆಳೆಸಿಕೊಂಡು ಉತ್ತಮ ಉದ್ಯಮಿಗಳಾಗಿ ಸಮಾಜಕ್ಕೆ ವಿಶಿಷ್ಟ ಕೊಡುಗೆ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಆರ್‌ಎನ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ತಾಂತ್ರಿಕ ಅಧಿಕಾರಿಯಾದ ಪ್ರೊ.ಮುರಳಿ ಕೃಷ್ಣ ಕೆ ಮೈಸೂರು, ಪ್ರಾಂಶುಪಾಲ ಡಾ.ಶೇಖರ್ ಎಚ್.ಎಸ್, ಪರೀಕ್ಷಾಂಗ ವಿಭಾಗದ ಮುಖ್ಯಸ್ಥ ಪ್ರೊ. ನಾಗರಾಜ ಎಸ್ ಉಪಸ್ಥಿತರಿದ್ದರು.

## ಇಂದು ಫಲಾನುಭವಿಗಳಿಗೆ ಪ್ರೋತ್ಸಾಹಧನ ವಿತರಣೆ

• **ಬೆಂಗಳೂರು:** ಪ್ರಧಾನಮಂತ್ರಿ ವಿಕಸಿತ ಭಾರತ್ ಉದ್ಯೋಗ ಯೋಜನೆ ಅಡಿಯಲ್ಲಿ ಅರ್ಹ ಫಲಾನುಭವಿಗಳಿಗೆ ಪ್ರೋತ್ಸಾಹಧನ ವಿತರಿಸುವ ಕಾರ್ಯಕ್ರಮವು ಜೂ.19ರಂದು ಸಂಜೆ 4.30ಕ್ಕೆ ಜೀವನ್ ಭೀಮಾ ನಗರದ ಸುರಂಜನ್ ದಾಸ್ ರಸ್ತೆಯ ಓಲ್ಡ್ ಎಚ್‌ಎಎಲ್ ಸಭಾಂಗಣದಲ್ಲಿ ನಡೆಯಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವರ್ಚುವಲ್ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿ, ದೇಶಾದ್ಯಂತ ಸಂಘಟಿತ ವಲಯದ ಉದ್ಯೋಗಿಗಳು ಹಾಗೂ ಉದ್ಯೋಗದಾತರಿಗೆ ಸುಮಾರು 2,400 ಕೋಟಿ ರೂ. ಮೊತ್ತದ ಪ್ರೋತ್ಸಾಹಧನ ಬಿಡುಗಡೆ ಮಾಡಲಿದ್ದಾರೆ. ಉದ್ಯೋಗ ಸೃಷ್ಟಿ ಹಾಗೂ ಕಾರ್ಮಿಕರನ್ನು ಔಪಚಾರಿಕ ವಲಯಕ್ಕೆ ಸೇರ್ಪಡೆಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಈ ಯೋಜನೆಯ ಅಡಿಯಲ್ಲಿ ಪ್ರೋತ್ಸಾಹಧನ ವಿತರಣೆಗೆ ಸಂಬಂಧಿಸಿದ ನೇರ ಪ್ರಸಾರ ಕಾರ್ಯಕ್ರಮವನ್ನು ನೌಕರರ ಭವಿಷ್ಯ ನಿಧಿ ಸಂಸ್ಥೆ (ಇಪಿಎಫ್‌ಒ) ಪ್ರಾದೇಶಿಕ ಕಚೇರಿ, ಇಂದಿರಾನಗರ ಆಯೋಜಿಸಿದೆ. ಕಾರ್ಯಕ್ರಮದಲ್ಲಿ ಸಿ.ವಿ. ರಾಮನ್ ನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್. ರಘು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಇಪಿಎಫ್‌ಒ ಪ್ರಾದೇಶಿಕ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಅಭಿನಂದನೆ



ವಿಧಾನಪರಿಷತ್ ಚುನಾವಣೆಯಲ್ಲಿ ಜಯಗಳಿಸಿದ ಬಿಜೆಪಿಯ ಅಭ್ಯರ್ಥಿಗಳಾದ ರಘು ಕೌಟಿಲ್ಯ, ಲಿಂಗರಾಜ ಪಾಟೀಲ್ ಅವರನ್ನು ಬಿಜೆಪಿ ಕಾರ್ಯಾಲಯದಲ್ಲಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಅಭಿನಂದಿಸಿದರು.

### ಕಿರುಸುದ್ದಿ

## ಚಿಲ್ಲರೆ ಅಂಗಡಿಯಲ್ಲಿ ಲಿಕ್ಕರ್ ಒಪ್ಪಲಾದೀತೆ?

• **ಬೆಂಗಳೂರು:** ಕೃಷಿ ಕೆಲಸದಿಂದ ದಣಿದು ಬಂದ ಕೆಲಸಗಾರರಿಗೆ ನೀಡಲು ಪ್ರಾವಿಷನ್ ಸ್ಟೋರ್‌ನಲ್ಲಿ ಬಿಯರ್ - ಲಿಕ್ಕರ್ ಇರಿಸಲಾಗಿತ್ತು ಎಂಬ ವಾದ ಕೇಳಿ ಅಚ್ಚರಿ ವ್ಯಕ್ತಪಡಿಸಿದ ಹೈಕೋರ್ಟ್, ಪರವಾನಗಿ ಪಡೆಯದೆ, ಟೊಮೆಟೊ ಸಾಸ್ ಪಕ್ಕದಲ್ಲಿ ಲಿಕ್ಕರ್ ಇಟ್ಟು ಮಾರಾಟ ಮಾಡಿದರೆ ಒಪ್ಪಲಾಗದು ಎಂದು ಲಘುಧಾಟಿಯಲ್ಲಿ ನುಡಿಯಿತು. ಅಕ್ರಮವಾಗಿ ಮದ್ಯ ಮಾರಾಟ ಆರೋಪದ ಮೇಲೆ ತುಮಕೂರು ಜಿಲ್ಲೆಯ ಮಣಿಕುಪ್ಪೆ ಗ್ರಾಮದ ಯಶೋಧಮ್ಮ ವಿರುದ್ಧ ಗುಬ್ಬಿ ವಲಯದ ಅಬಕಾರಿ ಪೊಲೀಸರು ದಾಖಲಿಸಿದ್ದ ಪ್ರಕರಣದ ವಿಚಾರಣೆಗೆ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ತಡೆ ನೀಡಿತು. ಅರ್ಜಿಯಲ್ಲಿ ಪ್ರತಿವಾದಿಯಾದ ಅಬಕಾರಿ ಇಲಾಖೆ ಗುಬ್ಬಿ ವಲಯದ ಉಪ ನಿರೀಕ್ಷಕರಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ಮುಂದೂಡಿತು. ಅರ್ಜಿ ವಿಚಾರಣೆಗೆ ಬರುತ್ತಿದ್ದಂತೆಯೇ ನ್ಯಾಯಮೂರ್ತಿಗಳು ಎಷ್ಟು ಪ್ರಮಾಣದ ಮದ್ಯ ಜಪ್ತಿ ಮಾಡಿದ್ದಾರೆ? ಎಂದು ಅರ್ಜಿದಾರರ ಪರ ವಕೀಲರನ್ನು ಕೇಳಿದರು. ಇದಕ್ಕೆ ವಕೀಲರು, ಅರ್ಜಿದಾರರ ವಿರುದ್ಧ ಅಬಕಾರಿ ಇಲಾಖೆ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. 7.8 ಲೀ. ಬಿಯರ್ ಹಾಗೂ 22 ಲೀ. ವಿವಿಧ ಬಗೆಯ ಲಿಕ್ಕರ್ ಎಂದು ಉತ್ತರಿಸಿದರು. ಆಗ ಪೀಠವು ಅದನ್ನೆಲ್ಲಾ ಇಟ್ಟುಕೊಂಡು ನೀವೇನು ಮಾಡುತ್ತೀರಿ? ಎಂದು ಪೊಲೀಸರ ಪರ ಸರ್ಕಾರಿ ಅಭಿಯೋಜಕರನ್ನು ಪ್ರಶ್ನಿಸಿತು. ಸರ್ಕಾರಿ ಅಭಿಯೋಜಕರು ಅರ್ಜಿದಾರರು ಮದ್ಯವನ್ನು ದಿನಸಿ ಅಂಗಡಿಯಲ್ಲಿ ಮಾರಾಟ ಮಾಡುತ್ತಿದ್ದರು ಎಂದರು. ಅದಕ್ಕೆ ಆಶ್ಚರ್ಯ ವ್ಯಕ್ತಪಡಿಸಿದ ಪೀಠವು ಪ್ರಾವಿಷನ್ ಸ್ಟೋರಾ? ಅರ್ಜಿದಾರರು ಪ್ರಾವಿಷನ್ ಸ್ಟೋರ್ ಹೊಂದಿದ್ದಾರೆಯೇ? ಏಕೆ ಅದರಲ್ಲಿ ಮದ್ಯ ಮಾರಾಟ ಮಾಡುತ್ತಿದ್ದೀರಿ? ಎಂದು ಪ್ರಶ್ನಿಸಿತು.

## ಪವಿತ್ರಾಗೌಡಗೆ ಜೈಲು ಸಿಬ್ಬಂದಿಗಳಿಂದ ರಾಜಾತಿಥ್ಯ

• **ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿತೆ ಪವಿತ್ರಾಗೌಡಗೆ ಪರಪ್ಪನ ಅಗ್ರಹಾರ ಜೈಲಿನಲ್ಲಿ, ಜೈಲು ಸಿಬ್ಬಂದಿಗಳಿಂದಲೇ ರಾಜಾತಿಥ್ಯ ನೀಡಲಾಗುತ್ತಿದೆ. ಈ ಬಗ್ಗೆ ಪ್ರಶ್ನಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂಬ ಗಂಭೀರ ಆರೋಪ ಕೇಳಿಬಂದಿದೆ. ಅಪರಾಧ ಪ್ರಕರಣವೊಂದರಲ್ಲಿ ಮೂರು ತಿಂಗಳು ಜೈಲಿನಲ್ಲಿದ್ದು, ಜಾಮೀನಿನ ಮೇಲೆ ಹೊರಬಂದಿರುವ ಸಂಧ್ಯಾ ನಾಗರಾಜ್ ಈ ಆರೋಪ ಮಾಡಿದ್ದಾರೆ. ಮತ್ತೊಂದೆಡೆ, ತಮ್ಮ ವಿರುದ್ಧ ಸುಳ್ಳು ಆರೋಪ ಮಾಡಿರುವುದಾಗಿ ಆಪಾದಿಸಿ ಜೈಲಿನ ಮುಖ್ಯ ವೀಕ್ಷಕಿ ದೇವಮ್ಮ ಎಂಬುವರು ದೂರು ನೀಡಿದ್ದು, ಈ ಸಂಬಂಧ ಸಂಧ್ಯಾ ನಾಗರಾಜ್ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಗಂಭೀರ ಸ್ವರೂಪವಲ್ಲದ ಪ್ರಕರಣ (ಎನ್‌ಸಿಆರ್) ದಾಖಲಾಗಿದೆ. ವೈಯಕ್ತಿಕ ಕಾರಣಕ್ಕಾಗಿ ಅಪರಾಧ ಪ್ರಕರಣವೊಂದರಲ್ಲಿ 3 ತಿಂಗಳ ಹಿಂದೆ ಜೈಲು ಸೇರಿದ್ದೆ. ಮಹಿಳಾ ಬ್ಯಾರಕ್‌ನಲ್ಲಿರುವಾಗ ಪವಿತ್ರಾಗೌಡಗೆ ಮನೆಯಿಂದಲೇ ಊಟ ಸಿಗುತ್ತಿತ್ತು. ಮಹಿಳಾ ಸಿಬ್ಬಂದಿಯೊಬ್ಬರೇ ಬಾಕ್ಸ್ ತರುತ್ತಿದ್ದರು. ಸಿಬ್ಬಂದಿ ನೆರವಿನಿಂದ ರಾಜಾತಿಥ್ಯ ಸಿಗುತ್ತಿದೆ. ಜೈಲಿನಲ್ಲಿದ್ದಾಗ ಅಕ್ರಮ ಚಿನ್ನ ಸಾಗಾಟ ಪ್ರಕರಣದಲ್ಲಿ ಜೈಲಿನಲ್ಲಿದ್ದ ರನ್ಯಾರಾವ್ ಹಾಗೂ ಪವಿತ್ರಾಗೌಡಗೆ ಜೈಲಿನ ಗ್ರಂಥಾಲಯದಲ್ಲಿ ಜಗಳವಾಗಿತ್ತು. ಈ ವೇಳೆ, ರನ್ಯಾ ಪರವಾಗಿ ಧ್ವನಿ ಎತ್ತಿದ್ದೆ ಎಂದು ಸಂಧ್ಯಾ ನಾಗರಾಜ್ ಹೇಳಿದ್ದಾರೆ. ಜೈಲಿನ ಸಿಬ್ಬಂದಿ ವಿರುದ್ಧ ಮಾಧ್ಯಮಗಳಲ್ಲಿ ಟೀಕಿಸುತ್ತಿದ್ದಂತೆ ಜೈಲಿನ ಮುಖ್ಯ ವೀಕ್ಷಕಿ ದೇವಮ್ಮ ಅವರು ಸಂಧ್ಯಾ ವಿರುದ್ಧ ದೂರು ನೀಡಿದ್ದಾರೆ. ಅವಮಾನ ಮಾಡುವ ದೃಷ್ಟಿಯಿಂದ ತೇಜೋವಧೆ ಮಾಡಿ, ತಮ್ಮ ವಿರುದ್ಧ ಸುಳ್ಳು ಆರೋಪ ಮಾಡಲಾಗಿದ್ದು, ಸಂಧ್ಯಾ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ದೂರಿನಲ್ಲಿ ಜೈಲು ಸಿಬ್ಬಂದಿ ತಿಳಿಸಿದ್ದಾರೆ.

### ಹಾಳಾಗಿರುವ ವಾರ್ಡ್ ರಸ್ತೆಗಳ ಗುರುತಿಸಲು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಕೃಷ್ಣ ಬೈರೇಗೌಡ ಸೂಚನೆ

# ರಸ್ತೆ ಅಭಿವೃದ್ಧಿಗೆ ₹2000 ಕೋಟಿ ಅನುದಾನ



• **ಬೆಂಗಳೂರು:** ಜಿಬಿಎ ವ್ಯಾಪ್ತಿಯ 5 ನಗರ ಪಾಲಿಕೆಗಳಲ್ಲಿ ವಾರ್ಡ್ ರಸ್ತೆಗಳನ್ನು ಸುಧಾರಿಸಿ ಅಭಿವೃದ್ಧಿಪಡಿಸಲು 2000 ಕೋಟಿ ರೂ. ವಿಶೇಷ ಅನುದಾನ ಬಿಡುಗಡೆ ಮಾಡಲಾಗಿದೆ. ಹಾಳಾಗಿರುವ ವಾರ್ಡ್ ರಸ್ತೆಗಳನ್ನು ಗುರುತಿಸಿ ಅಲ್ಪಾವಧಿಯ ಟೆಂಡರ್ ಕರೆದು ಕಾಮಗಾರಿ ಪ್ರಾರಂಭಿಸಲು ಸೂಚನೆ ನೀಡಲಾಗಿದೆ ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಜಿಬಿಎ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಕುರಿತು ನಡೆದ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೊಸ ಸರ್ಕಾರ ಅಧಿಕಾರ ಸ್ವೀಕರಿಸಿದ ನಂತರ ಜನರ ನಿರೀಕ್ಷೆಗಳು ಸಾಕಷ್ಟಿದ್ದು, ಅವರ ನಿರೀಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡಲು ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿಕೊಂಡಿದೆ ಎಂದರು.

ಬೆಂಗಳೂರಿನಲ್ಲಿ ರಸ್ತೆಗಳ ಪರಿಸ್ಥಿತಿಯನ್ನು ಸುಧಾರಿಸಬೇಕೆಂಬುದು ಜನರ ಪ್ರಮುಖ ನಿರೀಕ್ಷೆಯಾಗಿದೆ. ಈ ನಿಟ್ಟಿನಲ್ಲಿ ಪ್ರಮುಖ ರಸ್ತೆಗಳಾದ ಆರ್ಟೀರಿಯಲ್ ಹಾಗೂ ಸಬ್ ಆರ್ಟೀರಿಯಲ್ ರಸ್ತೆಗಳನ್ನು ಹೊರತುಪಡಿಸಿ, ಹದಗೆಟ್ಟಿರುವ ವಾರ್ಡ್ ರಸ್ತೆಗಳನ್ನು ಅಭಿವೃದ್ಧಿಪಡಿಸಲು 2000 ಕೋಟಿ ರೂ. ವಿಶೇಷ ಅನುದಾನ ಬಿಡುಗಡೆ ಮಾಡಲಾಗಿದೆ. 5 ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಹಾಳಾಗಿರುವ ವಾರ್ಡ್ ರಸ್ತೆಗಳನ್ನು ಗುರುತಿಸಿ, ಅವುಗಳಿಗೆ ಹೊಸದಾಗಿ ಡಾಂಬರೀಕರಣ ಮಾಡಲು ಅಂದಾಜು ಪಟ್ಟಿ ತಯಾರಿಸಿ, ಅಲ್ಪಾವಧಿಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರದಿಂದ ಆದೇಶ ಹೊರಡಿಸಲಾಗಿದೆ ಎಂದು ಹೇಳಿದರು.

ಜಿಬಿಎ ಮುಖ್ಯ ಆಯುಕ್ತರು ಹಾಗೂ 5 ನಗರ ಪಾಲಿಕೆಗಳ ಆಯುಕ್ತರು ತಮ್ಮ ವ್ಯಾಪ್ತಿಯ ಹದಗೆಟ್ಟಿರುವ ರಸ್ತೆಗಳನ್ನು ಪಟ್ಟಿ ಮಾಡಬೇಕು. ಅಗತ್ಯವಿರುವ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಆದಷ್ಟು ಶೀಘ್ರದಲ್ಲಿ ಕಾಮಗಾರಿಗಳನ್ನು ಆರಂಭಿಸಬೇಕು. ಎಲ್ಲಾ ಅಧಿಕಾರಿಗಳು ಆದ್ಯತೆ ಮೇರೆಗೆ ಕೆಲಸ ಪ್ರಾರಂಭಿಸಲು ಸೂಚನೆ ನೀಡಿದ್ದೇನೆ ಎಂದು ಹೇಳಿದರು.

ವಾರ್ಡ್ ರಸ್ತೆಗಳ ಅಂದಾಜು ಹಾಗೂ ಟೆಂಡರ್ ಪ್ರಕ್ರಿಯೆಯನ್ನು ಮುಂದಿನ ಎರಡು ತಿಂಗಳೊಳಗೆ ಪೂರ್ಣಗೊಳಿಸಿ, ನಾಲ್ಕರಿಂದ ಆರು ತಿಂಗಳ ಅವಧಿಯಲ್ಲಿ ಕಾಮಗಾರಿಗಳನ್ನು ಮುಗಿಸುವ ಗುರಿ ಹೊಂದಿದ್ದೇವೆ. ಮಳೆಗಾಲವನ್ನು ಗಮನದಲ್ಲಿಟ್ಟುಕೊಂಡು, ಗುಣಮಟ್ಟಕ್ಕೆ ಯಾವುದೇ ಧಕ್ಕೆಯಾಗದಂತೆ ಮಳೆ ಇಲ್ಲದ ಅವಧಿಯಲ್ಲಿ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಪ್ರಮಾಣಿತ ಕಾರ್ಯವಿಧಾನ ಅನುಸಾರ ಸಂಬಂಧಿತ ಎಲ್ಲಾ ಅಂಗಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲಾಗುವುದು. ಪೂರ್ವಾನುಮತಿ ಇಲ್ಲದೆ ರಸ್ತೆಗಳನ್ನು ಅಗೆಯದಂತೆ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು.

ರಸ್ತೆ ಡಾಂಬರೀಕರಣ ಕಾಮಗಾರಿ ನಡೆಯುವ ಸಂದರ್ಭದಲ್ಲಿ ನಾನು ಸ್ವತಃ ಸ್ಥಳ ಪರಿಶೀಲನೆ ನಡೆಸುತ್ತೇನೆ. ಅಧಿಕಾರಿಗಳಿಗೂ ನಿಯಮಿತ ಪರಿಶೀಲನೆ ನಡೆಸುವಂತೆ ಸೂಚಿಸಲಾಗಿದೆ. ರಸ್ತೆ ಗುಣಮಟ್ಟವನ್ನು ಹೆಚ್ಚಿಸುವುದು ನಮ್ಮ ಆದ್ಯತೆಯಾಗಿದ್ದು, ಗುಣಮಟ್ಟದಲ್ಲಿ ಯಾವುದೇ ರಾಜಿ ಇರುವುದಿಲ್ಲ.

### ಅಭಿವೃದ್ಧಿಗೆ ಹೆಚ್ಚಿನ ಹೂಡಿಕೆ

ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಮೆಟ್ರೋ ವಿಸ್ತರಣಾ ಕಾಮಗಾರಿಗಳಿಗೆ ವೇಗ ನೀಡುವುದು ನಮ್ಮ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ. ನಗರದ ಜನಸಂಖ್ಯೆ ಹಾಗೂ ವಾಹನ ದಟ್ಟಣೆ ವೇಗವಾಗಿ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಸಾರಿಗೆ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಹೂಡಿಕೆ ಹಾಗೂ ಯೋಜನೆಗಳ ತ್ವರಿತ ಅನುಷ್ಠಾನ ಅಗತ್ಯವಾಗಿದೆ ಎಂದು ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹೇಳಿದ್ದಾರೆ.

## ದರೋಡೆ: ಆರೋಪಿಗಳ ಸೆರೆಗೆ ವಿಶೇಷ ತಂಡ

• **ಬೆಂಗಳೂರು:** ಉದ್ಯಮಿ ಆರ್.ಐ. ಶಿವಶಂಕರ್ ಅವರನ್ನು ಅಪಹರಿಸಿ 1.09 ಕೋಟಿ ರೂ. ಹಣ ದರೋಡೆ ಮಾಡಿ ಪರಾರಿಯಾಗಿರುವ ಆರೋಪಿಗಳ ಪತ್ತೆಗಾಗಿ ಮಾದನಾಯಕನಹಳ್ಳಿ ಪೊಲೀಸರು ಎರಡು ವಿಶೇಷ ತಂಡಗಳನ್ನು ರಚಿಸಿ ಶೋಧ ಕಾರ್ಯ ಆರಂಭಿಸಿದ್ದಾರೆ.

ಶಿವಶಂಕರ್ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಮೊಬೈಲ್ ಕರೆಗಳ ವಿವರಗಳನ್ನು ಸಂಗ್ರಹಿಸುತ್ತಿದ್ದು, ಘಟನೆ ನಡೆದ ಸ್ಥಳದ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿದ್ದಾರೆ. ಆರೋಪಿಗಳು ಕೃತ್ಯದ ಬಳಿಕ ಹೊರರಾಜ್ಯಕ್ಕೆ ಪರಾರಿಯಾಗಿರುವ ಶಂಕೆ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಒಂದು ತಂಡವನ್ನು ಹೊರರಾಜ್ಯಕ್ಕೂ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮುನಿಸ್ವಾಮಿರೆಡ್ಡಿ ಲೇಔಟ್ ನಿವಾಸಿಯಾಗಿರುವ ಉದ್ಯಮಿ ಶಿವಶಂಕರ್ ಅವರು ತಮ್ಮ ಸ್ನೇಹಿತ ಚೇತನ್ ಜತೆ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಕುದುರೆಗೆರೆ ಗಣೇಶ ದೇವಸ್ಥಾನದ ಬಳಿ ಕಾರನ್ನು ಅಡ್ಡಗಟ್ಟಿದ ಏಳು ಮಂದಿ ದುಷ್ಕರ್ಮಿಗಳು ದೊಣ್ಣೆ ಹಾಗೂ ಚಾಕುವಿನಿಂದ ಹಲ್ಲೆ ನಡೆಸಿ ಅವರನ್ನು ಅಪಹರಿಸಿದ್ದರು. ಬಳಿಕ ಕಾರಿನಲ್ಲಿದ್ದ 74 ಲಕ್ಷ ರೂ. ನಗದು ದೋಚಿದ ದರೋಡೆಕೋರರು, ಶಿವಶಂಕರ್ ಅವರ ಮನೆಯಲ್ಲಿ ಇರಿಸಲಾಗಿದ್ದ 35 ಲಕ್ಷ ರೂ. ಹಣವನ್ನೂ ತರಿಸಿಕೊಂಡು ಪರಾರಿಯಾಗಿದ್ದರು. ಇದೇ ವೇಳೆ, ಶಿವಶಂಕರ್ ಈ ಹಿಂದೆ ರೈಸ್ ಪುಲ್ಲಿಂಗ್ ದಂಧೆಗೆ ಸಂಬಂಧಿಸಿದ ಪ್ರಕರಣದಲ್ಲಿ ಭಾಗಿಯಾಗಿದ್ದು, ಕಳೆದ ವರ್ಷ ವಿವಿಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈಗ ದರೋಡೆಗೆ ಒಳಗಾಗಿರುವ ಹಣವೂ ರೈಸ್ ಪುಲ್ಲಿಂಗ್ ವ್ಯವಹಾರಕ್ಕೆ ಸಂಬಂಧಿಸಿರಬಹುದೆಂಬ ಅನುಮಾನ ವ್ಯಕ್ತವಾಗಿದ್ದು, ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿವಶಂಕರ್ ಅವರು ಸ್ನೇಹಿತರ ಪಾಲುದಾರಿಕೆಯಲ್ಲಿ ಡಿ-360 ಸೆಕ್ಯೂರಿಟಿ ಏಜೆನ್ಸಿ ನಡೆಸುತ್ತಿದ್ದು, ರೈಸ್ ಪುಲ್ಲಿಂಗ್ ಹಾಗೂ ವಿಗ್ರಹಗಳ ಖರೀದಿ ವ್ಯವಹಾರದಲ್ಲಿಯೂ ತೊಡಗಿಸಿಕೊಂಡಿದ್ದರು. ಆಂಧ್ರಪ್ರದೇಶದ ಮೊಹಮದ್ ಪರ್ವೇಜ್, ಜಿಪ್ಸನ್ ಮತ್ತು ಅಲಿ ಅವರೊಂದಿಗೆ ಅಮೆರಿಕನ್ ನ್ಯೂಕ್ಲಿಯರ್ ರಿಸರ್ಚ್ ಸೆಂಟರ್ ಹೆಸರಿನಲ್ಲಿ ಕಂಪನಿ ಸ್ಥಾಪಿಸಲು ಮುಂದಾಗಿದ್ದರು. ಈ ವ್ಯವಹಾರಕ್ಕಾಗಿ ಪಾಲುದಾರರು ಹಣ ಹೂಡಿಕೆ ಮಾಡಲು ನಿರ್ಧರಿಸಿದ್ದು, ಜೂ. 13ರಂದು 35 ಲಕ್ಷ ರೂ. ಗಳನ್ನು ಮನೆಗೆ ತಂದಿಟ್ಟಿದ್ದರು. ಸೋಮವಾರ ರಾತ್ರಿ ಯಲಹಂಕದ ಹೋಟೆಲ್‌ನಲ್ಲಿ ಪರ್ವೇಜ್ ಹಾಗೂ ಇತರರಿಂದ 74 ಲಕ್ಷ ರೂ. ಪಡೆದು ಮನೆಗೆ ತೆರಳುತ್ತಿದ್ದ ವೇಳೆ ಈ ದರೋಡೆ ನಡೆದಿತ್ತು.

ಪ್ರಕರಣದ ಹಿಂದೆ ಪರಿಚಯಸ್ಥರ ಕೈವಾಡವಿರುವ ಸಾಧ್ಯತೆ ಹೆಚ್ಚಿರುವುದಾಗಿ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದು, ತನಿಖೆ ಮುಂದುವರಿದಿದೆ.

## ವಿಚಾರ ಸಂಕಿರಣ ಇಂದು

• **ಬೆಂಗಳೂರು:** ಬೆಂಗಳೂರು ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದ ವತಿಯಿಂದ ರಂಗಭೂಮಿ ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ ಅವರಿಗೆ ಅಭಿನಂದನಾ ಸಮಾರಂಭವನ್ನು ಜೂ.19 ರಂದು ಬೆಳಗ್ಗೆ 10.30ಕ್ಕೆ ಜ್ಞಾನಭಾರತಿ ಆವರಣದ ಪ್ರೊ. ವೆಂಕಟಗಿರಿಗೌಡ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ತರಳಬಾಳು ಶ್ರೀಮಠದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಡಾ.ಜಯಕರ ಎಸ್.ಎಂ. ಅಧ್ಯಕ್ಷತೆ ವಹಿಸಲಿದ್ದು, ಡಾ.ಗೊ.ರು.ಚನ್ನಬಸಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸಂಗೀತ ನಿರ್ದೇಶಕ ಡಾ. ಹಂಸಲೇಖ, ಕುಲಪತಿಗಳು ಡಾ.ಕೆ.ರಾಮಕೃಷ್ಣಯ್ಯ, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ.ಕೆ.ವಿ.ನಾಗರಾಜಮೂರ್ತಿ, ಕುಲಸಚಿವೆ ಕೆ.ಟಿ.ಶಾಂತಲಾ, ಪ್ರದರ್ಶನ ಕಲಾ ವಿಭಾಗ ಮುಖ್ಯಸ್ಥರು ಡಾ.ಹಂಪಿ ನಾಗೇಂದ್ರ, ಸಹಾಯಕ ಪ್ರಾಧ್ಯಾಪಕರು ಡಾ.ಶಿವಣ್ಣ ಎಸ್. ಉಪಸ್ಥಿತರಿರಲಿದ್ದಾರೆ.

## ಚಿತ್ರಕಲೆಗಳಿಂದ ಸಂಸ್ಕೃತಿ ಜೀವಂತ



• **ಬೆಂಗಳೂರು:** ನಮ್ಮ ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಬಿಂಬಿಸುವಂತಹ ಚಿತ್ರಕಲೆಗಳು ಹೆಚ್ಚು ಬರಬೇಕು ಎಂದು ನಟ ಸುಚೇಂದ್ರ ಪ್ರಸಾದ್ ತಿಳಿಸಿದರು.

ನಗರದ ವರ್ಣ ಆರ್ಟ್ ಗ್ಯಾಲರಿಯಲ್ಲಿ ಕರ್ನಾಟಕ ಆರ್ಟ್ ಫೌಂಡೇಶನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜನೆಗೊಂಡಿದ್ದ ಎರಡು ದಿನದ ಅಶ್ವಾನಂದರ ಚಿತ್ರಕಲಾ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹೀಗೆ ಚಿತ್ರಕಲೆಗಳ ಮೂಲಕವೂ ನಮ್ಮ ಸಂಸ್ಕೃತಿಯ ವಿಶೇಷತೆಗಳನ್ನು ತಿಳಿಸಿದ್ರೆ ಅದರಲ್ಲಿ ಜನಸಾಮಾನ್ಯರು ಶೀಘ್ರವೇ ಇವುಗಳತ್ತ ಒಲವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು. ಅಶ್ವಾನಂದ ಅವರು ತಮ್ಮದೇ ಆದಂತ ಶೈಲಿಯಲ್ಲಿ ಈ ನಾಡಿನ ಸಂಸ್ಕೃತಿಯನ್ನು ಉಳಿಸಲು, ಚಿತ್ರಕಲೆಗಳಿಗೆ ಜೀವ ತುಂಬಿರುವುದು ವಿಶೇಷವೇ. ಯಾವುದಾದರೂ ಒಂದು ಚಿತ್ರದ ಮೂಲಕ ಒಂದು ವಿಷಯವನ್ನು ವ್ಯಕ್ತಪಡಿಸುವ ವೈಖರಿ ಭಿನ್ನತೆಯಿಂದ ಕೂಡಿದೆ. ಅಶ್ವಾನಂದರ ಚಿತ್ರಗಳು ಅವರ ಮೂಡಿಸುವಂತಹ ಗೆರೆಗಳು ಬಹಳ ಅದ್ಭುತವಾಗಿ ಮೂಡಿಬಂದಿವೆ ಎಂದು ತಿಳಿಸಿದರು.

## ತಿಂಗಳೊಳಗೆ ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ



• **ಬೆಂಗಳೂರು:** ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆ, ಆರ್ಟೀರಿಯಲ್, ಸಬ್ ಆರ್ಟೀರಿಯಲ್ ಹಾಗೂ ವಾರ್ಡ್ ಮಟ್ಟದ ರಸ್ತೆಗಳಲ್ಲಿ ಕಂಡುಬರುವ ಕಸದ ಬ್ಲ್ಯಾಕ್ ಸ್ಪಾಟ್‌ಗಳನ್ನು ಗುರುತಿಸಿ, ಪೌರಕಾರ್ಮಿಕರು ಮತ್ತು ಆಟೋ ಟಿಪ್ಪರ್ ಸಿಬ್ಬಂದಿಯನ್ನು ಒಳಗೊಂಡ ವಿಶೇಷ ತಂಡಗಳನ್ನು ರಚಿಸಿ ಒಂದು ತಿಂಗಳೊಳಗೆ ಸಂಪೂರ್ಣವಾಗಿ ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ ಮಾಡುವಂತೆ ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆಯನ್ನು ಕಸ ಮುಕ್ತ ನಗರವನ್ನಾಗಿಸುವ ಧ್ಯೇಯದೊಂದಿಗೆ, ಪ್ರತಿ ವಾರ್ಡ್‌ನ ಬ್ಲಾಕ್ ಮಟ್ಟದಲ್ಲಿ ಘನ ತ್ಯಾಜ್ಯ ನಿರ್ವಹಣಾ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು ಗುರುವಾರ ಹಮ್ಮಿಕೊಳ್ಳಲಾದ ಸಮಗ್ರ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ವ್ಯವಸ್ಥೆ ಕಾಪಾಡುವುದು, ಮನೆ-ಮನೆಯಿಂದ ಕಸ ಸಂಗ್ರಹಣೆ, ತ್ಯಾಜ್ಯ ವಿಂಗಡಣೆ ಮತ್ತು ಸಾಗಣೆ, ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆ, ಬಲ್ಕ್ ತ್ಯಾಜ್ಯ ನಿರ್ವಹಣೆ ಹಾಗೂ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳ ಕುರಿತು ಸವಿಸ್ತಾರ ಚರ್ಚೆ ನಡೆಸಿ ವಲಯ ಜಂಟಿ ಆಯುಕ್ತರುಗಳು, ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳ ಮೇಲುಸ್ತುವಾರಿಯಲ್ಲಿ ದಕ್ಷ ಕಾರ್ಯನಿರ್ವಹಣೆಗೆ ಅಗತ್ಯ ಕ್ರಮವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.


- ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ಸೂಚನೆ
- ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತಾ ವ್ಯವಸ್ಥೆ ಕಾಪಾಡುವುದು, ಮನೆ-ಮನೆಯಿಂದ ಕಸ ಸಂಗ್ರಹಣೆ,

### ಸಂಕಷ್ಟದಲ್ಲಿ ಮಾವು ಬೆಳೆಗಾರರು

# ಗಣನೀಯವಾಗಿ ಮಾವಿನ ದರ ಕುಸಿತ

▸ ದೇವಿತಾ.ಸಿ.ಸುಬ್ಬಯ್ಯ

• **ಬೆಂಗಳೂರು:** ಹಣ್ಣುಗಳ ರಾಜ ಮಾವಿನ ದರ ಗಣನೀಯವಾಗಿ ಕುಸಿದಿದ್ದು, ವರ್ಷದಿಂದ ಮಾವು ಫಸಲನ್ನೇ ನಂಬಿಕೊಂಡಿದ್ದ ಬೆಳೆಗಾರರ ಬದುಕು ಬೀದಿಗೆ ಬರುವಂತಾಗಿದೆ. ಈ ವರ್ಷ ಇಳುವರಿ ಬಂದಿರುವುದೇ ಶೇ.30ರಷ್ಟು, ಹೀಗೆ ಬಂದ ಇಳುವರಿಗೂ ಬೆಲೆಯಿಲ್ಲದಂತಾಗಿದೆ. ರಾಜ್ಯ ಪ್ರತಿ ವರ್ಷ 2 ಲಕ್ಷ ಟನ್‌ಗೂ ಅಧಿಕ ಮಾವಿನ ತಿರುಳು (ಪಲ್ಪ್) ಗಲ್ಫ್ ರಾಷ್ಟ್ರಗಳಿಗೆ ರಫ್ತಾಗುತ್ತಿತ್ತು. ಆದರೆ ಈ ಬಾರಿ ಯುದ್ಧದ ಹಿನ್ನೆಲೆಯಲ್ಲಿ ಗಲ್ಫ್ ರಾಷ್ಟ್ರಗಳಿಗೆ ಮಾವಿನ ತಿರುಳು ರಫ್ತಾಗಿಲ್ಲ. ಜತೆಗೆ ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಉತ್ತರ ಪ್ರದೇಶ ಮತ್ತಿತರ ಭಾಗಗಳ ಮಾವು ಏಕಕಾಲಕ್ಕೆ ಮಾರುಕಟ್ಟೆಗೆ ಬಂದಿದೆ. ಇದರೊಂದಿಗೆ ಕೊಯ್ಲು ಸಂದರ್ಭದಲ್ಲಿಯೇ ಎರಡು ವಾರದಿಂದ ಮಳೆಯ ಹಾವಳಿ. ಹೀಗಾಗಿ ಹಣ್ಣು ಕಿತ್ತರೂ ಹೆಚ್ಚು ದಿನ ಇಡಲಾಗುತ್ತಿಲ್ಲ, ಮೂರು-ನಾಲ್ಕು ದಿನದಲ್ಲಿ ಹಾಳಾಗುತ್ತದೆ. ಹಣ್ಣಿನ ಗುಣಮಟ್ಟ ಕಾಯ್ದುಕೊಳ್ಳಲಾಗುತ್ತಿಲ್ಲ, ಹೀಗಾಗಿ ಮಾವು ದರ ಗಣನೀಯವಾಗಿ ಇಳಿಕೆಯಾಗಿದೆ. ಒಂದು ಟನ್ ಮಾವು ಬೆಳೆಯಲು ರೈತರಿಗೆ ಕನಿಷ್ಠ 12 ಸಾವಿರ ರೂ. ಖರ್ಚು ಬರುತ್ತದೆ. ಆದರೆ ಇದೀಗ 4 ಸಾವಿರ ಸಿಗುತ್ತಿದೆ. ಸಗಟು ದರದಲ್ಲಿ ಕೆ.ಜಿ.ಗೆ 4-6 ರೂ.ಗೆ ಇಳಿದಿದೆ. ಅದರಲ್ಲಿ ಕೂಲಿ, ಸಾಗಾಣಿಕೆ ವೆಚ್ಚ ಎಲ್ಲವನ್ನೂ ಕಳೆದರೆ 2-3 ಸಾವಿರ ರೂ. ಸಿಗುತ್ತಿದೆ. ವರ್ಷವಿಡೀ ಕಾದು ಕುಳಿತ ರೈತರಿಗೆ ಇದು ದೊಡ್ಡ ಹೊಡೆತ ನೀಡಿದೆ ಎಂದು ಹೊಸದಿಂಗತಕ್ಕೆ ರೈತರೊಬ್ಬರು ತಿಳಿಸಿದ್ದಾರೆ.



ಪ್ರತಿ ವರ್ಷ 2 ಲಕ್ಷ ಟನ್‌ಗೂ ಅಧಿಕ ಮಾವಿನ ಹಣ್ಣು ರಫ್ತು

### 4 ರೂ. ಸಬ್ಸಿಡಿಗೆ ಒತ್ತಾಯ

ಹವಾಮಾನ ವೈಪರೀತ್ಯದಿಂದ ಶೇ.30ರಷ್ಟು ಮಾತ್ರ ಬೆಳೆ ಬಂದಿದೆ. ಇದೀಗ ಅದಕ್ಕೂ ಬೆಲೆಯಿಲ್ಲದೆ ಸಾಲದ ಸುಳಿಗೆ ಸಿಲುಕುವಂತಾಗಿದೆ. ನಾವು 25 ಎಕರೆಯಲ್ಲಿ ತೋತಾಪುರಿ ಬೆಳೆದಿದ್ದೇವೆ. 100-120 ಟನ್ ಉತ್ಪಾದನೆಯಾಗುತ್ತದೆ. ಸಾಮಾನ್ಯವಾಗಿ ಈ ತಳಿ ಜ್ಯೂಸ್‌ಗೆ ಹೆಚ್ಚು ಬಳಕೆಯಾಗುತ್ತದೆ. ಹೀಗಾಗಿ ಇದರ ಪಲ್ಪ್ ಹೊರರಾಷ್ಟ್ರಗಳಿಗೂ ಹೋಗುತ್ತದೆ. ಆದರೆ ಈ ಬಾರಿ ಯುದ್ಧದಿಂದಾಗಿ ಗಲ್ಫ್ ರಾಷ್ಟ್ರಗಳಿಗೆ ಮಾವಿನ ತಿರುಳು ರಫ್ತಾಗುತ್ತಿಲ್ಲ. ಕಳೆದ ವರ್ಷವೂ ಇದೇ ರೀತಿ ಬೆಲೆ ಇಳಿಕೆಯಾದ ಸಂದರ್ಭದಲ್ಲಿ ಸರ್ಕಾರ ಕೆ.ಜಿ.ಗೆ 4 ರೂ. ಪ್ರೋತ್ಸಾಹ ಧನ ನೀಡಿತ್ತು. ಅದೇ ರೀತಿ ಈ ವರ್ಷವೂ ಸರ್ಕಾರ ಪ್ರೋತ್ಸಾಹ ಧನ ನೀಡಲಿ.

“ಗಲ್ಫ್ ರಾಷ್ಟ್ರಗಳಿಗೆ ಮಾವಿನ ತಿರುಳು ರಫ್ತಾಗಲಿಲ್ಲ, ಜತೆಗೆ ಅನ್ಯ ರಾಜ್ಯಗಳಿಂದಲೂ ಮಾವು ಹೆಚ್ಚು ಬಂದಿದೆ. ಹೀಗಾಗಿ ಮಾವು ದರ ಇಳಿಕೆಯಾಗಿದೆ. ಹೀಗಾಗಿ ರೈತರಿಗೆ ಪ್ರತಿ ಕೆ.ಜಿ.ಗೆ 4 ರೂ. ಪ್ರೋತ್ಸಾಹಧನ ನೀಡುವಂತೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಚಿಕ್ಕಬಳ್ಳಾಪುರ ಮತ್ತು ಕೋಲಾರ ಭಾಗಗಳಲ್ಲಿ ಇದೀಗ ಮಾವು ಬಂದಿರುವುದರಿಂದ ಈ ಭಾಗಗಳ ರೈತರಿಗೆ ಮಾತ್ರ ಪ್ರೋತ್ಸಾಹ ಧನ ಸಿಗಲಿದೆ.

■ ವೇದಮೂರ್ತಿ, ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವ್ಯವಸ್ಥಾಪಕ ನಿರ್ದೇಶಕ.



“ತೋಟಗಾರಿಕೆ ಇಲಾಖೆ ಮತ್ತು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದಿಂದ ಬೆಳೆಗಾರರಿಗೆ ಯಾವುದೇ ರೀತಿಯ ನೆರವು ಸಿಗುತ್ತಿಲ್ಲ. ಮಾವು ಬೆಳೆಯ ರೋಗಗಳನ್ನು ಹತೋಟಿಗೆ ತರುವುದು, ಗುಣಮಟ್ಟ ಮತ್ತು ಇಳುವರಿ ಹೆಚ್ಚಳಕ್ಕೆ ಬೇಕಾದ ಕ್ರಮಗಳನ್ನು ಕೈಗೊಳ್ಳುವುದು, ಸೂಕ್ತ ಬೆಲೆ ಕೊಡಿಸುವಲ್ಲಿ ಕ್ರಮ ಕೈಗೊಳ್ಳುವಂತಾಗಬೇಕು.

■ ಶ್ರೀಕಾಂತ್ ಡಿ.ಎಸ್., ಮಾವು ಬೆಳೆಗಾರ, ಕೋಲಾರ.

## ಫೋನ್-ಇನ್ ಕಾರ್ಯಕ್ರಮ

• **ಬೆಂಗಳೂರು:** ಎಸ್.ಐ.ಆರ್. ಕುರಿತು ನಾಗರಿಕರ ಗೊಂದಲಗಳ ಪರಿಹಾರಕ್ಕಾಗಿ ಜೂ.20ಕ್ಕೆ ಅವರ ಜಿಲ್ಲಾ ಚುನಾವಣಾಧಿಕಾರಿಗಳಿಂದ ಫೋನ್-ಇನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಭಾರತ ಚುನಾವಣಾ ಆಯೋಗದ ನಿರ್ದೇಶನಾನುಸಾರ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಆಯುಕ್ತರು, ಬೆಂಗಳೂರು ದಕ್ಷಿಣ ನಗರ ಪಾಲಿಕೆ ರವರ ವ್ಯಾಪ್ತಿಯಲ್ಲಿ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಅವಶ್ಯವಿರುತ್ತದೆ ಎಂದರು. ಗೊಂದಲ ಹಾಗೂ ದೂರುಗಳೇನಾದರೂ ಇದ್ದಲ್ಲಿ ದೂರವಾಣಿ ಸಂಖ್ಯೆ 9480685704 ಕರೆ ಮಾಡಿ ಬಗೆಹರಿಸಿಕೊಳ್ಳಬಹುದಾಗಿದೆ.

### ಇಂದು ನಗರದಲ್ಲಿ...

- ರಕ್ಷಾ ಫೌಂಡೇಶನ್ ಸಂಸ್ಥೆ ವತಿಯಿಂದ ಲಲಿತಾ ಸಹಸ್ರನಾಮ ಪೂಜೆ
- ಸ್ಥಳ: ಚಂದ್ರಗುಪ್ತ ಮೌರ್ಯ ಆಟದ ಮೈದಾನ, ಜಯನಗರ
- ಬೆಳಗ್ಗೆ 9.30

- ಬೆಂಗಳೂರು ವಿಶ್ವವಿದ್ಯಾಲಯ ಪ್ರದರ್ಶನ ಕಲಾ ವಿಭಾಗದ ವತಿಯಿಂದ ರಂಗಭೂಮಿ ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣ
- ಸ್ಥಳ: ಜ್ಞಾನಭಾರತಿ ಆವರಣದ ಪ್ರೊ. ವೆಂಕಟಗಿರಿಗೌಡ ಸಭಾಂಗಣ
- ಬೆಳಗ್ಗೆ 10.30

- ಭೂ-ಸ್ವಾಧೀನ, ನ್ಯಾಯಸಮ್ಮತ ಹಕ್ಕುಗಳ ಕಾಯ್ದೆ ಕುರಿತು ರಾಜ್ಯಮಟ್ಟದ ಚರ್ಚೆ
- ಸ್ಥಳ: ಗಾಂಧಿಭವನ
- ಬೆಳಗ್ಗೆ 10.30

**BEFORE THE MOTOR ACCIDENT CLAIMS TRIBUNAL AT BENGALURU (SCCH-13)**
**M.V.C. No. 4253/2025**

**BETWEEN: Smt. Veena V** & Ors ... **PETITIONER**
**AND: Sri. Shreyas S** & Anr ... **RESPONDENTS**

**NOTICE TO RESPONDENT No.1**

**Sri. Shreyas .S.** S/o Somanna Suresh, aged about 32 years, R/at: No.301, Ramdas Road, New Matha English School, Yeshwanthapura, Bengaluru-560022

Whereas, the petitioner in the above case has filed the above claim petition against you, claiming compensation of Rs.50,00,000/- (Rs. Fifty Lakhs Only) for the death of one Subramani G N in a R.T.A. caused by your KA Seltos car bearing Reg. No.KA-03-NH-3392 on 05.04.2025, at about 10-00a.m., near V Guttahalli cross, on Kolar -Mulabagal NH-75 road, Mulabagal Taluk, Kolar District. Hence, you are hereby summoned to appear before this court in person or by a pleader duly instructed, and able to answer all the material questions relating to the case on **13/07/2026 before** (SCCH 13) at **11.00 A.M.** failing which the above cases will be disposed off ex parte.

Given under my hand and the seal of this court, on this 12/06/2026

By order of the Court, Assistant Registrar, Court of Small Causes, Bangalore

**N. MANJUNATH**, Advocate
No.3, Amar Towers, 1st Cross, Gandhinagar, Bengaluru-09.

## CHANGE OF NAME

I, **BABU KUMAR PANDIYAN**, son of Sri, Subramani resident of No.7, Maruthi Nagar, BEML Nagar, K. G. F. 563 115, do hereby change my name from **BABU KUMAR PANDIYAN to BABU KUMAR PANDIYAN, S.** as per my court affidavit registered No. 15188, dt. 17.6. 2026, duly signed by **S. Thangaraj**, Public Notary, KGF.

## PUBLIC NOTICE

Public are here by informed that my client **Gulab Sha** W/o Riyaz khan, D/o Noorsab residing at Kondapura, Kamaganahalli, Chikkaballapur. 561213 My client married Sri. Riyaz Khan, S/o Nayath Khan, after marriage my client lived together as husband and wife and the said marriage has been took place as per Mohammadan law out of the said wed lock, my client ha begotten a female child viz., Ume Zainab, who is aged about 6 years my husband sri. Riyaz Khan left the company of my client very long time and my client cannot able to feed her daughter and as such my client has given adoption to Mohammed Shoukath and Smt Noor Asma as such you have to give consent along with my client to give adoption of child in favor of Mohammed Shoukath and Smt Noor Asma W/o Mohammed Shoukath.

I, therefore hereby call upon you to give consent for adoption within 7 days from the date of receipt of this notice, failing which my client will proceed for execution of adoption deed in favor of Mohammed Shoukath, and Smt Noor Asthma W/o Mohammed Shoukath holding you liable for all the costs and consequences thereof.

**S. MALLIKARJUNA SWAMY Advocate,**
No.1133, Narayanappa Building,
1st Floor, 1st Main, Yeswanthapura,
Bangalore -560022
(Mobile No. 9902142701, 9686065081)

**IN THE COURT OF THE HON'BLE 2nd J.M.F.C AT MALUR**
**CMC. No.144/2026**

**Petitioners: Manjullamma &other**
V/S
**Respondent: The Thahasildar**

**1. Manjullamma** W/o Late Krishnappa Aged about 49 years. **2. Manoj. K** S/o Late Krishnappa, Aged about 22 years, R/o Kadadenahalli village Kasaba Hobli, Malur Tq.

**PUBLIC NOTICE**

The above petitioners have filed the above petition 13(3) of registration of birth and death Act 1969, for issue of death certificate in their favour the deceased Krishnappa S/o Late Narayanappa. Died on: 15-09-2007 at her residency of Kadadenahalli village Kasaba Hobli Malur TQ Kolar dist. Any parties who are interested in the same may contest the case before hon'ble court personally or through counsel, the preceding for issuing of the death certificate is set down 14.07.2026 at 11 AM before 2nd Addl. civil judge and JMFC At Malur,

Given under my hand and seal of the court on this 17th day June 2026

**BY ORDER OF THE COURT**
**Shirastedar,**
**THE COURT OF THE HON'BLE 2nd J.M.F.C AT MALUR**

Advocate for petitioner: **Sagar gowda .Y.C.**
V.N.K.Complex 2nd floor, Malur
Place: Malur.

**IN THE COURT OF THE PRINCIPAL CIVIL JUDGE JUNIOR DIVISION AND J.M.F.C. AT ANEKAL**
**C.MIS. No.880 OF 2026**

**BETWEEN: SRI. B.R. PRAKASH** & OTHERS... **PETITIONERS**
**AND: THE CHIEF OFFICER**, Town Municipal Corporation Anekal Town & Anekal Taluk, BANGALORE URBAN DISTRICT ...**RESPONDENT**

**PUBLIC NOTICE**

The Petitioners mother Smt. Narasamma, W/o Late B.J. Raman was died on 13.09.1984 (Thirteenth day of September One Thousand, Nine Hundred, Eighty Four)at Sri. Vani Nilaya, N.R. Extension, Old Mysore Bank Road, Anekal Town, Anekal Taluk, Bangalore Urban District, leaving behind him her two sons and a daughter by name 1. Sri. B.R. Prakash, 2. Smt. Veena, S.R. and 3. Sri. B.R. Ravikumar, and they are joint filed this petition for obtaining death certificate of deceased Smt.Narasamma in favour of petitioners. Hence the petitioners have made a petition before the Hon'ble Principal Civil Judge Junior Division and JMFC at Anekal under section 13(3) of the Registration of Birth and deaths Act 1969 read with rule 10 (3) of the Karnataka Registration of Birth and death Rules 1970 and praying for pleased to direct to THE CHIEF OFFICER, Town Municipal Corporation, Anekal Town, Anekal Taluk, Bangalore Urban District for issue death certificate of the petitioners mother Smt. Narasamma, W/o Late B.J. Raman. Interested parties are hereby warned to appear in this court in person or by a pleader duly instructed on **27-07-2026** at 11:00 AM, in forenoon to show cause against the petition filing where in the matter will be heard and disposed off.

Given under my hand and the seal of this court on 18-06-2026.

By order of the court, Sheristedar, Civil Judge Jr Dvn and JMFC Court at Anekal.

**Sri. NAGARAJAPPA. B.E**, Advocate
No. 2, STB Complex, In-front of court Complex, Attibele Road, Anekal Town, Bangalore-562106.

**By order of the Court**
**Senior Sheristedar**
**Prl. Senior Civil Judge & JMFC Court, Sira.**

## ಜಾಹೀರಾತಿಗಾಗಿ ಸಂಪರ್ಕಿಸಿ:
## 9845438807, 9611755391

## CHANGE OF NAME

I, **A.Thennarasi** wife of No. 6396530N, Rank: Hav. Name: SOUNDAR. V. residing at No. 296, New Oriental Line, Coromandel post, K. G. F. 563 118 do hereby change my name from **A. Thennarasi to THENNARASI.A.** as per my court Affidavit Regd. No.15191, dt.17.6. 2026, duly signed by **S. Thangaraj**, Public Notary, KGF.

## CHANGE OF NAME

**We, Sri. Manu K.M.,** S/o Mallikarjun, aged about 26 years, and **Smt. Amruthavarshini M.,** W/o Sri. Manu K.M., aged about 23 years, both residing at Kala Basavanahundi Village, Talakadu Hobli, T. Narasipura Taluk, Mysuru District - 571122, today at Bangalore, have changed our minor daughter's name from **MALLIKARJUN.M** to **HETHVIK.M,** vide affidavit dated 18/6/2026 sworn to before K V Bachi Reddy Advocate and Notary Bangalore.

## CHANGE OF NAME

I, **Joseph Thomas** son of Thomas, residing at Balaji Layout, Ganagalu Road, Hoskote Town, hereby declare that my name in Aadhar, PAN Card is mentioned as **JOSEPH THOMAS.** But in my school records it is mentioned as **JOSEPH.** I state that both the names belong to me only. I declare that I have changed my name as **JOSEPH THOMAS** and will be called as **JOSEPH THOMAS** only in future as per affidavit sworn to before **C.S. Ramamurthy Rao,** Advocate & Notary, Hoskote, on 18.6.2026.

## CHANGE OF NAME

I, **BENEDICTA LAZARADO** W/o Mr. Gilbert Lazarado, residing at 203, Prabhat Royal, First Main, Krishna Reddy Layout, Horamavu Signal, Banaswadi, Kalyan Nagar, Bengaluru – 560043,

do hereby declare that I have changed my name from **BENEDICTA D'SOUZA to BENEDICTA LAZARADO** consequent to my marriage with Mr. Gilbert Lazarado.

I further declare that **BENEDICTA D'SOUZA and BENEDICTA LAZARADO** are the names of one and the same person, i.e., myself. Affidavit dated 6th May 2025, before Notary **Shri. Prasad shetty K B**

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

## CHANGE OF NAME

I, **No.6396530N**, Rank: Hav, Name: **SOUNDAR. V.** son of Sri. Varadaraj, residing at No. 296, New Oriental Line, Coromandel post, K. G. F. 563 118, do hereby change my name from **V. Soundar to SOUNDAR. V.** as per my Court Affidavit, Regd. No. 15190, dt.17.2026 duly signed by **S. Thangaraj**, Public Notary, KGF.

## CHANGE OF NAME & DOB

I, **MEGHANA NAYAKA N** D/o Nagaiah M, residing at No.42, 5th Cross, Munivenkatappa Building, A.K. Colony, Jalahalli Village, BBMP (Central), Bangalore-560 013, do hereby state that my name is wrongly mentioned as **MEGHANA NAIK** and date of birth is mentioned as 19.02.2000 in Aadhar Card, PAN Card, Voter ID, Bank Pass Book and in Passport. I hereby declare it to change my name as **MEGHANA NAYAKA N** and my date of birth is 19.02.2001 as mentioned in SSLC certificate, in allother documents, vide Affidavit sworn to before **B. Jyshree,** on 12.06.2026.

**BEFORE THE COURT OF MOTOR ACCIDENT CLAIMS TRIBUNAL AT BANGALORE**
**M.V.C. NO. 3603/2025 (SCCH-02)**

**Sri. Basavaraj ... PETITIONER** -Vs-
**Jagadish .B.R** and another ... **RESPONDENTS**

**NOTICE TO RESPONDENT NO.1**

**Sri. Jagadish. B.R.** S/o Ranga Swamaiah, No.36, VPKH No.471/36, Thataguni, Kanakapura Main road, Bangalore-560082

The petitioner has filed the above case against you and another for compensation of Rs. 20,00,000/- for the injuries sustained by him in Road Traffic Accident, caused by your Auto bearing Registration No. KA-01-AF-0318, the petitioner was proceeding in Motor cycle bearing Reg No. KA-05-QH-2558, on Kanakapur Bangalore Main road, near Agara Cross, Kengeri hobli, Bangalore south at Bangalore on 22.04.2025 at about 7.30 PM and you are the owner of the afore said Auto.

You are hereby directed to appear the Hon'ble Court M.A.C.T. (SCCH-02) on **04/08/2026 at 11:00 A.M.** either in person or through your Advocate to answer the claim. If you are fail to appear before the court on the said day, either in person or through your Advocate, you will be placed Ex-Parte and case will be disposed off in accordance with law.

Given under my hand and a seal of the Court on this 15/06/2026

By order of the Court, Assistant Registrar, Court of Small Causes, Bangalore

**K.B. KUMARA**, Advocate
No.105, 1st Floor, Kurubara Sangha Building, 1st main, Kanakadasa Circle, Gandhinagar, Bangalore-560009

**BEFORE THE HON'BLE II ADDL. SENIOR CIVIL JUDGE AND C.J.M., AT MYSURU**
**O.S. No : 213/2025**

**Plaintiffs Sri. Manjunath. N. and others**
Vs
**Defendants Sri. Venkatesh and others**

**1. Sri. VENKATESH,** Aged about 60 years,
S/o Late.Narayanappa @Narayan.K., and Late. Kanakavalli, # 498, Sathagalli Layout, Neharu Nagar, Mysuru - 570019.

**PUBLIC NOTICE**

Please take notice that the Plaintiffs have filed the above suit against the Defendants seeking for the relief of partition and separate possession with respect to suit schedule property and for such other reliefs. However, the Defendant No.1 - Sri.VENKATESH, Aged about 60 years, S/o Late. Narayanappa @ Narayan.K. and Late. Kanakavalli, residing at # 498, Sathagalli Layout, Neharu Nagar, Mysuru - 570019, is avoiding the service of summons issued by the Hon'ble Court, even sent by R.P.A.D. Now, the above suit is posted on 18.07.2026 at 11.00 a.m. for your appearance either personally(with the help of advocate. If you fail to appear before the Hon'ble Court on the said date the matter will be proceeded in accordance with law.

**By order of the Court**
**Chief Ministerial Officer, Hon'ble Senior Civil Judge & C.J.M. Mysuru**

**B.C. Renuka Prasad,** Advocate,
No. 816, 10th Cross, Ramanuja Road, Mysuru-570004.
Place: Mysuru, Date: 15.06.2026

**IN THE COURT OF THE PRL. CIVIL JUDGE AND J.M.F.C. AT PAVAGADA.**
**C.Mis. No. 823/2025**

**PETITIONERS: 1. R.Shobha** D/o Rangadhamappa and W/o Raju.N.L. aged about 30 years, **2. Kanthamma** D/o late Venkataravanappa, aged about 59 years, **3. Anuradhamma** W/o late Rangadhamappa, aged about 49 years, **4. Raghu** S/o late Rangadhamappa, aged about 33 years, **5. Chaithra** D/o late Rangadhamappa, aged about 28 years, **6. Srinivasa** S/o late Rangadhamappa, aged about 25 years, All are R/o Balegara Beedi, Pavagada Town, Pavagada Taluk, Tumakuru Dist. -Vs-

**RESPONDENT: The Chief Officer cum register of Birth and Death, Town Municipal Counsel, Pavagada Town, Pavagada taluk,**

**PAPER PUBLICATION**

WHEREAS, the petitioners have filed the above petition seeking issue of Death Certificate of 1st petitioner's grandmother **PARVATHAMMA W/O LATE VENKATARAVANAPPA** was died on **03-06-2005** in the house of petitioners at Pavagada town, now the matter set down for issue notice/suit summons to all or any interested persons or legal heirs whoever got any objection over the above said Death Certificate may appear in this case either as respondents / petitioners and may prosecute the same on the date of hearing i.e. 07/07/2026.

You are hereby called upon to appear before this Hon'ble court at 11:00 A.M. on the said date of hearing either in person or through your counsel. If you fail to appear this court, the matter will be heard and decided exparte. Given under the hand and seal of the court this day of 09/06/2026.

**By Order**
**Sheristedar, CMO, PCJ & JMFC Civil Judge court Pavagada.**

Advocate for petitioner; **P.H.Subramanya,** Advocate, Pavagada.

**IN THE COURT OF THE PRL. CIVIL JUDGE AND J.M.F.C. AT PAVAGADA.**
**C.Mis. No. 824/2025**

**PETITIONERS: 1. R.Shobha** D/o Rangadhamappa and W/o Raju.N.L. aged about 30 years, **2. Kanthamma** D/o late Venkataravanappa, aged about 59 years, **3. Anuradhamma** W/o late Rangadhamappa, aged about 49 years, **4. Raghu** S/o late Rangadhamappa, aged about 33 years, **5. Chaithra** D/o late Rangadhamappa, aged about 28 years, **6. Srinivasa** S/o late Rangadhamappa, aged about 25 years, All are R/o Balegara Beedi, Pavagada Town, Pavagada Taluk, Tumakuru Dist. -Vs-

**RESPONDENT: The Chief Officer cum register of Birth and Death, Town Municipal Counsel, Pavagada Town, Pavagada taluk,**

**PAPER PUBLICATION**

WHEREAS, the petitioners have filed the above petition seeking issue of Death Certificate of 1st petitioner's grandfather **VENKATARAVANAPPA S/O LATE RANGAPPA** was died on **30-12-1982** in the house of petitioners at Pavagada town, Pavagada taluk, now the matter set down for issue notice/suit summons to all or any interested persons or legal heirs whoever got any objection over the above said Death Certificate may appear in this case either as respondents / petitioners and may prosecute the same on the date of hearing i.e. 07/07/2026.

You are hereby called upon to appear before this Hon'ble court at 11:00 A.M. on the said date of hearing either in person or through your counsel. If you fail to appear this court, the matter will be heard and decided exparte. Given under the hand and seal of the court this day of 09/06/2026.

**By Order**
**Sheristedar, CMO, PCJ & JMFC Civil Judge court Pavagada.**

Advocate for petitioner; **P.H.Subramanya,** Advocate, Pavagada.

ಕರ್ನಾಟಕ ಸರ್ಕಾರ
## ವಿಶೇಷ ತಹಶೀಲ್ದಾರ್ ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್.

ಎಲ್.ಎನ್.ಎ./ಸಿ.ಆರ್ 91/20-21 ದಿನಾಂಕ: 10-06-2026

## ಪತ್ರಿಕಾ ಪ್ರಕಟಣೆ

ಮೆ: ಸಂಜೀವಿ ಲ್ಯಾಂಡ್ & ಎಸ್ಟೇಟ್ ಪ್ರೈ.ಲಿ. ನಂ.479, ಬಿ.ಎಂ.ಟಿ.ಸಿ ಬಸ್ ಡಿಪೋ ಮುಂಭಾಗ, ಹೆಚ್.ಎಂ.ಟಿ ಲೇಔಟ್, ಆರ್.ಟಿ.ನಗರ, ಬೆಂಗಳೂರು 32. ಇವರು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ 2016ರ ಕಲಂ 40(1)ರಡಿ ದಂಡ, ಪರಿಹಾರದ) ಮೊತ್ತ ರೂ. 9,74,435/- ಪಾವತಿಸಲು ವಿಫಲರಾಗಿರುವ ಕಾರಣ ಇವರ ಒಡೆತನ ಮತ್ತು ಸ್ವಾಧೀನಕ್ಕೆ ಒಳಪಟ್ಟಿರುವ ಬೆಂಗಳೂರು ನಗರ ಜಿಲ್ಲೆ ನಗರ ಜಿಲ್ಲೆ ಆನೇಕಲ್ ತಾಲ್ಲೂಕು, ಕಸಬಾ ಹೋಬಳಿ, ಚೆಕ್ಕಹಾಗಡೆ ಗ್ರಾಮದ ಸರ್ವೆ ನಂ.132/3 ರಲ್ಲಿ 0-04 ಸ.ನಂ. 132/4 ರಲ್ಲಿ 0-05, ಮತ್ತು ಸ.ನಂ. 129/3 ರಲ್ಲಿ 0-08 ಒಟ್ಟು 0-17 ಗುಂಟೆ ಜಮೀನನ್ನು ದಿನಾಂಕ02-07-2026 ರ ವೇಳೆ 11-00 ಗಂಟೆಗೆ ಸ್ಥಳದಲ್ಲಿ ಬಹಿರಂಗವಾಗಿ ಹರಾಜುಗೊಳಿಸಲು ನಿಗದಿಗೊಳಿಸಲಾಗಿರುತ್ತದೆ. ಈ ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಹೆಚ್ಚಿನ ವಿವರವನ್ನು ಸಂಬಂಧಪಟ್ಟ ರಾಜಸ್ವ ನಿರೀಕ್ಷಕರು, ಕಸಬಾ -2 ಆನೇಕಲ್ ತಾಲ್ಲೂಕು ಇವರನ್ನು ಅಥವಾ ಆನೇಕಲ್ ತಾಲ್ಲೂಕು ಕಛೇರಿಯಲ್ಲಿ ಮುಖ್ಯ ಭೇಟಿ ನೀಡಿ ವಿವರ ಪಡೆದುಕೊಳ್ಳಬಹುದು.

ಸಹಿ/-
ವಿಶೇಷ ತಹಶೀಲ್ದಾರ್,
ಆನೇಕಲ್ ತಾಲ್ಲೂಕು

## ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ. ದೂರವಾಣಿ: 08426-281027.
ಇ-ಮೇಲ್: dam_division@rediffmail.com

ಸಂ:ಕೃಭಾಜನಿನಿ/ಆಸುಘ-2ಆ/ಟಿ-1/2026-27/580 ದಿನಾಂಕ:17.06.2026

**ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ**

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ-2, ಆಲಮಟ್ಟಿ, ತಾ: ನಿಡಗುಂದಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Percentage basis from the eligible contractors for the work indents of Two Cover – (1) I .No. 2796– 125.99 Lakhs (2) I. No. 2795—195.00 Lakhs ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವುದು.

1. ಟೆಂಡರ ಡಾಕುಮೆಂಟುಗಳನ್ನು ವೆಬ್‌ಸೈಟಿನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವೀಕರಿಸುವ ಕೊನೆಯ ದಿನಾಂಕ: **18.06.2026** ರಿಂದ **06.07.2026** ಸಾಯಂಕಾಲ 5.00 ಘಂಟೆಯವರೆಗೆ.
2. ಪೂರ್ವಭಾವಿ ಸಭೆ :**24.06.2026 ಮುಂಜಾನೆ 11.00 ಘಂಟೆಗೆ.**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ (Two Cover): **08.07.2026 ಮುಂಜಾನೆ 11.00 ಘಂಟೆಗೆ.**
4. ಆರ್ಥಿಕ ಬಿಡ್ ತೆರೆಯುವ ದಿನಾಂಕ (Two Cover): **13.07.2026 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ-2,
ಆಲಮಟ್ಟಿ

ವಾಆಸಂ/ವಿಜಯಪುರ/160/ಕೆಎಸ್ಎಂಸಿಎ/2026-27

## ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ವಿದ್ಯುತ್ ಭವನ, ನಿಗಮ ಕಛೇರಿ, ಗೋಕುಲಕೊಪ್ಪ, ಹುಬ್ಬಳ್ಳಿ
**Tel / Fax No : (0836) 2322771 / 2324307**
**Website : https://hescom.karnataka.gov.in**
**e-mail : seeit@hescom.co.in CIN : U31401KA2002SGC030437**
No. HESCOM/SEE(IT&MT)/IT1/CCTV/760/2026-27/cys-2783
Dated : 18-06-2026

**ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)**

ಅಧೀಕ್ಷಕ ಇಂಜಿನೀಯರ್ (ವಿ), ಐಟಿ&ಎಮ್‌ಟಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಈ ಕೆಳಕಂಡ ಅಲ್ಪಾವಧಿ ಟೆಂಡರ್ ಅನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

| ಕ್ರ. ಸಂ. | ಬಿಡ್ ಇಂಡೆಂಟ್ ಸಂಖ್ಯೆ | ಟೆಂಡರ್ ವಿವರಗಳು |
|---|---|---|
| 1 | HESCOM/ 2026-27/ SE0754 | ಹೆಸ್ಕಾಂನ ವಿದ್ಯುತ್ ಭವನ ನಿಗಮ ಕಚೇರಿ, ಗೋಕುಲಕೊಪ್ಪ, ಹುಬ್ಬಳ್ಳಿ ಇಲ್ಲಿಗೆ ಸಿಸಿಟಿವಿ ಕ್ಯಾಮೆರಾಗಳ ಪೂರೈಕೆ, ಸ್ಥಾಪನೆ, ಸಂರಚನೆ ಮತ್ತು ನಿರ್ವಹಣೆ. |
| 2 | HESCOM/ 2026-27/ SE0755 | ಹೆಸ್ಕಾಂನ ಎಲ್ಲಾ ವಿಭಾಗೀಯ ಉಗ್ರಾಣ ಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳ ಪೂರೈಕೆ, ಸ್ಥಾಪನೆ, ಸಂರಚನೆ ಮತ್ತು ನಿರ್ವಹಣೆ. |

ಸದರಿ ಟೆಂಡರದ ಪೂರ್ಣ ವಿವರಗಳನ್ನು ವೆಬ್‌ಸೈಟ್, **www.kppp.karnataka.gov.in** ರಲ್ಲಿ **on or after 18.06.2026** ಪಡೆಯಬಹುದು.

ಸಹಿ/- ಅಧೀಕ್ಷಕ ಅಭಿಯಂತರರು(ವಿ)
(ಐಟಿ&ಎಮ್‌ಟಿ) ಹೆಸ್ಕಾಂ, ಹುಬ್ಬಳ್ಳಿ

ವಾಆಸಂ/ಧಾ/325/ಕೆಎಸ್ಎಂಸಿಎ/2026-27

ಕರ್ನಾಟಕ ಸರ್ಕಾರ
## ಜಿಲ್ಲಾ ಪಂಚಾಯತ್, ಯಾದಗಿರಿ.
## ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ ರಾಜ್ ಇಂಜನೀಯರಿಂಗ್, ವಿಭಾಗ,
ಎನ್.ವಿ.ಎಮ್. ಹೋಟೆಲ್ ಎದುರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ-585202.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ&ರಾಗ್ರಾಸ್ವಅಯೋ/2026-27/ 517 ದಿನಾಂಕ: 18.06.2026

**ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW-1, 2 & 3**
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

**1) ಕಾಮಗಾರಿಗಳ ವಿವರ:**(1) ಸುರಪುರ ತಾಲ್ಲೂಕಿನ ಮಾಲಗತ್ತಿ ಗ್ರಾಮದಲ್ಲಿ ಗ್ರಾಮ ಪಂಚಾಯತ್ ಕಟ್ಟಡ ನಿರ್ಮಾಣ. RDPR/2026-27/BD/WORK_INDENT26371/CALL-2 Other (2) ಶಹಾಪೂರ ತಾಲ್ಲೂಕಿನ ಶಿರವಾಳ ಗ್ರಾಮದ ಗ್ರಾಮ ಪಂಚಾಯತ ಕಟ್ಟಡ ನಿರ್ಮಾಣ. RDPR/2026-27/BD/WORK_INDENT26515/CALL-2 SC Bidders Only (3)ಹುಣಸಗಿ ತಾಲ್ಲೂಕಿನ ಬಂಗಿನಗಡ್ಡಿ ಗ್ರಾಮದ ಅಂಗನವಾಡಿ-02 ಕಟ್ಟಡ ನಿರ್ಮಾಣ. RDPR/2025-26/BD/WORK _INDENT 25129CALL-2 Other (4) ಸುರಪುರ ತಾಲ್ಲೂಕಿನ ಗೌಡಗೇರಾ ಗ್ರಾಮದ ಪ್ರೌಢ ಶಾಲೆಗೆ ಕಂಪೌಂಡ್ ಗೋಡೆ ನಿರ್ಮಾಣ. (UDISE Code: 29330806702) RDPR/2026-27/BD/WORK_INDENT27410Other **2) ಲೆಕ್ಕ ಶೀರ್ಷಿಕೆ:** 2025-26ನೇ ಕೆ.ಕೆ.ಆರ್.ಡಿ.ಬಿ. ಯೋಜನೆ ಮತ್ತು ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ 9.00 ಮತ್ತು ಗರಿಷ್ಠ ರೂ. 65.00 ಲಕ್ಷ **4) ಗುತ್ತಿಗೆದಾರರ ದರ್ಜೆ:** 4ನೇ ಮತ್ತು 3ನೇ ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯುವ ಕೊನೆಯ ದಿನಾಂಕ:**20.06.2026 ರಿಂದ 01.07.2026 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 01.07.2026 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ (ಕೆ.ಡಬ್ಲ್ಯೂ- 3):** 03.07.2026 ಬೆಳಿಗ್ಗೆ 9:00 ನಂತರ **9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ (ಕೆ.ಡಬ್ಲ್ಯೂ- 1 & 2):** 03.07.2026 ಬೆಳಿಗ್ಗೆ 9.00 ನಂತರ **10) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ (ಕೆ.ಡಬ್ಲ್ಯೂ- 3):**10.07.2026 ಬೆಳಿಗ್ಗೆ 11:00 ನಂತರ **11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಎನ್.ವಿ.ಎಮ್. ಹೋಟೆಲ್ ಎದುರುಗಡೆ, ಸ್ಟೇಷನ್ ರಸ್ತೆ, ಯಾದಗಿರಿ-585202 **12) ಅಂತರಜಾಲ ತಾಣದ ವಿಳಾಸ:** https://kppp.karnataka.gov.in

**ಸೂಚನೆ :-** ಟೆಂಡರರಿಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/- ಕಾರ್ಯಪಾಲಕ ಇಂಜನೀಯರರು,
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ಯಾದಗಿರಿ.

ವಾ.ಆ.ಸಂ.ಇ/ಯಾದಗಿರಿ/117/ಕೆ.ಎಸ್.ಎಂ.ಸಿ.ಎ/2026-27

## ಸಂಪಾದಕೀಯ

### ಸುಗಮ ಪರೀಕ್ಷೆಗಾಗಿ ನಿರ್ಬಂಧ ಅನಿವಾರ್ಯ




ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಧರಿಸುವ ರಾಷ್ಟ್ರೀಯ ಅರ್ಹತಾ ಹಾಗೂ ಪ್ರವೇಶ ಪರೀಕ್ಷೆ (ನೀಟ್) ಇದೇ 21ರಂದು ನಡೆಯಲಿದ್ದು, ಪರೀಕ್ಷೆಯ ಪಾವಿತ್ರ್ಯ ಮತ್ತು ಪಾರದರ್ಶಕತೆಯನ್ನು ಕಾಪಾಡುವುದು ಸರ್ಕಾರದ ಮೊದಲ ಆದ್ಯತೆಯಾಗಿದೆ. ಈ ಹಿನ್ನೆಲೆಯಲ್ಲಿ ಟೆಲಿಗ್ರಾಂ ಆ್ಯಪ್ ಮೇಲೆ ತಾತ್ಕಾಲಿಕ ನಿರ್ಬಂಧ ಹೇರುವ ಕ್ರಮ ಚರ್ಚೆಗೆ ಗ್ರಾಸವಾಗಿದ್ದರೂ, ಅದರ ಹಿಂದಿನ ಉದ್ದೇಶವನ್ನು ಅರ್ಥಮಾಡಿಕೊಳ್ಳುವುದು ಅಗತ್ಯವಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ, ಅಕ್ರಮ ಮಾಹಿತಿ ವಿನಿಮಯ ಮತ್ತು ನಕಲು ಜಾಲಗಳ ಚಟುವಟಿಕೆಗಳಲ್ಲಿ ಸಾಮಾಜಿಕ ಜಾಲತಾಣಗಳ ದುರ್ಬಳಕೆ ನಡೆದಿರುವುದು ಬಹಿರಂಗವಾಗಿದೆ. ಅದರಲ್ಲೂ ಟೆಲಿಗ್ರಾಂನ ಎನ್‌ಕ್ರಿಪ್ಟೆಡ್ ವ್ಯವಸ್ಥೆ ಹಾಗೂ ದೊಡ್ಡ ಪ್ರಮಾಣದ ಗುಂಪುಗಳನ್ನು ರಚಿಸುವ ಸೌಲಭ್ಯದಿಂದ ಅಕ್ರಮ ಚಟುವಟಿಕೆಗಳಿಗೆ ಅವಕಾಶ ದೊರೆಯುತ್ತಿದೆ ಎಂಬ ಆರೋಪಗಳು ಪದೇ ಪದೇ ಕೇಳಿಬಂದಿವೆ. ಪೈರೇಟೆಡ್ ವಿಷಯಗಳ ಹಂಚಿಕೆ, ಕಾನೂನುಬಾಹಿರ ಜಾಲಗಳ ಚಟುವಟಿಕೆ ಮತ್ತು ರಾಷ್ಟ್ರವಿರೋಧಿ ಶಕ್ತಿಗಳ ಸಂವಹನ ಸಾಧನವಾಗಿ ಬಳಕೆಯಾಗುತ್ತಿದೆ ಎಂಬ ಆತಂಕವನ್ನೂ ಕೇಂದ್ರ ಸರ್ಕಾರ ವ್ಯಕ್ತಪಡಿಸಿದೆ.


ಈ ವಿಷಯ ಇದೀಗ ನ್ಯಾಯಾಲಯದ ಪರಿಶೀಲನೆಯಲ್ಲಿದ್ದರೂ, ಪರೀಕ್ಷೆಯಂತಹ ಸೂಕ್ಷ್ಮ ಸಂದರ್ಭಗಳಲ್ಲಿ ಮುನ್ನೆಚ್ಚರಿಕೆಯ ಕ್ರಮಗಳಿಗೆ ಆದ್ಯತೆ ನೀಡುವುದು ತಪ್ಪಲ್ಲ. ಕೋಟ್ಯಂತರ ರೂಪಾಯಿ ವೆಚ್ಚ, ಲಕ್ಷಾಂತರ ವಿದ್ಯಾರ್ಥಿಗಳ ಪರಿಶ್ರಮ ಮತ್ತು ಪೋಷಕರ ನಿರೀಕ್ಷೆಗಳು ಒಂದೇ ಪರೀಕ್ಷೆಯೊಂದಿಗೆ ಜೋಡಿಕೊಂಡಿರುವಾಗ, ಯಾವುದೇ ಅಕ್ರಮಕ್ಕೆ ಅವಕಾಶ ನೀಡದಿರುವುದು ಆಡಳಿತದ ಹೊಣೆಗಾರಿಕೆಯಾಗಿದೆ. ವಾಸ್ತವವಾಗಿ, ತಂತ್ರಜ್ಞಾನವು ಸಮಾಜದ ಅಭಿವೃದ್ಧಿಗೆ ಎಷ್ಟು ನೆರವಾಗುತ್ತದೆಯೋ, ಅದೇ ಪ್ರಮಾಣದಲ್ಲಿ ಅದರ ದುರ್ಬಳಕೆಯ ಸಾಧ್ಯತೆಯೂ ಇರುತ್ತದೆ. ಟೆಲಿಗ್ರಾಂ ಸೇರಿದಂತೆ ಹಲವು ಡಿಜಿಟಲ್ ವೇದಿಕೆಗಳು ಜ್ಞಾನ ಹಂಚಿಕೆ, ವ್ಯವಹಾರ ಮತ್ತು ಸಂವಹನಕ್ಕೆ ನೆರವಾಗಿವೆ. ಆದರೆ ಕೆಲವು ದುಷ್ಕರ್ಮಿಗಳು ಅವುಗಳನ್ನು ಅಕ್ರಮ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇಂತಹ ಸಂದರ್ಭಗಳಲ್ಲಿ ಸರ್ಕಾರ ಕೈಕಟ್ಟಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಇತ್ತೀಚಿನ ವರ್ಷಗಳಲ್ಲಿ ದೇಶದ ಹಲವು ರಾಜ್ಯಗಳಲ್ಲಿ ನಡೆದ ಪರೀಕ್ಷಾ ಅಕ್ರಮಗಳು ಯುವಜನತೆ ವಿಶ್ವಾಸವನ್ನೇ ಕುಗ್ಗಿಸಿವೆ. ಪ್ರಾಮಾಣಿಕವಾಗಿ ಓದಿದ ವಿದ್ಯಾರ್ಥಿಗಳ ಅವಕಾಶವನ್ನು ಕಸಿದುಕೊಳ್ಳುವ ಪರೀಕ್ಷಾ ಮಾಫಿಯಾಗಳು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸುತ್ತಿರುವಾಗ, ಸರ್ಕಾರವೂ ಅಷ್ಟೇ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಪರೀಕ್ಷೆ ಮುಗಿಯುವವರೆಗೆ ಕೆಲವು ನಿರ್ಬಂಧಗಳನ್ನು ವಿಧಿಸುವುದು ಅಸಾಮಾನ್ಯ ಕ್ರಮವಲ್ಲ, ಅದು ವ್ಯವಸ್ಥೆಯನ್ನು ರಕ್ಷಿಸುವ ಪ್ರಯತ್ನವಾಗಿದೆ. ಅದೇ ವೇಳೆ, ಸಾಮಾಜಿಕ ಜಾಲತಾಣ ಸಂಸ್ಥೆಗಳೂ ತಮ್ಮ ಜವಾಬ್ದಾರಿಯನ್ನು ಅರಿಯಬೇಕು. ತಮ್ಮ ವೇದಿಕೆಗಳಲ್ಲಿ ನಡೆಯುವ ಕಾನೂನುಬಾಹಿರ ಚಟುವಟಿಕೆಗಳ ತಡೆಯಲು ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ಸಹಕಾರವನ್ನು ನೀಡುವುದು ಅವರ ಕರ್ತವ್ಯವಾಗಿದೆ. ಕೇವಲ ವ್ಯವಹಾರಿಕ ಹಿತಾಸಕ್ತಿಗಿಂತ ಸಾಮಾಜಿಕ ಹೊಣೆಗಾರಿಕೆಗೆ ಆದ್ಯತೆ ನೀಡಿದಾಗ ಮಾತ್ರ ಡಿಜಿಟಲ್ ಪರಿಸರ ಸುರಕ್ಷಿತವಾಗಲು ಸಾಧ್ಯ.

# ಆರೆಸ್ಸೆಸ್‌ಗೆ 100: ರೇಶ್ಮಿ ಆಯಿಷಾ ಏನು ಹೇಳ್ತಾರೆ?

ರೇಶ್ಮಿ ಆಯಿಷಾ ತಿರುವನಂತಪುರಂ ಕಿಮ್ಸ್ ಹೆಲ್ತ್ ಆಸ್ಪತ್ರೆಯ ಸಿಇಒ ಮತ್ತು ನಾಗರ ಕೊಯಿಲ್‌ನ ಅದೇ ಸಮೂಹದ ಆಸ್ಪತ್ರೆಯ ನಿರ್ದೇಶಕಿ. ಆಕೆ ಆರೆಸ್ಸೆಸ್ ಸಂಘಟನೆಯನ್ನು ತಾನು ಪರಿಭಾವಿಸಿದ ಬಗ್ಗೆ, ಆ ಸಂಘಟನೆಯ ಕುರಿತ ತನ್ನ ಒಳನೋಟಗಳನ್ನು ಸಾಮಾಜಿಕ ಜಾಲತಾಣದಲ್ಲಿ ದಾಖಲಿಸಿದ್ದಾರೆ. ಆರೆಸ್ಸೆಸ್ ಬಗ್ಗೆ ರೇಶ್ಮಿ ಆಯಿಷಾ ಹೇಳಿದ್ದೇನು? ಅವರ ಮಾತುಗಳಲ್ಲೇ ಕೇಳಿ...

ಮೊದಲು ನನಗೆ ಆರ್‌ಎಸ್‌ಎಸ್ ಬಗ್ಗೆ ಸ್ಪಷ್ಟವಾದ ತಿಳುವಳಿಕೆ ಇರಲಿಲ್ಲ. ಅಲ್ಲಿ ಇಲ್ಲಿ ಕೇಳಲ್ಪಟ್ಟ ವದಂತಿಗಳೇ ನನ್ನ ತಲೆಯೊಳಗೆ ತುಂಬಿದ್ದವು. ಮುಸ್ಲಿಮರನ್ನು ಈ ದೇಶದಿಂದ ಒದ್ದೋಡಿಸುವುದೇ ಆರ್‌ಎಸ್‌ಎಸ್‌ನ ಗುಪ್ತ ಅಜೆಂಡ ಎಂದು ಹೇಳಲಾಗುತ್ತಿದ್ದ ವದಂತಿಯನ್ನೇ ನಾನು ನಂಬಿದ್ದೆ. ಹಾಗಾಗಿ ಇದು ನನ್ನನ್ನು ಭಯಗ್ರಸ್ತಳನ್ನಾಗಿ ಮಾಡಿತ್ತು. ಆದರಿಂದಾಗಿ ನಾನು ಭಯ ಮತ್ತು ದ್ವೇಷದ ಮನೋಭಾವದಿಂದಲೇ ಆರ್‌ಎಸ್‌ಎಸ್ ಅನ್ನು ನೋಡುತ್ತಿದ್ದೆ.

ಹೀಗಿರುವಾಗ ತನ್ನ ಸ್ನೇಹಿತನೊಬ್ಬನಿಗೆ ಚಿಕಿತ್ಸೆ ಕೊಡಿಸಲೆಂದು ಒಬ್ಬ ಆರ್‌ಎಸ್‌ಎಸ್ ಕಾರ್ಯಕರ್ತರು ನಮ್ಮ ಆಸ್ಪತ್ರೆಗೆ ಬಂದಿದ್ದರು. ಅವರ ಹೆಸರು ಸಿ.ಬಾಬು. ತನ್ನ ಪರಿಚಯ ಮಾಡಿಕೊಂಡ ಅವರು, ತಾನೊಬ್ಬ ಆರ್‌ಎಸ್‌ಎಸ್‌ನ ಪ್ರಾಂತ ಮಟ್ಟದ ಕಾರ್ಯಕರ್ತ ಎಂದು ಹೇಳಿದರು. ಆರ್‌ಎಸ್‌ಎಸ್ ಅಂದರೇನೇ ಹೆದರಿಕೊಂಡಿದ್ದ ನನಗೆ ಈತನನ್ನು ನೋಡಿ ಇನ್ನೂ ಹೆದರಿಕೆಯಾಯಿತು. ಆದರೆ ಆ ವ್ಯಕ್ತಿ ಬಲು ಮೃದುವಾಗಿ, ವಿನಯಶಾಲಿಯಾಗಿ ಮಾತನಾಡಿದರು. ಅವರ ವೇಷ -ಕೇವಲ ಒಂದು ಮುಂಡು (ಕೇರಳ ದೋತಿ), ಒಂದು ಶರಟು ಮತ್ತು ಹೆಗಲಲ್ಲೊಂದು ಬಟ್ಟೆಯ ಬ್ಯಾಗು- ಅತ್ಯಂತ ಸರಳವಾಗಿತ್ತು. ಆದರೂ ಆತ ತಾನೊಬ್ಬ ಆರ್‌ಎಸ್‌ಎಸ್‌ನ ಪ್ರಾಂತ ಮಟ್ಟದ ಪದಾಧಿಕಾರಿ ಎಂದಾಗ ನನಗೇ ಅಚ್ಚರಿ! ಇಷ್ಟು ಸರಳ ವೇಷದಲ್ಲಿರುವ ಸಂಘಟನೆಯೊಂದರ ಮುಖಂಡನನ್ನು ನಾನು ಇದುವರೆಗೆ ನೋಡಿರಲಿಲ್ಲ.





ನನಗಂತೂ ಆಶ್ಚರ್ಯವೋ ಆಶ್ಚರ್ಯ. ನಾನು ಕಲ್ಪಿಸಿಕೊಂಡ ಆರೆಸ್ಸೆಸ್ ಇದಾಗಿರಲಿಲ್ಲ. ಆರ್‌ಎಸ್‌ಎಸ್ ನನ್ನಂತಹ ಮುಸ್ಲಿಮರನ್ನು ಪಾಕಿಸ್ತಾನಕ್ಕೆ ಓಡಿಸಲು ಬಯಸುತ್ತಿದೆಯೋ ಎಂದು ನಾನು ಆತನನ್ನು ಕೇಳಿದೆ. ಆತ ತಕ್ಷಣ ನಕ್ಕರು. ನನ್ನ ಈ ಪ್ರಶ್ನೆಗೆ ತಣ್ಣಗೆ ಉತ್ತರಿಸಿದರು: ಚೇಚೀ, (ಮಲಯಾಳದಲ್ಲಿ ಅಕ್ಕ ಎಂದರ್ಥ) ಆರ್‌ಎಸ್‌ಎಸ್ ಬಗ್ಗೆ ನಿಮಗೆ ಯಾರೋ ತಪ್ಪು ಮಾಹಿತಿ ನೀಡಿದ್ದಾರೆ. ನೀವೆಲ್ಲಾ ನಮ್ಮ ಸೋದರ -ಸೋದರಿಯರ ಸಮಾನ.

ಆತ ನನಗಿಂತ ವಯಸ್ಸಿನಲ್ಲಿ ಹಿರಿಯರು. ಹಾಗಾಗಿ ನನ್ನ ಹೆಸರು ಹಿಡಿದು ಕರೆಯುವಂತೆ ಕೋರಿದೆ. ಅದಕ್ಕೆ ಅವರ ಉತ್ತರ: ನಮ್ಮ ಸಂಘಟನೆ ಮಹಿಳೆಯರನ್ನು ಗೌರವಿಸುವುದನ್ನು ಕಲಿಸಿದೆ. ಹಾಗಾಗಿ ನಮಗಿಂತ ಕಿರಿಯ ಮಹಿಳೆಯರನ್ನು ನಾವು ಚೇಚೀ ಎಂದೇ ಸಂಬೋಧಿಸುತ್ತೇವೆ.

ಬಾಬು ಅವರ ಈ ಹೇಳಿಕೆ ನನ್ನಲ್ಲಿ ಇನ್ನಷ್ಟು ಕುತೂಹಲ ಹುಟ್ಟಿಸಿತು. ಇದಾದ ಮೇಲೆ, ನಾನು ಆರ್‌ಎಸ್‌ಎಸ್ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ನನ್ನದೇ ಸಂಶೋಧನೆಗೆ ಮುಂದಾದೆ. ನಾನು ಹಲವಾರು ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಭೇಟಿಯಾದೆ. ಆರ್‌ಎಸ್‌ಎಸ್‌ನ ಹಲವು ತರಬೇತಿ ಶಿಬಿರಗಳಿಗೂ ಹೋಗಿದ್ದೆ. ಅಲ್ಲಿ ಎಲ್ಲ ಕಡೆ ಪ್ರತಿಯೊಬ್ಬರೂ ಕೈಜೋಡಿಸಿ, ವಿನಮ್ರರಾಗಿ ನನ್ನನ್ನು ಚೇಚೀ ಎಂದು ಕರೆಯುತ್ತಾ, ಗೌರವದಿಂದ ನೋಡಿಕೊಂಡರು.

ತಿರುವನಂತಪುರಂನಲ್ಲಿರುವ ಆರ್‌ಎಸ್‌ಎಸ್ ಕಚೇರಿಗೆ ನಾನು ಮೊದಲು ಭೇಟಿ ಕೊಟ್ಟಾಗ ನನಗೆ ಒಂದು ರೀತಿ ಹೆದರಿಕೆಯಾಗಿತ್ತು. ಆದರೆ ಕ್ರಮೇಣ ಆ ಹೆದರಿಕೆ ಕರಗಿ ಹೋಯಿತು. ನನ್ನ ಸೋದರರನ್ನು ಭೇಟಿ ಮಾಡುವ ಒಬ್ಬ ಸೋದರಿಯಾಗಿ ನಾನು ಬದಲಾಗಿದ್ದೆ.

ಆರ್‌ಎಸ್‌ಎಸ್ ಯಾವುದೇ ಸದಸ್ಯತ್ವದ ಗೋಜಿಲ್ಲದ ಒಂದು ಸಂಘಟನೆ. ಒಬ್ಬ ವ್ಯಕ್ತಿ ತನ್ನ ಹೃದಯ ಪ್ರೀತಿಯಿಂದ ಆರೆಸ್ಸೆಸ್ ಸದಸ್ಯನಾಗಬಹುದು. ಬಹುಶಃ ಇಂತಹದೊಂದು ಸಂಘಟನೆ ಜಗತ್ತಿನಲ್ಲಿ ಇದೊಂದೇ ಆಗಿರಬಹುದು. ಅಂತೆಯೇ ಇದೊಂದು ಜಗತ್ತಿನ ಅತಿ ದೊಡ್ಡ ಸಂಘಟನೆ. ರಾಷ್ಟ್ರವನ್ನು ಪರಂ ವೈಭವಂ (ವೈಭವದ ಪರಾಕಾಷ್ಠೆಗೆ) ಕೊಂಡೊಯ್ಯುವುದೇ ಸ್ವಯಂಸೇವಕರ ಏಕಮೇವ ಗುರಿ. ಭಾರತ ದೇಶ ಉನ್ನತವಾಗಿ ಅಭಿವೃದ್ಧಿ ಹೊಂದಿ, ಪರಮ ವೈಭವಶಾಲಿ ರಾಷ್ಟ್ರವಾಗಬೇಕೆಂಬುದು ಆರ್‌ಎಸ್‌ಎಸ್ ಹೆಬ್ಬಯಕೆ.

ಕ್ರಮೇಣ ನಾನು ಆರೆಸ್ಸೆಸ್‌ನ ಜಿಲ್ಲಾ, ವಿಭಾಗ ಮತ್ತು ಪ್ರಾಂತ ಮಟ್ಟದ ಹಿರಿಯ ಕಾರ್ಯಕರ್ತರು ಹಾಗೂ ಕಿರಿಯ ಕಾರ್ಯಕರ್ತರಿಗೆಲ್ಲ ಚಿರಪರಿಚಿತಳಾಗಿ ಬಿಟ್ಟೆ. ಅಂಥವರ ಪೈಕಿ ಪಿ.ಪರಮೇಶ್ವರ್ ಜಿ, ಎಸ್. ಸೇತು ಮಾಧವನ್, ಪಿ.ಪಿ. ಮುಕುಂದನ್, ದಕ್ಷಿಣ ಕೇರಳ ಪ್ರಾಂತ ಪ್ರಚಾರಕ ಎಸ್. ಸುದರ್ಶನ್ ಜಿ ಮತ್ತು ಪೂಜ್ಯ ಸರಸಂಘಚಾಲಕರಾದ ಡಾ. ಮೋಹನ ಭಾಗವತ್ ಪ್ರಮುಖರು. ಆರ್‌ಎಸ್‌ಎಸ್ ಅಂದರೆ ನಿಜವಾಗಿ ಏನು ಎಂಬುದನ್ನು ಅಂಥವರಿಂದ ಅರಿತುಕೊಂಡೆ.

ಕಳೆದ ಹತ್ತು ವರ್ಷಗಳಿಂದ ನಾನು ಅವರಿಗೆಲ್ಲ ಒಬ್ಬ ಸೋದರಿಯಾಗಿರುವೆ. ಬುರ್ಖಾ ಧರಿಸಿದ ಅವರೊಂದಿಗೆ ನಾನು ಒಟ್ಟಿಗೆ ಸಹಜವಾಗಿ ಕುಳಿತು ಮಾತಾಡುವಲ್ಲಿ, ಅವರ ನಡವಳಿಕೆಯಿಂದ ನನಗೆ ಯಾವುದೇ ಬಗೆಯ ಅನಾನುಕೂಲತೆ ಆಗಿಲ್ಲ.

ಈ ಪ್ರಚಾರಕರೆಲ್ಲ ಧರಿಸುವ ಪಂಚೆ ಮತ್ತು ಶರ್ಟುಗಳು ಅವರದ್ದಲ್ಲ, ಬಹುಶಃ ಯಾರೋ ಉಡುಗೊರೆಯಾಗಿ ನೀಡಿದ್ದು ಇರಬೇಕು. ಅನೇಕ ಸಂದರ್ಭಗಳಲ್ಲಿ ಸಂಘದ ಪ್ರಚಾರಕರ ಬಳಿ ಸ್ವಂತದ ಆಹಾರ ಸೇವನೆಗೆ ಅಥವಾ ಚಹಾ ಕುಡಿಯಲು ಹಣವೇ ಇರುವುದಿಲ್ಲ.

ದೇಶದ ಒಳಿತಿಗಾಗಿ ಅವರೆಲ್ಲ ತಮ್ಮ ಸ್ವಂತದ ಸುಖವನ್ನು ತೊರೆದು, ದೇಶ ಸೇವೆಯನ್ನು ಅಪ್ಪಿಕೊಂಡಿದ್ದಾರೆ. ವಿಲಾಸಿ ಜೀವನ ಶೈಲಿ ಅವರದ್ದಲ್ಲ, ಅವರ ಬಳಿ ದುಬಾರಿ ವಾಹನಗಳು ಇಲ್ಲ, ತಮಗೆ ಲಭ್ಯವಿರುವ ಆಹಾರವನ್ನಷ್ಟೇ ಸೇವಿಸುತ್ತಾರೆ. ಬಸ್ ನಿಲ್ದಾಣಗಳಲ್ಲೋ ಅಥವಾ ರೈಲ್ವೆ ಬೋಗಿಗಳಲ್ಲೋ ತಮ್ಮ ನಿದ್ರೆ ಪೂರೈಸಿಕೊಳ್ಳುತ್ತಾರೆ.

ಪರಂ ವೈಭವಂ-ಈ ದೇಶದ ಪರಮೋಚ್ಚ ವೈಭವ ಹಾಗೂ ಘನತೆ ಸಾಧಿಸುವುದಕ್ಕಾಗಿ ಅವರೆಲ್ಲ ತಮ್ಮ ಬದುಕನ್ನು ಸಮರ್ಪಿಸಿದ್ದಾರೆ.

ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ಕೂಡ ಅವರಂತೆಯೇ ಹಿಂದೆ ಪ್ರಚಾರಕರಾಗಿದ್ದರು ಎಂದು ನನಗೆ ಇತ್ತೀಚೆಗೆ ತಿಳಿಯಿತು.

(ಕನ್ನಡಕ್ಕೆ: ದು.ಗು.ಲಕ್ಷ್ಮಣ)

# ಪಾಕ್ ತಂಡದ ಫೀಲ್ಡಿಂಗ್ ಮತ್ತು ಪಿಒಕೆ!

▸ ಪೃಥ್ವಿರಾಜ್ ಕುಲಕರ್ಣಿ



ಅಹಂಕಾರದಿಂದ ಸಿಂಹಾಸನದ ಮೇಲೆ ಕೂತಿದ್ದ ರಾವಣನಿಗೆ ಲಂಕಾದ ಪ್ರಜೆಗಳು ಪ್ರಶ್ನೆಯೊಂದನ್ನಿಟ್ಟರು. ವಾನರ ಸೈನ್ಯವು ಲಂಕೆಯತ್ತ ಬರಲು ರಾಮ ಸೇತುವೆ ಕಟ್ಟಿದರಂತೆ. ಇನ್ನೂ ಭಯಾನಕ ವಿಚಾರವೆಂದರೆ ಕಲ್ಲಿನ ಮೇಲೆ ಜೈ ಶ್ರೀ ರಾಮ್ ಎಂದು ಬರೆದರೆ ಅದು ತೇಲುತ್ತದೆಯಂತೆ. ನಿಮ್ಮ ಶತ್ರು ಮಾಯಾವಿ... ನಮಗೆ ತುಂಬಾ ಭಯವಾಗುತ್ತಿದೆ, ನಮ್ಮ ಗತಿಯೇನು? ಎಂದು ಅಳಲು ತೋಡಿಕೊಂಡರು. ಆಗ ಗರ್ವದಿಂದ ಮೆರೆದ ರಾವಣ, ಆ ಕಾರ್ಯ ನಾನು ಮಾಡಬಲ್ಲೆ ಬನ್ನಿ ಎಂದು ಹೇಳುತ್ತಾ ಜನರನ್ನು ಸರೋವರದ ಹತ್ತಿರ ಕರೆದುಕೊಂಡು ಹೋದ. ಕಲ್ಲೊಂದರ ಮೇಲೆ ರಾವಣೇಶ್ವರ ಎಂದು ಬರೆದು ನೀರಿನಲ್ಲಿ ತೇಲಿ ಬಿಟ್ಟ. ಕಲ್ಲು ತೇಲಿತು. ಜನರು ನಿಟ್ಟುಸಿರುಬಿಟ್ಟರು. ನಮ್ಮ ದೊರೆಯೂ ಒಬ್ಬ ಮಾಯಾವಿ! ಅವರು ಭಯದಲ್ಲಿಲ್ಲೇ ಬಿಟ್ಟು ವಿಶ್ವಾಸವಂತರಾದರು. ಆದರೆ ಮನೆಗೆ ಬರುತ್ತಿದ್ದಂತೆ ಪತ್ನಿ ಮಂಡೋದರಿ ರಾವಣನಿಗೆ, ಸ್ವಾಮಿ ನೀವು ಕಲ್ಲು ತೇಲಿಸಿದ್ದು ಹೇಗೆ ಎಂಬ ಪ್ರಶ್ನೆಯನ್ನಿಟ್ಟಳು. ಅದಕ್ಕೆ ಉತ್ತರಿಸಿದ ರಾವಣ, ನಾನು ಕಲ್ಲಿನ ಮೇಲೆ ರಾವಣೇಶ್ವರ ಎಂದೇ ಬರೆದೆ. ಆದರೆ ಅದಕ್ಕೆ ನೀನು ಮುಳುಗಿದರೆ ಶ್ರೀರಾಮನ ಮೇಲೆ ಆಣೆ ಅಂದುಬಿಟ್ಟೆ ಎಂದು ಉತ್ತರಿಸಿದ. ರಾಕ್ಷಸ ರಾವಣ ಮತ್ತು ರಾಕ್ಷಸ ಮನಸ್ಥಿತಿ ಇರುವ ಪಾಕಿಸ್ತಾನಕ್ಕೆ ಯಾವುದೇ ವ್ಯತ್ಯಾಸ ಇಲ್ಲ, ಪಾಕ್ ಕಥೆ ಕೂಡ ಹೀಗೆ ಆಗುತ್ತಿದೆ.

ಇತ್ತೀಚೆಗಷ್ಟೇ ಪಾಕಿಸ್ತಾನ ಅಲ್ಲಿನ ಇಸ್ಲಾಂಪುರಕ್ಕೆ ಕೃಷ್ಣ ನಗರ ಎಂಬ ಹೆಸರನ್ನು, ಮುಸ್ತಫಾಬಾದ್ ಎಂಬ ಊರಿಗೆ ಧರ್ಮಪುರ ಎಂದು, ಬಾಬ್ರಿ ಮಸೀದಿ ಚೌಕ್ ಅನ್ನು ಜೈನ್ ಮಂದಿರ್ ಎಂದೂ ಮತ್ತು ರೆಹಮಾನ್ ಗಾಲಿ ಅನ್ನು ರಾಮ್ ಗಾಲಿ ಎಂದು ಮರುನಾಮಕರಣ ಮಾಡಿತ್ತಲ್ಲದೆ ಇತಿಹಾಸದ ಬಗ್ಗೆ ನಮಗೆ ಗೌರವವಿದೆ, ಪಾಕಿಸ್ತಾನ ಜಾತ್ಯತೀತ ವ್ಯವಸ್ಥೆಯ ಮೇಲೆ ನಂಬಿಕೆ ಇಟ್ಟಿದೆ ಎಂದೆಲ್ಲಾ ಬಿಂಬ ಕಟ್ಟಿಕೊಂಡಿತ್ತು. ಆದರೆ ರಾವಣನಂತೆಯೇ ಶಕ್ತನಾದೇ ತನ್ನ ಅಸಲು ಕಪಟ ರೂಪ ತೋರಿಸಿ ಪಿಒಕೆ ನಿರಾಶ್ರಿತರ ಮೇಲೆ ದಾಳಿ ನಡೆಸಿತು. ಆಡಳಿತ ವೈಫಲ್ಯದಿಂದಲೇ ಇಷ್ಟು ದಿನ ಜಗತ್ತಿನ ಜನರ ಬಾಯಿಯಲ್ಲಿರುವ ಪಾಕಿಸ್ತಾನಕ್ಕೆ ದಿನಕ್ಕೊಮ್ಮೆ ಮರ್ಯಾದೆ ಕಳೆದುಕೊಳ್ಳದಿದ್ದರೆ ಸಮಾಧಾನವೇ ಆಗುವುದಿಲ್ಲ. ಆಡಳಿತ ವಿಚಾರದಲ್ಲಿ ಹಿಟ್ಟಿನ ಭಿಕ್ಷೆ ಬೇಡುವ ಸ್ಥಿತಿಗೆ ಬಂದರೂ ನಾವು ಪೊಲೀಸರಿಂದ ದಾಳಿಗಳನ್ನು ಮಾಡಿಸಿ ಸಾಮಾನ್ಯ ಜನರನ್ನು ಹೆದರಿಸುವುದನ್ನು ಬಿಟ್ಟಿಲ್ಲ, ಬಾಂಬ್ ದಾಳಿ ಮಾಡಿಸುವುದು, ಭಯೋತ್ಪಾದಕರನ್ನು ಬೆಂಬಲಿಸುವುದನ್ನು ನಿಲ್ಲಿಸುವುದಿಲ್ಲ ಎಂಬ ಮಾತು ಮತ್ತೆ ಮತ್ತೆ ಸಾಬೀತು ಮಾಡುತ್ತಾ ಬರುತ್ತಿದೆ. ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ನಡೆದ ದಾಳಿಯೂ ಇದರ ಮತ್ತೊಂದು ಸ್ವರೂಪ.

ಕಪಟತನದಿಂದ ಕಬ್ಜ ಮಾಡಿಕೊಂಡಿರುವ ಪಿಒಕೆ ಪ್ರದೇಶಗಳಲ್ಲಿ ಪಾಕಿಸ್ತಾನ ಶಾಲೆಗಳನ್ನು ಕಟ್ಟಿಲ್ಲ, ಅಲ್ಲಿ ಆಸ್ಪತ್ರೆಗಳಿಲ್ಲ, ಹೋಗಲಿ ಕನಿಷ್ಠ ಪಕ್ಷ ಒಂದು ಬಸ್‌ಸ್ಟ್ಯಾಂಡ್ ಕೂಡ ಇಲ್ಲ, ಇದರ ವಿರುದ್ಧ ಅಲ್ಲಿನವರೇ ವಿರೋಧಿಸಿ ಭಾರತವನ್ನು ಹೊಗಳಿದ ವಿಚಾರ ಮೊದಲಿನಿಂದಲೂ ನಡೆಯುತ್ತಲೇ ಬಂದಿದೆ. ಈ ನಡುವೆ ಬೆಲೆ ಏರಿಕೆ ಮಾಡಿರುವ ಪಾಕಿಸ್ತಾನ, ಅಲ್ಲಿನ ಜನರ ಜೀವನವನ್ನು ಇನ್ನಷ್ಟು ಕಠಿಣಗೊಳಿಸಿದೆ. ಇದರ ವಿರುದ್ಧ ಜನರು ಹೋರಾಟಕ್ಕಿಳಿದಿದ್ದಾರೆ. ಇದೇ ವಿಷಯಕ್ಕೆ ಪೆಚ್ಚಾದ ಪಾಕಿಸ್ತಾನ ಪೊಲೀಸ್ ದಾಳಿಗಳನ್ನು ನಡೆಸಿ ಜನರ ಜೀವ ತೆಗೆದುಕೊಳ್ಳುತ್ತಿದೆ.

ಹಾಗೆ ನೋಡಿದರೆ, ಒಂದು ಕ್ರಿಕೆಟ್ ಪಂದ್ಯ ಗೆಲ್ಲಬೇಕಾದರೆ ತಂಡದ ಫೀಲ್ಡಿಂಗ್ ಎಷ್ಟೊಂದು ಮುಖ್ಯವೋ, ಆಡಳಿತ ವಿಚಾರದಲ್ಲಿ ಪ್ರತಿಯೊಂದು ಪ್ರದೇಶದ ಮೇಲೆ ಕಣ್ಣಿಟ್ಟು ಅಭಿವೃದ್ಧಿಸುವುದು ಅಷ್ಟೇ ಮುಖ್ಯ. ಆದರೆ ಪಾಕಿಸ್ತಾನ ಮೊದಲಿನಿಂದಲೂ ಎರಡರಲ್ಲೂ ಸತತ ವೈಫಲ್ಯ ಕಾಣುತ್ತಾ ಬಂದಿದೆ. ಪಾಕಿಸ್ತಾನ ಕ್ರಿಕೆಟ್ ತಂಡದ ಕಳಪೆ ಫೀಲ್ಡಿಂಗ್ ಅನ್ನು ಪಾಕಿಸ್ತಾನಿ ಕ್ರಿಕೆಟ್ ಅಭಿಮಾನಿಗಳೇ ಗೇಲಿ ಮಾಡುತ್ತಾರೆ. ಈಗ ಪಾಕಿಸ್ತಾನ ಆಡಳಿತವನ್ನು ಅಲ್ಲಿನ ಜನರೇ ಗೇಲಿ ಮಾಡುತ್ತಿದ್ದಾರೆ. ಕ್ಯಾಚ್ ಕೈಚೆಲ್ಲುವುದೆಂದರೆ ಚೆಂಡನ್ನು ಅನ್ನು ಹಿಡಿಯದಿರುವುದು. ಚೆಂಡು ಬರುವ ದಿಕ್ಕನ್ನು ತಪ್ಪಿಸಿಕೊಳ್ಳುವುದಾಗಿತ್ತು. ಪಾಕ್ ಕ್ರಿಕೆಟ್‌ನಲ್ಲಿ ಹೀಗೆ ಸುಲಭವಾಗಿ ಹಿಡಿಯಬಹುದಾದ ಚೆಂಡನ್ನು ನಿರ್ಣಾಯಕ ಸಂದರ್ಭಗಳಲ್ಲೇ ಕೈಬಿಟ್ಟ ಅನೇಕ ಉದಾಹರಣೆಗಳಿವೆ.




ಮೊದಲಿನಿಂದಲೂ ಪಾಕ್‌ನಲ್ಲಿ ರಾಜಕಾರಣಿಗಳೆಲ್ಲರೂ ಬಲೋಚಿಸ್ತಾನದ ಬಗ್ಗೆ ಮಾತನಾಡುತ್ತಾ, ಅಲ್ಲಿನ ಜನರಿಗೆ ಅನ್ಯಾಯವಾಗಿದೆ ಎಂದೂ, ಅಭಿವೃದ್ಧಿ ಮಾಡುತ್ತೇವೆ ಎಂದೂ ಹೇಳಿ ಮತ ಪಡೆಯುತ್ತಾರೆ. ಆದರೆ ಅಲ್ಲಿನ ಜನರನ್ನು ಕಂಡರೆ ಸರ್ಕಾರಕ್ಕೂ ಆಗಲ್ಲ, ಸೇನೆಗೂ ಆಗಲ್ಲ, ಅಲ್ಲಿನ ಜನರು ದಂಗೆದ್ದು ಪ್ರಶ್ನೆ ಕೇಳಿದಾಗ ಅವರ ಮೇಲೆ ಭಯೋತ್ಪಾದನಾ ದಾಳಿಗಳನ್ನು ಪಾಕಿಸ್ತಾನ ನಡೆಸಿತು.

ಕ್ರಿಕೆಟ್‌ನಲ್ಲಿ ಇದು ಸಾಮಾನ್ಯವಾದರೂ ಪಾಕಿಸ್ತಾನಿಯರು ಕ್ಯಾಚ್ ಕೈಚೆಲ್ಲುವ ರೀತಿಗೆ ಹೊಸ ಪರಿಭಾಷೆಯನ್ನೇ ಬರೆದವರು! ಬೌಂಡರಿಯ ಬದಿಯಲ್ಲಿ ಬಾಲ್ ಮೇಲಿಂದ ಕೆಳಗೆ ಬರುವುದರಲ್ಲಿ ಇಬ್ಬರು ಫೀಲ್ಡರುಗಳು ಕ್ಯಾಚ್‌ಗಾಗಿ ಬರುವುದು. ಮೊದಲನೇ ಫೀಲ್ಡರ್ ಮುಂದಿನವನು ಹಿಡಿಯುತ್ತಾನೆ ಎಂದು ಬಿಟ್ಟರೆ ಇನ್ನೊಬ್ಬ ಮುಂದೆ ಬರುವವನು ಹಿಡಿಯುತ್ತಾನೆಂದು ಬಿಡುವುದು. ಬಾಲ್ ಬರುವಷ್ಟರಲ್ಲಿ ಇಬ್ಬರೂ ಎದುರು ಬದುರಾಗಿ ಒಬ್ಬರಿಗೊಬ್ಬರನ್ನು ನೋಡುತ್ತಾ ನಿಲ್ಲುವುದು. ಈ ಕ್ಷಣದಲ್ಲಿ ಪಾಕಿಸ್ತಾನಿ ಕ್ರಿಕೆಟಿಗರು ಏನು ಮಾಡಲು ಹೊರಟಿದ್ದಾರೆಂದೇ ತಿಳಿಯುವುದಿಲ್ಲ, ಇವತ್ತಿಗೂ ಆ ರೀತಿ ಯಾರು ಕ್ಯಾಚ್ ಬಿಡುತ್ತಾರೋ ಅವರಿಗೆ ಪಾಕಿಸ್ತಾನಿ ಅಭಿಮಾನಿಗಳೆಂದು ಗೇಲಿ ಮಾಡುವ ವಾಡಿಕೆಯಿದೆ. ಇದು ಒಂದು ಕಡೆ. ಆಡಳಿತ ವಿಚಾರಕ್ಕೆ ಬಂದರೆ ಗಡಿ ಭಾಗಗಳಲ್ಲಿ ಅಭಿವೃದ್ಧಿ ಪಡಿಸಿ ಜನರನ್ನು ಸೆಳೆಯಬೇಕೆ ಅಥವಾ ಅವರಿಗೆ ಭಯೋತ್ಪಾದನೆಯಿಂದಲೋ, ಪೊಲೀಸರಿಂದಲೋ ಹೆದರಿಸಿ ಬಾಯಿ ಮುಚ್ಚಿಸಬೇಕೆ ಎಂಬ ಗೊಂದಲ ಪಾಕ್‌ಗೆ ತನ್ನ ತಂಡದ ಆಟಗಾರರ ಕ್ರಿಕೆಟ್ ಫೀಲ್ಡಿಂಗ್‌ನಂತೆ ಭಾಸವಾಗುತ್ತದೆ. ವಾಸ್ತವವಾಗಿ ಭಯೋತ್ಪಾದನಾ ಚಟುವಟಿಕೆಗಳಿಗೆ ಉತ್ತೇಜಿಸುವುದು ಮತ್ತು ಅದಕ್ಕೆ ಬೇಕಾದ ಬೆಂಬಲ ಕೊಡುವುದು ಪಾಕಿಸ್ತಾನ ಸರ್ಕಾರ ಮತ್ತು ಅಲ್ಲಿನ ಸೇನೆಯ ಕೆಟ್ಟ ಚಾಳಿ.

ಯಾವುದೇ ವಿಚಾರದಲ್ಲಿ ಪಾಕಿಸ್ತಾನ ಸರ್ಕಾರದ ವೈಫಲ್ಯ ಕಂಡುಬಂದರೆ ಅಲ್ಲಿ ಭಯೋತ್ಪಾದಕರು ಸಕ್ರಿಯರಾಗುತ್ತಾರೆ. ಅದರ ವಿರುದ್ಧ ಹೋರಾಟಗಳು ನಡೆಯಲಾರಂಭಿಸಿದರೆ ಪೊಲೀಸರು ಪೌರುಷ ಪ್ರದರ್ಶಿಸುತ್ತಾರೆ. ಬಯಲು ಪ್ರದೇಶಗಳಲ್ಲಿ ಗೂಂಡಾಗಿರಿ ಮಾಡುವ ಸಾಮಾನ್ಯ ಮನುಷ್ಯನೂ ಭಯೋತ್ಪಾದಕ ಹೇಳಿದಂತೆ ಕೇಳುತ್ತಾನೆ. ಇನ್ನು ಐಎಸ್‌ಐ ಅಂತೂ ಇದರಲ್ಲಿ ಎತ್ತಿದ ಕೈ. ಐಎಸ್‌ಐ ಕೆಲವೊಮ್ಮೆ ಪಾಕಿಸ್ತಾನ ಸರ್ಕಾರಕ್ಕಿಂತ ಹೆಚ್ಚಾಗಿ ಭಯೋತ್ಪಾದಕರಿಗಾಗಿ ಹೆಚ್ಚು ದುಡಿಯುತ್ತದೆ. ಹೀಗಾಗಿ ಪಾಕ್‌ನ ಸರ್ಕಾರವನ್ನು ಅಲ್ಲಿನ ಭಯೋತ್ಪಾದಕರು ನಡೆಸುತ್ತಾರೆಂದರೆ ತಪ್ಪಾಗಲ್ಲ. ಈ ನಿಟ್ಟಿನಲ್ಲಿ ಅಲ್ಲಿನ ಸರ್ಕಾರಕ್ಕೆ ಪಿಒಕೆ ಅಂಥ ಪ್ರದೇಶಗಳಲ್ಲಿ ಅಭಿವೃದ್ಧಿ ಮಾಡಲಾಗಲ್ಲ, ಭಯೋತ್ಪಾದಕರೇ ದಂಗೆ ಮಾಡಿಸುತ್ತಾರೆ. ಇವೆಲ್ಲವನ್ನೂ ನೋಡಿದರೆ, ಪಾಕಿಸ್ತಾನದ ನಿರ್ವಹಣೆ ಮತ್ತು ಆಡಳಿತ ವೈಖರಿ ಅದೇ ದೇಶದ ಕ್ರಿಕೆಟ್ ತಂಡದ ಫೀಲ್ಡಿಂಗ್‌ನಂತೇ ದುರ್ಬಲವಾಗಿದೆ.

ಇತಿಹಾಸದಲ್ಲೂ ಇಂಥ ಘಟನೆಗಳು ನಡೆದಿವೆ. ಮೊದಲಿನಿಂದಲೂ ಪಾಕ್‌ನಲ್ಲಿ ರಾಜಕಾರಣಿಗಳೆಲ್ಲರೂ ಬಲೋಚಿಸ್ತಾನದ ಬಗ್ಗೆ ಮಾತನಾಡುತ್ತಾ, ಅಲ್ಲಿನ ಜನರಿಗೆ ಅನ್ಯಾಯವಾಗಿದೆ ಎಂದೂ, ಅಭಿವೃದ್ಧಿ ಮಾಡುತ್ತೇವೆ ಎಂದೂ ಹೇಳಿ ಮತ ಪಡೆಯುತ್ತಾರೆ. ಆದರೆ ಅಲ್ಲಿನ ಜನರನ್ನು ಕಂಡರೆ ಸರ್ಕಾರಕ್ಕೂ ಆಗಲ್ಲ, ಸೇನೆಗೂ ಆಗಲ್ಲ, ಅಲ್ಲಿನ ಜನರು ದಂಗೆದ್ದು ಪ್ರಶ್ನೆ ಕೇಳಿದಾಗ ಅವರ ಮೇಲೆ ಭಯೋತ್ಪಾದನಾ ದಾಳಿಗಳನ್ನು ಪಾಕಿಸ್ತಾನ ನಡೆಸಿತು. ಆದರೆ ಬಲೋಚಿಸ್ತಾನದಲ್ಲಿ ನಡೆಯುತ್ತಿರುವ ಹೋರಾಟಗಳು ಪಾಕ್‌ಗೆ ನುಂಗಲಾಗದ ತುತ್ತಾಗುತ್ತಿರುವಾಗಲೇ ಈಗ ಪಿಒಕೆಯನ್ನು ಎದುರಿಸಬೇಕಾದ ಪರಿಸ್ಥಿತಿ ಬಂದಿದೆ.

ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಕೇಳಿಬರುತ್ತಿರುವ ಆಜಾದಿ ಘೋಷಣೆ, ಹೋರಾಟ ಮತ್ತು ಅಲ್ಲಿನ ಜನರ ಪ್ರತಿರೋಧ ಪಾಕಿಸ್ತಾನಕ್ಕೆ ತೀವ್ರ ಆತಂಕ ತಂದಿದೆ. ಮಾಧ್ಯಮದ ಮುಂದೆ ಕಾಶ್ಮೀರಕ್ಕಾಗಿ ನಾವು ಜೀವವನ್ನೇ ಕೊಡುತ್ತೇವೆ ಎಂದೆಲ್ಲಾ ಹೇಳುವ ಪಾಕಿಸ್ತಾನ ಕಡೆ ಪಕ್ಷ ಪಿಒಕೆಯಲ್ಲಿ ಆಸ್ಪತ್ರೆಯನ್ನಾದರೂ ಮೊದಲು ಕಟ್ಟಲಿ. ಮುಜಫರಾಬಾದ್‌ನಲ್ಲಿ ಜನರ ಭೀಕರ ಪರಿಸ್ಥಿತಿ ಇಡೀ ವಿಶ್ವಕ್ಕೆ ಗೊತ್ತು. ಅದಲ್ಲದೆ ಮೀರ್ಪುರ್, ಬಾಲ್ಟಿಸ್ತಾನದಲ್ಲೂ ಜನರ ಪಾಡು ಅತ್ಯಂತ ಹೀನಾಯವಾಗಿದೆ. ಮಕ್ಕಳಿಗೆ ಶಾಲೆಗಳಿಲ್ಲ, ಯುವಕರಿಗೆ ನೌಕರಿಯಿಲ್ಲ, ಗಿಲ್ಗಿಟ್-ಬಾಲ್ಟಿಸ್ತಾನದಲ್ಲೂ ಇದೇ ಪರಿಸ್ಥಿತಿ. ಹಾಗೆ ನೋಡಿದರೆ ಸಂಪೂರ್ಣ ಪಾಕಿಸ್ತಾನದ ಪರಿಸ್ಥಿತಿಯೇ ಹಾಗೇ ಇದೆ. ಆದರೆ ತೀರಾ ಇಸ್ಲಾಮಾಬಾದ್ ಹತ್ತಿರ ಇರುವ ಪಿಒಕೆ ಪ್ರದೇಶಗಳಲ್ಲಿ ಇಸ್ಲಾಮಾಬಾದ್‌ನಲ್ಲಿರುವ ಸೌಲಭ್ಯಗಳಿಲ್ಲ ಕಡೆ ಪಕ್ಷ ಒಂದು ಬಸ್‌ಸ್ಟ್ಯಾಂಡ್ ಕೂಡ ಈ ಪ್ರದೇಶಗಳಲ್ಲಿ ನಿರ್ಮಿಸಲಾಗಿಲ್ಲ, ಈ ನಡುವೆ ದರ ಏರಿಕೆ ಜನರಿಗೆ ತೀರಾ ಬಿಸಿ ಮುಟ್ಟಿಸಿದೆ. ಇದೇ ಅವಸರದಲ್ಲಿ ದಂಗೆದ್ದ ಪಿಒಕೆ ಜನರು ಪಾಕಿಸ್ತಾನದಿಂದ ಬಿಡುಗಡೆಗೊಳ್ಳಲು ಕಾಯುತ್ತಿದ್ದಾರೆ. ಹತಾಶೆಗೊಳಗಾಗಿದ್ದಾರೆ. ಅಂಥ ಜನರನ್ನು ಪಾಕಿಸ್ತಾನ ಪೊಲೀಸರಿಂದ ಹೊಡೆಸುತ್ತಿದ್ದಾರೆ.

ಹಿಂದೆ ವೇದಿಕೆ ಮೇಲೆ ಹುಂಬನಂತೆ ಮಾತನಾಡುತ್ತಿದ್ದ ಅಸೀಂ ಮುನೀರ್ ದಂಗೆಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ ಹೇಳಿದ್ದ. ಅದರರ್ಥ ಪಿಒಕೆಯ ಸಾಮಾನ್ಯ ಜನರ ಜೀವ ಪಡೆಯುವುದು! ಪಾಕಿಸ್ತಾನದ ಆಡಳಿತ ವಿರುದ್ಧ ಮಾತನಾಡಿದವರೆಲ್ಲಾ ಪಾಕ್ ಪಾಲಿಗೆ ರಾ ಏಜೆಂಟ್‌ಗಳಾಗಿ ಬಿಡುತ್ತಾರೆ. ಆಡಳಿತ ಮಾಡಲಾಗದೆ ಹತಾಶೆಗೊಳ್ಳುವ ಪಾಕಿಸ್ತಾನ ಮೊದಲಿನಿಂದಲೂ ಭಯೋತ್ಪಾದಕ ದಾಳಿಗಳನ್ನು ಮಾಡುತ್ತಲೇ ಬಂದಿದೆ. ಈಗ ಪೊಲೀಸ್ ದಾಳಿ, ಹೆಸರು ಬೇರೆಯಾದರೂ ಕೆಲಸ ಒಂದೇ. ಜನಸಾಮಾನ್ಯರನ್ನು ಹೆದರಿಸುವುದು. ಇದರ ವಿರುದ್ಧ ಹೋರಾಟಗಳನ್ನು ಮಾಡಿರುವ ಸರ್ದಾರ್ ಅಮನ್ ಖಾನ್, ಶೋಕತ್ ನವಾಜ್ ಮಿರ್, ಒಮರ್ ನಜೀರ್, ಇಮ್ತಿಯಾಜ್ ಅಸ್ಲಂ, ಖ್ವಾಜಾ ಅರ್ಷದ್ ಅಂಥವರು ಪಾಕಿಸ್ತಾನಕ್ಕೆ ಧಮ್ಕಿ ಹಾಕುತ್ತಿದ್ದಾರೆ.

ತೀವ್ರ ಆತಂಕಕ್ಕೆ ಒಳಗಾದ ಪಾಕಿಸ್ತಾನ ದಾಳಿಗಳಿದಂತಿದೆ. ಅಸಲಿಗೆ ಇವರೆಲ್ಲಾ ಕೇಳಿದ್ದಾದರೂ ಏನು? ಶಾಲೆ ಕಟ್ಟಿಸಿ ಎಂದು ಕೇಳುವುದು ತಪ್ಪೇ? ಆಸ್ಪತ್ರೆಗಳಾಗಲಿ ಎಂದು ಕೇಳಿದರೆ ತಪ್ಪೇ? ಅಥವಾ ನಮಗೆ ಸ್ವಾತಂತ್ರ್ಯ ಬೇಕು ಎಂದು ಕೇಳಿದರೆ ತಪ್ಪೇ? ಸ್ವತಃ ಭಿಕ್ಷೆ ಬೇಡುವ ಪಾಕಿಸ್ತಾನಕ್ಕೆ ಇದೆಲ್ಲಾ ಪೂರೈಸುವುದು ಕಷ್ಟವಾದರೂ ಜನರನ್ನು ಸಾಯಿಸುವಷ್ಟು ಘೋರ ತಪ್ಪೇನು ಅಲ್ಲಿನ ಜನರು ಮಾಡಿದರೇ ಇಲ್ಲ, ಅಸಲಿಯತ್ತಾಗಿ ಪಾಕಿಸ್ತಾನಕ್ಕೆ ಆಡಳಿತ ವಿಚಾರದಲ್ಲಿ ಗೊಂದಲಗಳಿವೆ. ಪಿಒಕೆಯಲ್ಲಿ ದಂಗೆ ಮಾಡಿಸಬೇಕೆ ಅಥವಾ ಅಲ್ಲಿನ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆ ಎಂಬ ವಿಚಾರದಲ್ಲೇ ಅದಕ್ಕೆ ಗೊಂದಲಗಳಿವೆ. ಥೇಟ್ ಪಾಕ್ ತಂಡದ ಫೀಲ್ಡರ್‌ಗಳಂತೆ.

## ಯಾವಾಗ ರೋಗಗಳು ಕಾಣಿಸುತ್ತವೆ?

ಅತ್ಯಂಬುಪಾನಂ ಕಠಿನಾಸನಂ ಚ ಧಾತುಕ್ಷಯೋ ವೇಗ ವಿಧಾರಣಂ ಚ ।
ದಿವಾಶಯೋ ಜಾಗರಣಂ ಚ ರಾತ್ರೌ ಷಡ್‌ಬಿರ್ ನರಾಣಾಂ ನಿವಸಂತಿ ರೋಗಾಃ ॥

- ಮಹಾಸುಭಾಷಿತ ಸಂಗ್ರಹ




ಹೆಚ್ಚಾಗಿ ನೀರು ಕುಡಿಯುವುದು, ಕಠಿಣವಾದ ಆಸನದಲ್ಲಿ ಕುಳಿತಿರುವುದು, ಧಾತು ಕ್ಷಯ, ವೇಗಗಳನ್ನು ತಡೆಯುವುದು, ಹಗಲು ಮಲಗುವುದು, ರಾತ್ರಿ ಎಚ್ಚರವಾಗಿರುವುದು- ಈ ಆರರಿಂದಾಗಿ ರೋಗಗಳು ಕಾಣಿಸಿಕೊಳ್ಳುತ್ತವೆ - ಎಂಬುದು ಶ್ಲೋಕಾರ್ಥ.

ಶಾರೀರಿಕ ಪ್ರಕೃತಿ, ವಾತಾವರಣ, ಜನರ ಅಭ್ಯಾಸಗಳು, ಆಹಾರ ಪದ್ಧತಿಯಲ್ಲಿ ಏರುಪೇರು ಹೀಗೆ ಇನ್ನೂ ಅನೇಕ ಕಾರಣಗಳಿಂದಾಗಿ ರೋಗಗಳು ಕಾಣಿಸಿಕೊಳ್ಳುತ್ತವೆ. ಇತ್ತೀಚೆಗೆ ಮನುಷ್ಯನ ದುರಾಸೆ, ಅತಿಯಾದ ಆಕಾಂಕ್ಷೆ ಇವುಗಳಿಂದಾಗಿಯೂ ರೋಗ ಬರುತ್ತದೆ. ಪ್ರಸ್ತುತ ಶ್ಲೋಕದಲ್ಲಿ ಅತಿಯಾಗಿ ನೀರು ಕುಡಿಯುವುದು, ಗಡುಸಾದ ಆಸನದಲ್ಲಿ ಕುಳಿತುಕೊಳ್ಳುವುದು, ಧಾತುಕ್ಷಯ, ವೇಗಗಳನ್ನು ತಡೆಯುವುದು, ಹಗಲು ನಿದ್ರೆ, ರಾತ್ರಿ ಜಾಗರಣ - ಹೀಗೆ ಆರು ಅಂಶಗಳನ್ನು ಗುರುತಿಸಿ ಇವುಗಳು ರೋಗಕ್ಕೆ ಕಾರಣವಾಗುತ್ತವೆ. ಇನ್ನೊಂದೆಡೆ ಸುಭಾಷಿತ ರತ್ನ ಭಾಂಡಾಗಾರದಲ್ಲಿಯೂ ರೋಗಕ್ಕೆ ಕಾರಣವು ಯಾವುದು ಎಂದು ಹೇಳಲಾಗಿದೆ. ಮೇಲಿನ ಸುಭಾಷಿತದಲ್ಲಿ ಹೇಳದ ವಿಷಮಾಸನದ ಅಂಶ ಎಂಬ ಅಂಶವನ್ನು ಅದರಲ್ಲಿ ಸೇರಿಸಲಾಗಿದೆ. ಹೆಚ್ಚಾಗಿ ನೀರು ಕುಡಿಯುವುದು ಒಳ್ಳೆಯದಲ್ಲ, ಇದರಿಂದ ಅನ್ನವು ಜೀರ್ಣವಾಗುವುದಿಲ್ಲ, ನೀರು ಕುಡಿಯದಿದ್ದರೂ ಅದೇ ದೋಷ. ಅದ್ದರಿಂದ ಜಠರಾಗ್ನಿಯನ್ನು ಹೆಚ್ಚಿಸುವುದಕ್ಕಾಗಿ ಆಗಾಗ ನೀರು ಕುಡಿಯುತ್ತಿರಬೇಕು ಎಂದು ಸುಭಾಷಿತಕಾರರು ಹೇಳುತ್ತಾರೆ. ತುಂಬಾ ಕಠಿಣವಾದ ಆಸನದಲ್ಲಿ ಕುಳಿತುಕೊಳ್ಳುವುದು, ಅತ್ಯಂತ ಮೃದುವಾದ ಸ್ಪಂಜಿನ ಆಸನದಲ್ಲಿ ಕುಳಿತುಕೊಳ್ಳುವುದೂ ಒಳ್ಳೆಯದಲ್ಲ, ಕುಳಿತುಕೊಳ್ಳುವಾಗಲೂ ಜಾಗ್ರತೆ ವಹಿಸಬೇಕು. ನಿರಂತರ ಧಾತು ಕ್ಷಯವಾಗುವುದು ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಧಾತುಕ್ಷಯವಾಗದಂತೆ ಎಚ್ಚರ ವಹಿಸಬೇಕು. ವೇಗವಿಧಾರಣಮ್ - ಎಂದರೆ ಮಲಮೂತ್ರಾದಿಗಳನ್ನು ಕಟ್ಟಿಕೊಳ್ಳುವುದು. ಕಾಲಕಾಲಕ್ಕೆ ಇವುಗಳ ವಿಸರ್ಜನೆಯಾಗಬೇಕು. ಇದು ಆರೋಗ್ಯದ ಲಕ್ಷಣ. ಇದರ ಹೊರತಾಗಿ ಮಲಬದ್ಧತೆ, ಮೂತ್ರಕಟ್ಟುವಿಕೆ ಇವು ಇನ್ನಷ್ಟು ರೋಗಕ್ಕೆ ಕಾರಣವಾಗುತ್ತದೆ. ಇಡೀ ಶರೀರವನ್ನೇ ಬಲಿ ತೆಗೆದುಕೊಳ್ಳಬಹುದು. ಇವುಗಳನ್ನು ತಡೆಹಿಡಿಯುವುದು ಅಪಾಯಕ್ಕೆ ಕಾರಣವಾಗುತ್ತದೆ. ಅದ್ದರಿಂದ ಈ ಬಗ್ಗೆ ಎಚ್ಚರ ಸದಾ ಇರಬೇಕು.

ಹಗಲು ಎಚ್ಚರದಿಂದಿರಬೇಕು. ರಾತ್ರಿ ಮಲಗಿ ನಿದ್ರೆ ಮಾಡಬೇಕು. ಇದು ಜಗದ ನಿಯಮ. ಹಗಲು ನಿದ್ರೆ ಯಾವಾಗಲೂ ಒಳ್ಳೆಯದಲ್ಲ, ರೋಗ ಬಂದಾಗ, ಮಕ್ಕಳು, ಮುದುಕರು ಹಗಲು ನಿದ್ರೆ ಮಾಡಬಹುದು. ಇದು ಅನಾರೋಗ್ಯದ, ದೌರ್ಬಲ್ಯದ ಲಕ್ಷಣ. ಆರೋಗ್ಯ ಸರಿ ಇದ್ದವರು ಹಗಲಿಗೆ ನಿದ್ರೆ ಮಾಡಬಾರದು. 'ದಿವಾ ಮಾ ಶ್ವಪೀಃ' ಇದು ಶಾಸ್ತ್ರ ವಾಕ್ಯ. ಇದು ಆರೋಗ್ಯದ ಲಕ್ಷಣ. ರಾತ್ರಿ ಬೇಗ್ಗಾಗಿ ನಿದ್ರೆ ಮಾಡಬೇಕು. ರಾತ್ರಿ ಇರುವುದೇ ನಿದ್ರೆ ಮಾಡುವುದಕ್ಕೆ, ಶಾರೀರಿಕ ಸುಸ್ತನ್ನು ದೂರ ಮಾಡುವುದಕ್ಕೆ, ರಾತ್ರಿ ಸರಿಯಾಗಿ ನಿದ್ರೆ ಮಾಡದಿದ್ದರೆ ಬಗೆ ಬಗೆಯ ರೋಗಕ್ಕೆ ತುತ್ತಾಗಬೇಕಾಗುತ್ತದೆ. ರಾತ್ರಿಯ ನಿದ್ರೆ ಆರೋಗ್ಯದ ಲಕ್ಷಣ. ರಾತ್ರಿ ಪಾಳಿ, ರಾತ್ರಿಯೂ ಕೆಲಸ ಮಾಡುವುದು ಆರೋಗ್ಯಕ್ಕೆಂದೂ ಒಳ್ಳೆಯದಲ್ಲ, ಇಂದಿನ ಐಟಿ, ಬಿಟಿ ಯುಗದಲ್ಲಿ ಹಗಲು ರಾತ್ರಿಯಾಗಿದೆ, ರಾತ್ರಿ ಹಗಲಾಗಿದೆ. ಕೆಲಸ ಮಾಡುವ ಸಮಯವೇ ವ್ಯತ್ಯಾಸವಾಗಿ ಸಮಾಜದ ಸ್ವಾಸ್ಥ್ಯವೇ ಏರುಪೇರಾಗುತ್ತಿದೆ. ಇವುಗಳನ್ನೆಲ್ಲಾ ಗಮನದಲ್ಲಿರಿಸಿಕೊಂಡು ಶ್ಲೋಕ ಸಂದೇಶವನ್ನು ಅನುಸರಿಸಿದರೆ ಸ್ವಸ್ಥ ಜೀವನ ನಡೆಸಬಹುದು.


# ಎಲ್ಲಾ ಪಕ್ಷಗಳು ರೆಸಾರ್ಟ್ ಸಂಸ್ಕೃತಿಗೆ ಕೊನೆ ಹಾಡಲಿ

▸ ಸುರೇಶ್ ಕುಮಾರ್. ಎಸ್



ನಿನ್ನೆ ನಾನು ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿಗೆ ಕರ್ನಾಟಕ ರಾಜ್ಯ ವಿಧಾನಸಭೆಯಿಂದ ಆಯ್ಕೆ ಮಾಡುವ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಹೊರ ಬಂದೆ. ಒಟ್ಟು ಏಳು ಸ್ಥಾನಗಳಿಗೆ 8 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಸಹಜವಾಗಿ ಎಲ್ಲಾ ಪಕ್ಷಗಳು ಈ ಚುನಾವಣೆಗಳಲ್ಲಿ ಮತ ಚಲಾಯಿಸುವ ಕ್ರಮ ಕುರಿತು ವ್ಹಿಪ್ (Whip) ನೀಡುವುದು ನಡೆದುಕೊಂಡು ಬಂದಿರುವ ಪದ್ಧತಿ. ಅದೇ ರೀತಿ ನಮ್ಮ ಪಕ್ಷದಲ್ಲೂ ನೀಡಿರುವ ವ್ಹಿಪ್ ಅನುಸಾರವಾಗಿ ನಾವೆಲ್ಲರೂ ಮತ ಚಲಾಯಿಸಿದ್ದೇವೆ.

ವಿಧಾನಸಭಾ ಸದಸ್ಯನಾಗಿ ನಾನು ಅದೆಷ್ಟೋ ಚುನಾವಣೆಗಳಲ್ಲಿ ವಿಧಾನ ಪರಿಷತ್ತಿಗೆ, ರಾಜ್ಯಸಭೆಗೆ ಮತ್ತು ರಾಷ್ಟ್ರಪತಿ ಸ್ಥಾನಕ್ಕೆ ಮತವನ್ನು ಚಲಾಯಿಸಿದ್ದೇನೆ. ಇದೊಂದು ನನಗೆ ದೊರಕಿರುವ ಅಪೂರ್ವ ಅವಕಾಶ ಎಂದುಕೊಂಡು ಪ್ರತಿ ಬಾರಿ ಸಂತಸದಿಂದ ಮತ ಚಲಾಯಿಸಿದ್ದೇನೆ. ಮತ ಚಲಾಯಿಸುವ ಮೊದಲ ಮತದಾರರಲ್ಲಿ ನಾನೂ ಒಬ್ಬನಾಗಿರುತ್ತೇನೆ. ಈ ರೀತಿ ವಿಧಾನ ಪರಿಷತ್ತಿನ ಚುನಾವಣೆ ನಡೆಯುತ್ತಿರುವಾಗ ನನ್ನ ಮನಸ್ಸಿಗೆ ಬಂದ ಒಂದು ವಿಚಾರವನ್ನು ಹಂಚಿಕೊಳ್ಳಬೇಕೆಂದು ಅನಿಸಿದೆ.




ಈ ಚುನಾವಣೆಗಳಲ್ಲಿ ಮತ ಚಲಾಯಿಸುವವರೆಲ್ಲರೂ ವಿಧಾನ ಸಭೆಯ ಸದಸ್ಯರು. ಬೇರೆ ಬೇರೆ ಪಕ್ಷದ ಚಿಹ್ನೆ ಅಡಿ ಆಯ್ಕೆಯಾಗಿ ಬಂದಿರುವ ಸದಸ್ಯರು. ಆಯಾ ಪಕ್ಷಗಳ ಕಾರ್ಯಕರ್ತರು ಬಹಳ ಪರಿಶ್ರಮಪಟ್ಟು ಇವರುಗಳನ್ನು ಗೆಲ್ಲಿಸಿರುತ್ತಾರೆ. ಈ ಚುನಾವಣಾ ಸಂದರ್ಭದಲ್ಲಿ ವಿಧಾನಸಭಾ ಸದಸ್ಯರನ್ನು ರಾಜಕೀಯ ಪಕ್ಷಗಳು ರೆಸಾರ್ಟ್‌ಗಳಿಗೆ ಕರೆದುಕೊಂಡು ಹೋಗಿ ಎರಡು ದಿನಗಳ ಕಾಲ ಅವರ ಮೇಲೆ ಕಣ್ಗಾವಲು ವ್ಯವಸ್ಥೆ ಮಾಡುವುದು ಎಷ್ಟರಮಟ್ಟಿಗೆ ಸರಿ? ನನಗೆ ನೆನಪಿರುವಂತೆ, ನಮ್ಮ ರಾಜ್ಯದಲ್ಲಿ ಈ ರೆಸಾರ್ಟ್ ಸಂಸ್ಕೃತಿ ಪ್ರಾರಂಭವಾಗಿದ್ದು ದಿವಂಗತ ಎನ್.ಟಿ ರಾಮರಾವ್ ಅವರ ತೆಲುಗು ದೇಶಂ ಪಕ್ಷದ ಮೇಲೆ ಅಂದಿನ ಕೇಂದ್ರದ ಆಳುವ ಪಕ್ಷದ ಷಡ್ಯಂತ್ರಗಳು ಬಿದ್ದು, ಆ ಸರ್ಕಾರವನ್ನು ವಜಾ ಮಾಡಿದ ಹಿನ್ನೆಲೆಯಲ್ಲಿ, ತೆಲುಗು ದೇಶಂ ಪಕ್ಷದ ಶಾಸಕರನ್ನು ನಮ್ಮ ರಾಜ್ಯದ ರೆಸಾರ್ಟ್‌ಗೆ ಕರೆದುಕೊಂಡ ಬಂದ 1983ರ ವಿದ್ಯಮಾನ ನನ್ನ ನೆನಪಿನಲ್ಲಿದೆ. ಅದಾದ ಮೇಲೆ ಹಲವಾರು ಸಂದರ್ಭದಲ್ಲಿ ಎಲ್ಲಾ ಪಕ್ಷಗಳು ತಮ್ಮ ತಮ್ಮ ಶಾಸಕರನ್ನು ರೆಸಾರ್ಟ್ ಸಂಸ್ಕೃತಿಗೆ ಒಳಪಡಿಸಿರುವುದು ಇತಿಹಾಸದ ಒಂದು ಭಾಗ.

ಪ್ರತಿಯೊಂದು ಪಕ್ಷಕ್ಕೂ ತನ್ನ ಶಾಸಕರ ಬಗ್ಗೆ ವಿಶ್ವಾಸವಿರಬೇಕು, ನಂಬಿಕೆ ಇರಬೇಕು. ಅದೇ ರೀತಿ ಶಾಸಕರಿಗೂ ತಮ್ಮ ತಮ್ಮ ಪಕ್ಷದ ಬಗ್ಗೆ ಹೆಮ್ಮೆ ಮತ್ತು ಗೌರವ ಹಾಗೂ ಶ್ರದ್ಧೆ ಇರಬೇಕು. ಹೀಗಿರುವಾಗ ಶಾಸಕರು ಖರೀದಿಗೆ ಒಳಪಡುತ್ತಾರೆ ಅಥವಾ ಅವರನ್ನು ಬೇರೆ ಪಕ್ಷದವರು ಅಪಹರಿಸಬಹುದು ಅಥವಾ ವಿವಿಧ ರೀತಿಯ ಆಮಿಷಗಳಿಗೆ ಅವರನ್ನು ಬಲಿ ಮಾಡಬಹುದು ಎಂಬ ಅಪನಂಬಿಕೆ ಪ್ರಜಾಪ್ರಭುತ್ವದ ಮೂಲ ಸಿದ್ಧಾಂತಕ್ಕೆ ಒಂದು ಕಳಂಕ.

Free & Fair Elections-ನ್ಯಾಯಯುತ ಮತ್ತು ಮುಕ್ತ ಚುನಾವಣೆಗಳು ಪ್ರಜಾತಂತ್ರದ ವ್ಯವಸ್ಥೆಯ ಮೂಲಸತ್ವ. ಹಾಗಿರುವಾಗ ಶಾಸಕರನ್ನು ಒಂದು ರೀತಿ ಬಚ್ಚಿಟ್ಟು ಹಾಕಿ ಅವರ ಮೇಲೆ ನಿಗಾ ಇಡಬೇಕಾದ ಪರಿಸ್ಥಿತಿ ಬರುವುದು ರಾಜಕೀಯ ವ್ಯವಸ್ಥೆಗೆ ಭೂಷಣವಲ್ಲ, ಇದನ್ನು ರಾಜಕೀಯ ಪಕ್ಷಗಳು ಮತ್ತು ಶಾಸಕರು ಇಬ್ಬರು ಬಹಳ ಗಂಭೀರವಾಗಿ ಅವಲೋಕಿಸಬೇಕಿದೆ. ವಿಧಾನಸಭಾ ಸದಸ್ಯರನ್ನೇ ಈ ರೀತಿ ಚುನಾವಣಾ ಹಿನ್ನೆಲೆಯಲ್ಲಿ ಯಾವುದೋ ಆತಂಕದಿಂದ ಅಥವಾ ಭಯದಿಂದ, ಅವರ ಮೇಲೆ ಸಂಪೂರ್ಣ ನಂಬಿಕೆ ಇಡದೆ ಆಯಾ ಪಕ್ಷಗಳು ರೆಸಾರ್ಟ್‌ಗಳಿಗೆ ಅಥವಾ ಇನ್ಯಾವುದೋ ಸ್ಥಳಕ್ಕೆ ಕರೆದೊಯ್ಯುವುದು ದೇಶದ ಚುನಾವಣೆಗಳ ಸಾಮಾನ್ಯ ಮತದಾರರ ಮೇಲೆ ಯಾವ ಪರಿಣಾಮ ಬೀರಬಹುದು ಎಂಬುದನ್ನು ನಾವೆಲ್ಲರೂ ಪಕ್ಷ ಭೇದ ಮರೆತು ಗಂಭೀರವಾಗಿ ಚಿಂತನೆ ನಡೆಸಬೇಕಿದೆ. ರೆಸಾರ್ಟ್ ಸಂಸ್ಕೃತಿಗೆ ಕೊನೆಹಾಡಬೇಕೆಂಬ ಸಾಮಾನ್ಯ ಕನಿಷ್ಠ ಒಪ್ಪಂದಕ್ಕೆ ಎಲ್ಲಾ ರಾಜಕೀಯ ಪಕ್ಷಗಳು ಬರಬೇಕಿದೆ.

## ಕಿರುಸುದ್ದಿ

### ನಿತೇಶ್ ಕುಮಾರ್ ನೇಮಕ

• **ವಿಜಯಪುರ:** ವಿಜಯಪುರ ಬ್ಲಾಕ್ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಪಟ್ಟಣದ ವಿ.ನಿತೇಶ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ. ಸಚಿವ ಕೆ.ಎಚ್. ಮುನಿಯಪ್ಪ, ಕೆ.ಪಿ.ಸಿ.ಸಿ ಕಾರ್ಯದರ್ಶಿ ವಿ.ಮಂಜುನಾಥ್, ದೇವನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಸಿ. ಮಂಜುನಾಥ್, ವಿಜಯಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ದಿನ್ನೂರು ವೆಂಕಟೇಶ್ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್. ಗೌಡ ಅವರ ಶಿಫಾರಸ್ಸಿನ ಮೇರೆಗೆ ಈ ನೇಮಕಾತಿ ಆದೇಶ ಹೊರಡಿಸಲಾಗಿದೆ.



ನೇಮಕಾತಿ ಬಳಿಕ ಮಾತನಾಡಿದ ವಿ.ನಿತೇಶ್ ಕುಮಾರ್, ಕಾಂಗ್ರೆಸ್ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಆರಂಭಿಸಿ ವಿವಿಧ ಹಂತಗಳಲ್ಲಿ ಪಕ್ಷದ ತತ್ವ-ಸಿದ್ಧಾಂತಗಳ ಆಧಾರದ ಮೇಲೆ ಸೇವೆ ಸಲ್ಲಿಸಿರುವುದಾಗಿ ತಿಳಿಸಿದರು. ಪಕ್ಷದ ಸಂಘಟನೆಯನ್ನು ಬೂತ್ ಮಟ್ಟದಿಂದ ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಾಗುವುದು. ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಅಗತ್ಯವಾದ ಕಾರ್ಯತಂತ್ರ ರೂಪಿಸಿ ಪಕ್ಷವನ್ನು ಸದೃಢಗೊಳಿಸಲು ಶ್ರಮಿಸಲಾಗುವುದು ಎಂದು ಹೇಳಿದರು. ಪಕ್ಷದ ಹಿರಿಯ ಮುಖಂಡರು ಹಾಗೂ ಕಾರ್ಯಕರ್ತರು ನೂತನ ಕಾರ್ಯದರ್ಶಿಯಾಗಿ ನೇಮಕವಾದ ವಿ.ನಿತೇಶ್ ಕುಮಾರ್ ಅವರನ್ನು ಸ್ವಾಗತಿಸಿ, ಅಭಿನಂದನೆ ಸಲ್ಲಿಸಿದರು.

### ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆ



• **ದೊಡ್ಡಬಳ್ಳಾಪುರ:** ಚುನಾವಣಾ ಆಯೋಗದ ನಿಯಮದಂತೆ ಪ್ರತಿ ಹತ್ತು ವರ್ಷಕ್ಕೊಮ್ಮೆ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಸಲಾಗುತ್ತದೆ. ಆದರೆ ಈ ಪ್ರಕ್ರಿಯೆಯನ್ನು ರಾಜಕೀಯ ಉದ್ದೇಶಗಳಿಗೆ ಬಳಸಲಾಗುತ್ತಿದೆ ಎಂದು ಕಾಂಗ್ರೆಸ್ ಮುಖಂಡ ವಿ.ಆರ್. ಸುದರ್ಶನ ಆರೋಪಿಸಿದರು. ನಗರದ ಬೇಸಿಕ್ ಪಾರ್ಕ್‌ನಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಆಯೋಜಿಸಿದ್ದ ಎಸ್ಐಆರ್ (Special Intensive Revision) ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮತದಾನದ ಹಕ್ಕು ಸಂವಿಧಾನಾತ್ಮಕ ಹಕ್ಕಾಗಿದ್ದು, ಪ್ರತಿಯೊಬ್ಬ ಅರ್ಹ ಮತದಾರನ ಹೆಸರೂ ಪಟ್ಟಿಯಲ್ಲಿ ಉಳಿಯುವಂತೆ ನೋಡಿಕೊಳ್ಳುವುದು ಎಲ್ಲರ ಜವಾಬ್ದಾರಿ ಎಂದರು. ಬಿಹಾರ ಸೇರಿದಂತೆ ಕೆಲವು ರಾಜ್ಯಗಳಲ್ಲಿ ನಡೆದ ಪರಿಷ್ಕರಣೆ ಪ್ರಕ್ರಿಯೆ ಬಗ್ಗೆ ಹಲವು ಅನುಮಾನಗಳು ವ್ಯಕ್ತವಾಗಿವೆ. ಆದ್ದರಿಂದ ಬೂತ್ ಮಟ್ಟದ ಅಧಿಕಾರಿಗಳು ಹಾಗೂ ಕಾರ್ಯಕರ್ತರು ಮನೆ ಮನೆಗೆ ತೆರಳಿ ಅರ್ಹ ಮತದಾರರ ವಿವರಗಳನ್ನು ಪರಿಶೀಲಿಸಿ, ಯಾರೂ ಮತದಾನದ ಹಕ್ಕಿನಿಂದ ವಂಚಿತರಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಕರೆ ನೀಡಿದರು. ದೇಶದ ಹಿತ ಹಾಗೂ ಸಂವಿಧಾನದ ರಕ್ಷಣೆಯೇ ಕಾಂಗ್ರೆಸ್‌ನ ಆದ್ಯತೆ ಎಂದು ಹೇಳಿದರು. ಕೆಪಿಸಿಸಿ ಸದಸ್ಯ ಬಿ.ಜಿ. ಹೇಮಂತರಾಜ್ ಮಾತನಾಡಿ, ಅಧಿಕಾರದ ದುರುಪಯೋಗದ ಮೂಲಕ ಮತದಾರರ ಪಟ್ಟಿಯಲ್ಲಿ ಅನಗತ್ಯ ಬದಲಾವಣೆ ಮಾಡುವ ಪ್ರಯತ್ನ ನಡೆಯುತ್ತಿದೆ ಎಂಬ ಆರೋಪ ಮಾಡಿದರು. ತಾಲ್ಲೂಕಿನಲ್ಲಿ ಈಗಾಗಲೇ ಸುಮಾರು 70 ಶೇಕಡಾ ಮ್ಯಾಪಿಂಗ್ ಪೂರ್ಣಗೊಂಡಿದ್ದು, ಅದನ್ನು ಶೇ.100ಕ್ಕೆ ತಲುಪಿಸಲು ಪಕ್ಷದ ಬೂತ್ ಮಟ್ಟದ ಕಾರ್ಯಕರ್ತರು ಶ್ರಮಿಸಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜಾಗೃತ ಕರ್ನಾಟಕ ವೇದಿಕೆಯ ವಿನೋದ್ ಕುಮಾರ್, ಅಬ್ದುಲ್ ಮುನೀರ್, ಕೆಪಿಸಿಸಿ ಉಪಾಧ್ಯಕ್ಷ ಟಿ. ವೆಂಕಟರಮಣಯ್ಯ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಿ. ಚುಂಚೇಗೌಡ, ಟಿಎಪಿಎಂಎಸ್ ಅಧ್ಯಕ್ಷ ಡಿ. ಸಿದ್ದರಾಮಯ್ಯ, ನಿರ್ದೇಶಕ ಆರ್. ಗೋವಿಂದರಾಜ್, ಮಹಿಳಾ ಘಟಕದ ರೇವತಿ ಅನಂತರಾಮ್, ಜಿಲ್ಲಾ ಉಸ್ತುವಾರಿ ಕೃಪಾ ಆಳ್ವ, ತಾಲ್ಲೂಕು ಅಧ್ಯಕ್ಷ ವಿಶ್ವನಾಥರೆಡ್ಡಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್. ಗೌಡ, ಗ್ರಾಮಾಂತರ ಬ್ಲಾಕ್ ಅಧ್ಯಕ್ಷ ಎಂ. ಬೈರೇಗೌಡ, ನಗರ ಬ್ಲಾಕ್ ಅಧ್ಯಕ್ಷ ಕೆ.ಪಿ. ಜಗನ್ನಾಥ್, ಕಸಬಾ ಬ್ಲಾಕ್ ಅಧ್ಯಕ್ಷ ಅಪ್ಪಿ ವೆಂಕಟೇಶ್, ಯುವ ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಶರತ್ ಪಟೇಲ್ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

### ರಾಜಣ್ಣಗೆ ಸಚಿವ ಸ್ಥಾನ ನೀಡಿ

• **ಕೊರಟಗೆರೆ:** ರಾಜಕೀಯದಲ್ಲಿ ಹಾಗೂ ಸಹಕಾರ ಇಲಾಖೆಯಲ್ಲಿ ಅಗಾಧವಾದ ಅನುಭವ ಹೊಂದಿರುವ ಹಾಗೂ ವಾಲ್ಮೀಕಿ ಜನಾಂಗದ ನಾಯಕ, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ, ಸಹಕಾರ ರತ್ನ, ಬಡವರ ಬಂಧು, ರೈತರ ಪಾಲಿನ ದೇವರು, ಎಲ್ಲಾ ಜಾತಿ ಧರ್ಮದ ಜನಾಂಗದ ಆಶಾಕಿರಣವಾಗಿರುವ ಮಾಜಿ ಸಚಿವ ಕೆಎನ್ ರಾಜಣ್ಣನವರಿಗೆ ಸಚಿವ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ, ನ್ಯಾಕೇನಹಳ್ಳಿ ಸಮಿತಿ ಸದಸ್ಯ, ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷ ಕೆ ಟಿ ತಿಮ್ಮರೆಡ್ಡಿ ಕಾಂಗ್ರೆಸ್ ಸರ್ಕಾರಕ್ಕೆ ಆಗ್ರಹಿಸಿದ್ದಾರೆ. ಕೆ ಎನ್ ರಾಜಣ್ಣನವರು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜತೆ ಆಪ್ತರಾಗಿ ನಾಯಕರಾಗಿ ಅಹಿಂದ ನಾಯಕರಾಗಿ ಗುರುತಿಸಿಕೊಂಡಿದ್ದು ಇಂತಹ ನೇರ ದಿಟ್ಟ ರಾಜಕಾರಣಿಗೆ ಸಚಿವ ಸ್ಥಾನ ನೀಡದೆ ಕಡೆಗಣಿಸಿದ್ದು ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಗೆ ದೊಡ್ಡ ಪೆಟ್ಟು ಬೀಳಲಿದೆ ಎಂದರು. ಹಾಗೂ ಸಹಕಾರ ಸಚಿವರಾಗಿದ್ದ ತುಮಕೂರು ಜಿಲ್ಲೆಗೆ ಅಲ್ಲದೆ ರಾಜ್ಯದ ಜನತೆಗೂ ಚಿರಪರಿಚಿತರಾಗಿದ್ದು ಅಂತಹ ವ್ಯಕ್ತಿಗೆ ಸಚಿವ ಸ್ಥಾನ ನೀಡದೆ ಅವಮಾನ ಮಾಡಿದ್ದು ಕ್ಷೇತ್ರದ ಹಾಗೂ ರಾಜ್ಯದ ಜನತೆಗೂ ಅವಮಾನ ಮಾಡಿದಂತಾಗಿದೆ.

---

ಅಲಯನ್ಸ್ ವಿಶ್ವವಿದ್ಯಾಲಯದ ರಿಸರ್ಚ್ ಅ್ಯಂಡ್ ಟೆಕ್ನಾಲಜಿ ಕೌನ್ಸಿಲ್ ಅಧ್ಯಕ್ಷ ಸಾರಸ್ವತ್ ಹೇಳಿಕೆ

# ಸ್ವದೇಶಿ ತಂತ್ರಜ್ಞಾನ ಸಂಶೋಧನೆಗೆ ಉತ್ತೇಜನ

• **ಆನೇಕಲ್:** ಭಾರತವು ಕೇವಲ ತಂತ್ರಜ್ಞಾನದ ಬಳಕೆದಾರ ರಾಷ್ಟ್ರವಾಗಿರದೆ, ಸ್ವದೇಶಿ ತಂತ್ರಜ್ಞಾನಗಳನ್ನು ಅಭಿವೃದ್ಧಿ ಪಡಿಸುವ ಸೃಷ್ಟಿಕರ್ತ ರಾಷ್ಟ್ರವಾಗಿ ರೂಪುಗೊಳ್ಳಬೇಕಿದೆ ಎಂದು ಅಲಯನ್ಸ್ ವಿಶ್ವವಿದ್ಯಾಲಯದ ರಿಸರ್ಚ್ ಅ್ಯಂಡ್ ಟೆಕ್ನಾಲಜಿ ಕೌನ್ಸಿಲ್ ಅಧ್ಯಕ್ಷ ಹಾಗೂ ಪದ್ಮಭೂಷಣ ಪುರಸ್ಕೃತ ಡಾ. ವಿ.ಕೆ. ಸಾರಸ್ವತ್ ಹೇಳಿದರು.

ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಸೋಮವಾರ ಕ್ವಾಂಟಮ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ (ಎಐ) ಹಾಗೂ ಡೀಪ್‌ಟೆಕ್ ಸಂಶೋಧನೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಕಾರ್ಯನಿರ್ವಾಹಕ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಸಂಶೋಧನೆ, ಮೂಲಸೌಕರ್ಯ ಅಭಿವೃದ್ಧಿ, ಪ್ರತಿಭೆಗಳ ಬೆಳವಣಿಗೆ ಹಾಗೂ ಕೈಗಾರಿಕಾ ಸಹಭಾಗಿತ್ವದಲ್ಲಿ ಎಐ ಮಹತ್ವದ ಪಾತ್ರ ವಹಿಸಲಿದೆ ಎಂದು ತಿಳಿಸಿದರು. ಕ್ವಾಂಟಮ್ ಎಐ ಗ್ಲೋಬಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಿಕಾ ಚಾಗಂಟಿ ಮಾತನಾಡಿ, ವಿದ್ಯಾರ್ಥಿಗಳು ಹಾಗೂ ಸಂಶೋಧಕರಲ್ಲಿ ಕುತೂಹಲ ಮತ್ತು ವೈಜ್ಞಾನಿಕ ಚಿಂತನೆ ಬೆಳೆಸುವುದು ಅಗತ್ಯವಾಗಿದೆ. ಕ್ವಾಂಟಮ್ ತಂತ್ರಜ್ಞಾನವು ಕಂಪ್ಯೂಟಿಂಗ್, ಸಂವಹನ, ಆರೋಗ್ಯ, ಹಾರ್ಡ್‌ವೇರ್, ಸಾಫ್ಟ್‌ವೇರ್ ಮತ್ತು ಇಂಜಿನಿಯರಿಂಗ್ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸುತ್ತಿದೆ. ಕ್ವಾಂಟಮ್ ತಂತ್ರಜ್ಞಾನ, ಎಐ ಹಾಗೂ ಡೀಪ್‌ಟೆಕ್ ಕ್ಷೇತ್ರಗಳಲ್ಲಿ ಸಂಶೋಧನೆ, ನಾವೀನ್ಯತೆ, ಕೈಗಾರಿಕಾ ಸಹಭಾಗಿತ್ವ ಮತ್ತು ಅಂತಾರಾಷ್ಟ್ರೀಯ ಅಧ್ಯಯನಕ್ಕೆ ಉತ್ತೇಜನ ನೀಡುವುದು ಈ ಉಪಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದು ಹೇಳಿದರು.




ವಿಶ್ವವಿದ್ಯಾಲಯದ ಸಂಶೋಧನಾ ಉಪಕ್ರಮವಾಗಿದ್ದು, ಕ್ವಾಂಟಮ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಎಐ ಮತ್ತು ಡೀಪ್‌ಟೆಕ್ ಕ್ಷೇತ್ರಗಳಲ್ಲಿ ಉನ್ನತ ಮಟ್ಟದ ಸಂಶೋಧನೆ ಹಾಗೂ ನಾವೀನ್ಯತೆಯನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ.
■ ಗೋಪಿಕಾ ಚಾಗಂಟಿ, ಕ್ವಾಂಟಮ್ ಎಐ ಗ್ಲೋಬಲ್ ಸಿಇಒ

- ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ವಿಶ್ವಮಟ್ಟದ ಸಂಶೋಧನಾ ಅವಕಾಶಗಳ ಸೃಷ್ಟಿ
- ಕೈಗಾರಿಕೆ ಶೈಕ್ಷಣಿಕ ಸಂಸ್ಥೆಗಳ ಸಹಭಾಗಿತ್ವ ವೃದ್ಧಿ
- ಅಂತರರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳೊಂದಿಗೆ ಜಂಟಿ ಅಧ್ಯಯನ
- ಕೈಗಾರಿಕೆಯ ವಾಸ್ತವ ಸಮಸ್ಯೆಗಳಿಗೆ ತಂತ್ರಜ್ಞಾನ ಆಧಾರಿತ ಪರಿಹಾರ

ಅಲಯನ್ಸ್ ವಿಶ್ವವಿದ್ಯಾಲಯದ ಕುಲಪತಿ ಅಭಯ್ ಜೆ. ಚೆಬ್ಬಿ ಮಾತನಾಡಿ, ಎಐ ಮೂಲಕ ಅಕಾಡೆಮಿಕ್ ವಲಯ ಮತ್ತು ಕೈಗಾರಿಕೆಗಳ ನಡುವಿನ ಸಹಕಾರ ಹೆಚ್ಚಲಿದ್ದು, ವಾಸ್ತವ ಜಗತ್ತಿನ ಸವಾಲುಗಳಿಗೆ ಕ್ವಾಂಟಮ್ ಆಧಾರಿತ ಪರಿಹಾರಗಳನ್ನು ಕಂಡುಹಿಡಿಯಲು ಇದು ನೆರವಾಗಲಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಉಪಕುಲಪತಿ ಡಾ. ಬಿ. ಪ್ರೀತ್ನಿ ಶಾನ್, ಪ್ರಿಯದರ್ಶಿನಿ, ಮನೀಶ್ ರೂಸ್ತಾರ್, ಸುರೇಖಾ ಶೆಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ಕೈಗಾರಿಕೆಗಳ ನಡುವೆ ಸಹಭಾಗಿತ್ವ

ಡೀಪ್‌ಟೆಕ್ ಎಂದರೆ ವಿಜ್ಞಾನ ಮತ್ತು ಆತ್ಯಾಧುನಿಕ ತಂತ್ರಜ್ಞಾನ ಆಧಾರಿತ ಸಂಶೋಧನೆ ಹಾಗೂ ನಾವೀನ್ಯತೆ. ಕೃತಕ ಬುದ್ಧಿಮತ್ತೆ (ಎಐ), ಕ್ವಾಂಟಮ್ ಕಂಪ್ಯೂಟಿಂಗ್, ರೋಬೋಟಿಕ್ಸ್, ಸೆಮಿಕಂಡಕ್ಟರ್, ಜೈವಿಕ ತಂತ್ರಜ್ಞಾನ, ಸೈಬರ್ ಭದ್ರತೆ ಮತ್ತು ಸುಧಾರಿತ ಎಂಜಿನಿಯರಿಂಗ್ ಕ್ಷೇತ್ರಗಳು ಡೀಪ್‌ಟೆಕ್ ವ್ಯಾಪ್ತಿಗೆ ಬರುತ್ತವೆ. ಅಲಯನ್ಸ್ ವಿಶ್ವವಿದ್ಯಾಲಯದ ಎಐ ಉಪಕ್ರಮದ ಮೂಲಕ ವಿದ್ಯಾರ್ಥಿಗಳು, ಸಂಶೋಧಕರು ಮತ್ತು ಕೈಗಾರಿಕೆಗಳ ನಡುವೆ ಸಹಭಾಗಿತ್ವ ಹೆಚ್ಚಿಸಿ, ವಿಶ್ವಮಟ್ಟದ ಸಂಶೋಧನೆಗೆ ಉತ್ತೇಜನ ನೀಡುವ ಗುರಿ ಹೊಂದಲಾಗಿದೆ. ಇದರ ಮೂಲಕ ನವೀನ ತಂತ್ರಜ್ಞಾನಗಳ ಅಭಿವೃದ್ಧಿ, ಸ್ಟಾರ್ಟ್‌ಅಪ್‌ಗಳಿಗೆ ಪ್ರೋತ್ಸಾಹ, ಉದ್ಯೋಗಾವಕಾಶಗಳ ವೃದ್ಧಿ ಹಾಗೂ ಸಮಾಜದ ಸಂಕೀರ್ಣ ಸಮಸ್ಯೆಗಳಿಗೆ ತಂತ್ರಜ್ಞಾನ ಆಧಾರಿತ ಪರಿಹಾರಗಳನ್ನು ರೂಪಿಸುವತ್ತ ಗಮನ ಹರಿಸಲಾಗುತ್ತಿದೆ ಎಂದು ಅಲಯನ್ಸ್ ವಿಶ್ವವಿದ್ಯಾಲಯದ ಕುಲಪತಿ ಅಭಯ್ ಜೆ. ಚೆಬ್ಬಿ ತಿಳಿಸಿದರು.

---

## ಆಧ್ಯಾತ್ಮಿಕ ಸೇವೆಯಿಂದ ನೆಮ್ಮದಿ



• **ತಾವರೆಕೆರೆ:** ಶಿವನ ಅನುಗ್ರಹ ಪಡೆಯಲು, ಆಧ್ಯಾತ್ಮಿಕ ಜ್ಞಾನವನ್ನು ವೃದ್ಧಿಸಿಕೊಳ್ಳಲು ಹಾಗೂ ಜೀವನದ ಕಷ್ಟಗಳನ್ನು ದೂರ ಮಾಡಿಕೊಳ್ಳಲು ಈ ವಿಶೇಷ ಪೂಜೆಯನ್ನು ಆಚರಿಸಲಾಗುತ್ತದೆ ಎಂದು ಅರ್ಚಕ ಎನ್.ವಿ. ನಂದೀಶಕುಮಾರ್ ಹೇಳಿದರು.

ಹೊಸಕೋಟೆ ತಾಲೂಕಿನ ನಂದಗುಡಿ ಗ್ರಾಮದ ಶ್ರೀ ಮಲ್ಲಮ್ಮ ದೇವಾಲಯದಲ್ಲಿ ಲೋಕಕಲ್ಯಾಣಾರ್ಥವಾಗಿ ಆಯೋಜಿಸಿದ್ದ ಆಧಿಕ ಮಾಸದ ಅಮಾವಾಸ್ಯೆ ಅಂಗವಾಗಿ ನಡೆದ ಶಿವಸ್ವರೂಪ ಪೂಜಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶಿವನು ಹಿಂದೂ ಧರ್ಮದಲ್ಲಿ ಲಯಕಾರಕ ಹಾಗೂ ಪರಮಾತ್ಮನ ಸ್ವರೂಪ ಎಂದು ಪರಿಗಣಿಸಲಾಗುತ್ತದೆ. 'ಸ್ವ' ಎಂದರೆ ಏಳು ಎಂಬ ಅರ್ಥ. ಆದ್ದರಿಂದ ಶಿವಸ್ವರೂಪವು ಏಳು ದಿನಗಳ ಕಾಲ ನಿರಂತರವಾಗಿ ನಡೆಯುವ ಧಾರ್ಮಿಕ ಆಚರಣೆಯಾಗಿದೆ ಎಂದು ವಿವರಿಸಿದರು. ಈ ಪೂಜೆಯಲ್ಲಿ ಶಿವಪುರಾಣ ಪಠಣ, ನಿರಂತರ ಶಿವನಾಮ ಜಪ, ರುದ್ರಾಭಿಷೇಕ, ಪಂಚಾಮೃತಾಭಿಷೇಕ ಹಾಗೂ 'ಓಂ ನಮಃ ಶಿವಾಯ' ಮತ್ತು ಮಹಾಮೃತ್ಯುಂಜಯ ಮಂತ್ರಗಳ ಪಠಣ ಪ್ರಮುಖವಾಗಿರುತ್ತವೆ. ಇವು ಭಕ್ತರಲ್ಲಿ ಏಕಾಗ್ರತೆ, ಮಾನಸಿಕ ಶಾಂತಿ ಮತ್ತು ಭಕ್ತಿಭಾವವನ್ನು ವೃದ್ಧಿಸುತ್ತವೆ ಎಂದರು.

ಶ್ರದ್ಧಾ-ಭಕ್ತಿಯಿಂದ ಶಿವಸ್ವರೂಪ ಪೂಜೆ ನೆರವೇರಿಸುವುದರಿಂದ ಪಾಪಕ್ಷಯ, ಆಧ್ಯಾತ್ಮಿಕ ಪ್ರಗತಿ ಹಾಗೂ ಮೋಕ್ಷಪ್ರಾಪ್ತಿಗೆ ದಾರಿಯಾಗುತ್ತದೆ ಎಂಬ ನಂಬಿಕೆ ಇದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಧಾನ ಅರ್ಚಕರಾದ ವಿಶ್ವನಾಥ ಪೂಜಾರಿ, ಶ್ರೀಕಂಠಪ್ಪ, ಮಂಜುನಾಥ್, ಗಿರೀಶಪ್ಪ, ಶೀಲಾ, ಗಾಯತ್ರಮ್ಮ, ಸುಮಂಗಲದೇವಿ, ನಿರ್ಮಲಾ, ನಂಜಮ್ಮ, ವೆಂಕಟೇಶ್, ಅನಿತಾ ಸೇರಿದಂತೆ ನೂರಾರು ಭಕ್ತರು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಬಳಿಕ ಭಕ್ತರಿಗೆ ಮಹಾಮಂಗಳಾರತಿ, ತೀರ್ಥಪ್ರಸಾದ ಹಾಗೂ ಅನ್ನಸಂತರ್ಪಣೆ ವಿತರಿಸಲಾಯಿತು.

## ನೀರಿನ ಸಮಸ್ಯೆಗೆ ಕೊಳವೆಬಾವಿ



• **ತಾವರೆಕೆರೆ:** ನೂರುಲ್ಲಾರವರ ಈ ಸಮಾಜಮುಖಿ ಕಾರ್ಯದಿಂದ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹುತೇಕ ನಿವಾರಣೆಯಾಗಿದ್ದು, ಗ್ರಾಮಸ್ಥರು ಹಾಗೂ ಜನಪ್ರತಿನಿಧಿಗಳು ಅವರ ಸೇವಾಭಾವವನ್ನು ಶ್ಲಾಘಿಸಿದ್ದಾರೆ. ಗ್ರಾಮಸ್ಥರ ಸಂಕಷ್ಟಕ್ಕೆ ಸ್ಪಂದಿಸಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೈಗೊಂಡ ಈ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಪ್ರತಿಯೊಬ್ಬ ನಾಗರಿಕರಿಗೂ ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಸ್ಥಳೀಯ ಆಡಳಿತದ ಕರ್ತವ್ಯವಾಗಿದೆ. ಆದರೆ ತಾಲ್ಲೂಕಿನ ಮುಗಬಾಳ ಗ್ರಾಮ ಪಂಚಾಯತಿ ವ್ಯಾಪ್ತಿಯ ನಿಡಗಟ್ಟ ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಎದುರಾಗಿದ್ದು, ಗ್ರಾಮಸ್ಥರು ಸಂಕಷ್ಟ ಅನುಭವಿಸುತ್ತಿದ್ದರು. ಸುಮಾರು 1,400 ಜನಸಂಖ್ಯೆ ಹೊಂದಿರುವ ಈ ಗ್ರಾಮದಲ್ಲಿ ಹಾಸಿಕರ ಅನುದಾನದ ನಾಲ್ಕು ಕೊಳವೆಬಾವಿಗಳನ್ನು ಕೊರೆಸಲಾಗಿದ್ದರೂ ನೀರು ಸಿಗದೆ ಅವು ವಿಫಲವಾಗಿದ್ದವು. ಸದ್ಯ ಪಂಚಾಯತಿಯ ಒಂದು ಹಾಗೂ ಖಾಸಗಿಯ ಎರಡು ಕೊಳವೆಬಾವಿಗಳ ಮೂಲಕ ನೀರು ಪೂರೈಸಲಾಗುತ್ತಿದ್ದರೂ ಬೇಡಿಕೆಗೆ ತಕ್ಕಷ್ಟು ನೀರು ಲಭ್ಯವಾಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಮುಗಬಾಳ ಗ್ರಾಮ ಪಂಚಾಯತಿಯ ಮಾಜಿ ಉಪಾಧ್ಯಕ್ಷ ಹಾಗೂ ಬೋರ್‌ವೆಲ್ ಮಾಲೀಕ ನೂರುಲ್ಲಾ ಅವರು ತಮ್ಮ ಸ್ವಂತ ವೆಚ್ಚದಲ್ಲಿ ಒಂದು ಕೊಳವೆಬಾವಿಯನ್ನು ಕೊರೆಸಿ, ಗ್ರಾಮಕ್ಕೆ ಉಚಿತವಾಗಿ ನೀರು ಒದಗಿಸುವ ಮೂಲಕ ಮಾದರಿಯಾಗಿದ್ದಾರೆ.

### ನೀರಿನ ದಾಹ ನೀಗಿಸಿದ ಸಮಾಜ ಸೇವಕ

ನಿಡಗಟ್ಟ ಗ್ರಾಮದಲ್ಲಿ ಉಂಟಾಗಿದ್ದ ಕುಡಿಯುವ ನೀರಿನ ತೀವ್ರ ಸಮಸ್ಯೆಯನ್ನು ಮನಗಂಡ ಮಾಜಿ ಗ್ರಾಮ ಪಂಚಾಯತಿ ಉಪಾಧ್ಯಕ್ಷ ನೂರುಲ್ಲಾ ಅವರು ತಮ್ಮ ಸ್ವಂತ ಹಣದಲ್ಲಿ ಕೊಳವೆಬಾವಿ ಕೊರೆಸಿ ಉಚಿತವಾಗಿ ನೀರು ಒದಗಿಸಿದ್ದಾರೆ. ಅವರ ಈ ಸೇವಾ ಮನೋಭಾವದಿಂದ ಗ್ರಾಮಸ್ಥರ ನೀರಿನ ಸಮಸ್ಯೆ ನಿವಾರಣೆಯಾಗಿದ್ದು, ಎಲ್ಲೆಡೆಯಿಂದ ಪ್ರಶಂಸೆ ವ್ಯಕ್ತವಾಗಿದೆ.

## ದಾಸಿಮಯ್ಯ ಹೆಬ್ಬಾಗಿಲು ಲೋಕಾರ್ಪಣೆ

• **ದೊಡ್ಡಬಳ್ಳಾಪುರ:** ನಗರದ 9 ನೇ ವಾರ್ಡ್ ಚೈತನ್ಯ ನಗರದ ಮುಖ್ಯ ದ್ವಾರಕ್ಕೆ ಶ್ರೀ ದೇವರ ದಾಸಿಮಯ್ಯ ಹೆಬ್ಬಾಗಿಲು ಎಂದು ನಾಮಕರಣ ಮಾಡಿ ನೂತನ ಸ್ವಾಗತ ಕಮಾನು ಉದ್ಘಾಟನೆ ಮಾಡಲಾಯಿತು.

ಸುಮಾರು 4.80 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಿರುವ ನೂತನ ಸ್ವಾಗತ ಕಮಾನನ್ನು ಶಾಸಕ ಧೀರಜ್ ಮುನಿರಾಜು, ಸ್ಥಳೀಯ ನಗರಸಭಾ ಸದಸ್ಯರ ಜೊತೆಗೂಡಿ ಉದ್ಘಾಟಿಸಿದರು.



ಈ ವೇಳೆ ಮಾತನಾಡಿದ ಅವರು ತಾಲ್ಲೂಕಿನಲ್ಲಿ ನೇಕಾರಿಕೆ ಪ್ರಮುಖ ಉದ್ಯಮವಾಗಿದ್ದು, ಈ ಹಿಂದೆ ನಗರಸಭಾ ಅಧ್ಯಕ್ಷರಾಗಿದ್ದ ಸುಧಾರಾಣಿ ಲಕ್ಷ್ಮೀನಾರಾಯಣ ಅವರ ಸಮಯದಲ್ಲಿ ಈ ದೇವರ ದಾಸಿಮಯ್ಯ ಹೆಬ್ಬಾಗಿಲು ನಿರ್ಮಾಣದ ಕಾಮಗಾರಿ ಅನುಮೋದನೆ ಪಡೆದಿದ್ದು ಈಗ ಕಾಮಗಾರಿ ಪೂರ್ಣಗೊಂಡಿರುವ ಹಿನ್ನೆಲೆ ಸ್ಥಳೀಯ ಪ್ರಮುಖರ ಸಹಯೋಗದೊಂದಿಗೆ ಇಂದು ಈ ಸ್ವಾಗತಕಮಾನನ್ನು ಉದ್ಘಾಟಿಸಲಾಗಿದೆ ಎಂದರು. ತಾಲೂಕಿನಲ್ಲಿ ನೇಕಾರಿಕೆ ನಂಬಿ ಜೀವನ ಸಾಗಿಸುತ್ತಿರುವ ಎಲ್ಲಾ ನೇಕಾರರಿಗೆ ಈ ಸ್ವಾಗತ ಕಮಾನು ಅರ್ಪಣೆ ಮಾಡುವ ಮೂಲಕ ಗೌರವ ಸಲ್ಲಿಸಿದ್ದೇವೆ. ಅತಿ ಹೆಚ್ಚು ನೇಕಾರರನ್ನು ಹೊಂದಿರುವ ನಗರದ ಚೈತನ್ಯ ನಗರದ ಹೆಬ್ಬಾಗಿಲಿಗೆ ದೇವರ ದಾಸಿಮಯ್ಯ ಹೆಸರಿಟ್ಟಿರುವುದು ಸಂತಸ ತಂದಿದೆ ಎಂದರು. ಸ್ಥಳೀಯ ಮುಖಂಡರಾದ ಲಕ್ಷ್ಮೀನಾರಾಯಣ ಮಾತನಾಡಿ, 11 ನೇ ಶತಮಾನದ ನಾಡಿನ ವಚನಕಾರರಲ್ಲಿ ದೇವರ ದಾಸಿಮಯ್ಯನವರು ಪ್ರಮುಖರು ಹಾಗೂ ಮಹಾಶಿವಶರಣರಲ್ಲಿ ಇವರೊಬ್ಬರು ಮತ್ತು ಶರಣ ಸಂಪ್ರದಾಯ ದಲ್ಲಿ ಮೊದಲಿಗರು ಹಾಗು ಆದ್ಯ ವಚನಕಾರ ಕೂಡಾ. ಜನಪದ ಜಗದ್ಗುರು ಎಂಬ ಬಿರುದು ಇವರಿಗೆ ಇದೆ. ಇಂತಹ ಐತಿಹಾಸಿಕ ಪುರುಷರ ಹೆಸರನ್ನು ನಮ್ಮ ವಾರ್ಡಿನ ಹೆಬ್ಬಾಗಿಲಿಗೆ ನಾಮಕರಣ ಮಾಡುತ್ತಿರುವುದು ಅತ್ಯಂತ ಸಂತೋಷದ ವಿಷಯವಾಗಿದೆ ಎಂದರು. ತಾಲೂಕಿನಲ್ಲಿ ಲಕ್ಷಾಂತರ ಕಾರ್ಮಿಕರು ನೇಕಾರಿಕೆ ನಂಬಿ ಜೀವನ ಸಾಗಿಸುತ್ತಿದ್ದಾರೆ ಅವರೆಲ್ಲರಿಗೂ ಗೌರವ ಸಮರ್ಪಣೆ ಈ ಮೂಲಕ ಮಾಡಿದ್ದೇವೆ. ತಾಲ್ಲೂಕಿನಲ್ಲಿ ಇಂದು ಮೊದಲ ದೇವರ ದಾಸಿಮಯ್ಯ ಹೆಬ್ಬಾಗಿಲು ಇಂತಹ ಐತಿಹಾಸಿಕ ನಿರ್ಣಯಕ್ಕೆ ಸಹಕರಿಸಿದ ತಾಲೂಕಿನ ಶಾಸಕರು ನಗರಸಭೆ ಸದಸ್ಯರು ಚೈತನ್ಯ ನಗರದ ಮುಖಂಡರು ಹಾಗೂ ಸಾರ್ವಜನಿಕರಿಗೆ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇವೆ ಎಂದರು.

ನಗರಸಭಾ ಅಧ್ಯಕ್ಷೆ ಸುಮಿತ್ರ ಆನಂದ್, ನಗರಸಭೆ ಪೌರಾಯುಕ್ತ ಕಾರ್ತಿಕೇಶ್ವರ್, ಉಪಾಧ್ಯಕ್ಷ ವೆಂಕಟೇಶ್ ಬಂತಿ, ಎಲ್ಲಾ ವಾರ್ಡಿನ ಸದಸ್ಯರು,ದೇವಾಂಗ ಸಮಾಜದ ಮುಖಂಡರು ಮತ್ತು ಸ್ಥಳೀಯ ಪ್ರಮುಖರು, ಸಾರ್ವಜನಿಕರು ಉಪಸ್ಥಿತರಿದ್ದರು.

## ರೋಟರಿ ಸಂಸ್ಥೆಯಿಂದ ಸಹಕಾರ

• **ಕೊರಟಗೆರೆ:** ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ರೋಟರಿ ಸಂಸ್ಥೆ ಮಹತ್ವದ ಹೆಜ್ಜೆ ಇಟ್ಟಿದೆ. ಆರೋಗ್ಯ, ಶಿಕ್ಷಣ, ಮಹಿಳೆ ಬಗ್ಗೆ ರೋಟರಿ ಸಂಸ್ಥೆ ವಿಶೇಷ ಕಾಳಜಿ ವಹಿಸಿದ್ದು, ಸಮಾಜಮುಖಿಯಲ್ಲಿ ರೋಟರಿ ಸಂಸ್ಥೆ ಮಾದರಿಯಾಗಿದೆ ಎಂದು ತಹಸೀಲ್ದಾರ್ ಮಂಜುನಾಥ್.ಕೆ ಶ್ಲಾಘಿಸಿದರು.



ಕೊರಟಗೆರೆ ಪುರಸಭೆ ಕಾರ್ಯಾಲಯದ ಮುಂಭಾಗದಲ್ಲಿ ರೋಟರಿ ಮಹಿಳಾ ಸಬಲೀಕರಣ ಯೋಜನೆಯಡಿ ರೋಟರಿ ಕ್ಲಬ್ ಕೊರಟಗೆರೆ, ರೋಟರಿ ಮಹಾಲಕ್ಷ್ಮೀ ಬೆಂಗಳೂರು ಹಾಗೂ ರೋಟರಿ ಬೆಂಗಳೂರು ಉತ್ತರ ಇವರ ಸಹಯೋಗದಲ್ಲಿ ಆಯೋಜಿಸಿದ್ದ ಉಚಿತ ಆಟೋರಿಕ್ಷಾ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ತಾಲೂಕಿನ ದೇವರಹಳ್ಳಿ ಬೆಟ್ಟದಲ್ಲಿ 10 ಸಾವಿರ ಸಸಿ ನೆಡುವ ಕಾರ್ಯಕ್ರಮಕ್ಕೆ ಈ ಹಿಂದೆ ಉಪಮುಖ್ಯಮಂತ್ರಿ ಡಾ.ಜಿ ಪರಮೇಶ್ವರ ಚಾಲನೆ ನೀಡಿ ಯಶಸ್ವಿಗೊಳಿಸಿದರು. ಪರಿಸರ ಉಳಿವಿಗೆ ಸಸಿ ನೆಡುವಕಾರ್ಯಕ್ರಮಕ್ಕೆ ತಾಲೂಕು ಆಡಳಿತ ಜೊತೆ ಕೈ ಜೋಡಿಸುವಂತೆ ರೋಟರಿ ಸಂಸ್ಥೆ ಮುಖ್ಯಸ್ಥರಿಗೆ ತಿಳಿಸಿದರು.

ರೋಟರಿ ಜಿಲ್ಲಾ ಕಾರ್ಯದರ್ಶಿ ಉಮೇಶ್ ಮಾತನಾಡಿ, ರೋಟರಿ ಸಂಸ್ಥೆ ಪರಿಸರಕ್ಕೆ, ಶಿಕ್ಷಣಕ್ಕೆ, ಆರೋಗ್ಯ ವಿಭಾಗಕ್ಕೆ ಹೆಚ್ಚಿನ ಒತ್ತು ನೀಡಿದೆ. ಭಾರತ 135ಕೋಟಿ ಜನಸಂಖ್ಯೆ ಹೊಂದಿದೆ, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಲು ರೋಟರಿ ಸಂಸ್ಥೆ ಪ್ರಮುಖಕಾರಣವಾಗಿದೆ ಎಂದು ಜಿಲ್ಲಾ ರೋಟರಿ ಉಮೇಶ್ ತಿಳಿಸಿದರು.

ರೊಟೇರಿಯನ್ ನಿರ್ದೇಶಕರಾದ ಶಿವ ಕುಮಾರ್ ಮಾತನಾಡಿ, ರೋಟರಿಕ್ಲಬ್‌ ಯಿಂದ ಈಗಾಗಲೇ 6 ಆಟೋರಿಕ್ಷಾ ವಿತರಣೆ ಮಾಡಲಾಗಿದೆ. 8 ವರ್ಷಗಳಲ್ಲಿ 12 ಸಾವಿರ ಜನರಿಗೆ ಹೃದಯ ಶಸ್ತ್ರಚಿಕಿತ್ಸೆ ಮಾಡಿದ್ದು, ಜೂ.28ರಂದು ಪೋಷಕರು ಕಡ್ಡಾಯವಾಗಿ 5ವರ್ಷದ ಮಕ್ಕಳಿಗೆ ಕಡ್ಡಾಯವಾಗಿ ಪಲ್ಸ್ ಪೋಲಿಯೋ ಹಾಕಿಸುವಂತೆ ಕಿವಿಮಾತು ಹೇಳಿದರು.

ಈ ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ಉಮೇಶ್ ಕೆ.ಎಸ್, ರೋಟರಿಕ್ಲಬ್ ಅಧ್ಯಕ್ಷ ಮಂಜುನಾಥ್,ರೋಟರಿ ಸಿದ್ದರಾಜು, ಅಧ್ಯಕ್ಷ ಬಾಲಾವರ್ಧನ್, ಜಂಟಿ ಕಾರ್ಯದರ್ಶಿ ಚೇತನ್ ದಾಸರಹಳ್ಳಿ, ಕಾರ್ಯದರ್ಶಿ ನರಸಿಂಹಮೂರ್ತಿ ಇದ್ದರು.

---

ಶಿಕ್ಷಕರ ಸಂಘದ ತಾಲೂಕು ಮಾಜಿ ಅಧ್ಯಕ್ಷ ಮುನಿಸ್ವಾಮಯ್ಯ ಹೇಳಿಕೆ

# ಪ್ರಾಮಾಣಿಕ ಕರ್ತವ್ಯವೇ ಜೀವನದ ತೃಪ್ತಿ

• **ತಾವರೆಕೆರೆ:** ಯಾವುದೇ ಹುದ್ದೆಯಲ್ಲಿದ್ದರೂ ತಾವು ಮಾಡುವ ಕೆಲಸ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯುವಂತಿರಬೇಕು. ಕರ್ತವ್ಯವನ್ನು ಪ್ರಾಮಾಣಿಕವಾಗಿ ಹಾಗೂ ನಿಷ್ಠೆಯಿಂದ ನಿರ್ವಹಿಸಿದಾಗ ಮಾತ್ರ ಜೀವನದಲ್ಲಿ ನಿಜವಾದ ತೃಪ್ತಿ ದೊರೆಯುತ್ತದೆ ಎಂದು ರಾಜ್ಯ ಪ್ರಾಥಮಿಕ ಶಿಕ್ಷಕರ ಸಂಘದ ತಾಲೂಕು ಮಾಜಿ ಅಧ್ಯಕ್ಷ ಎಂ. ಮುನಿಸ್ವಾಮಯ್ಯ ಹೇಳಿದರು.

ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿಯ ಚೊಕ್ಕಸಂದ್ರ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕರಾಗಿ 29 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಚಿನ್ನರಾಯಪ್ಪ ಅವರಿಗೆ ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು. ಸಹಕಾರ ಕ್ಷೇತ್ರದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸುವುದು, ವರ್ಗಾವಣೆ ಹಾಗೂ ನಿವೃತ್ತಿ ಜೀವನದ ಸಹಜ ಪ್ರಕ್ರಿಯೆಗಳಾಗಿದ್ದು, ಅವುಗಳನ್ನು ಸಹಜವಾಗಿ ಸ್ವೀಕರಿಸಬೇಕು. ಆದರೆ ಯಾವ ಹುದ್ದೆಯಲ್ಲಿದ್ದರೂ ತಮ್ಮ ಸೇವೆಯ ಮೂಲಕ ಉತ್ತಮ ಹೆಜ್ಜೆಗುರುತು ಮೂಡಿಸಬೇಕು ಎಂದು ಹೇಳಿದರು. ಕಳೆದ 29 ವರ್ಷಗಳ ಸೇವಾ ಅವಧಿಯಲ್ಲಿ ಚಿನ್ನರಾಯಪ್ಪ ಅವರು ಸಂಘದ ಅಭಿವೃದ್ಧಿಗೆ ಶ್ರಮಿಸಿ, ಸದಸ್ಯರೊಂದಿಗೆ ಉತ್ತಮ ಬಾಂಧವ್ಯ ಕಾಯ್ದುಕೊಂಡು ಮಾದರಿಯಾಗಿದ್ದಾರೆ. ಮುಂದಿನ ದಿನಗಳಲ್ಲಿಯೂ ತಮ್ಮ ಅನುಭವ ಮತ್ತು ಸಲಹೆಗಳ ಮೂಲಕ ಸಂಘದ ಅಭಿವೃದ್ಧಿಗೆ ಸಹಕಾರ ನೀಡಲಿದ್ದು, ಅವರ ನಿವೃತ್ತ ಜೀವನ ಸುಖ, ಶಾಂತಿ ಹಾಗೂ ನೆಮ್ಮದಿಯಿಂದ ಕೂಡಿರಲಿ ಎಂದು ಹಾರೈಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಪಿ. ರಾಜಣ್ಣ, ಗೌರವಾಧ್ಯಕ್ಷ ಸುಬ್ಬರಾಯಪ್ಪ, ಮಂಜುನಾಥ್, ಚಿಕ್ಕಕಣಾಳ ಉಪಸ್ಥಿತರಿದ್ದರು.



### 29 ವರ್ಷಗಳ ಸೇವೆಗೆ ಆತ್ಮೀಯ ಬೀಳ್ಕೊಡುಗೆ

ಚೊಕ್ಕಸಂದ್ರ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ 29 ವರ್ಷಗಳ ಕಾಲ ಮುಖ್ಯ ಕಾರ್ಯನಿರ್ವಾಹಕರಾಗಿ ಸೇವೆ ಸಲ್ಲಿಸಿದ ಚಿನ್ನರಾಯಪ್ಪ ಅವರಿಗೆ ಸಂಘದ ಸದಸ್ಯರುಗಳು, ರೈತರು ಹಾಗೂ ಗ್ರಾಮಸ್ಥರು ಆತ್ಮೀಯವಾಗಿ ಬೀಳ್ಕೊಟ್ಟರು. ಶಾಲು, ಫಲ-ಪುಷ್ಪ, ಸ್ಮರಣಿಕೆ ನೀಡಿ ಗೌರವಿಸಿ ಕಾರ್ಯಕ್ರಮದಲ್ಲಿ ಅವರ ಸೇವೆಯನ್ನು ಸ್ಮರಿಸಿ ಅಭಿನಂದಿಸಲಾಯಿತು.

ಪೊಲೀಸ್ ಅಧಿಕಾರಿಗಳಿಗೆ ಶಾಸಕ ಎನ್. ಶ್ರೀನಿವಾಸ್ ಸೂಚನೆ

# ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಿ

• **ನೆಲಮಂಗಲ:** ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮವಾಗಿ ನಡೆಯುತ್ತಿರುವ ಮದ್ಯ ಮಾರಾಟವನ್ನು ತಕ್ಷಣವೇ ಸ್ಥಗಿತಗೊಳಿಸುವಂತೆ ಪೊಲೀಸ್ ಹಾಗೂ ಸಂಬಂಧಿತ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಶಾಸಕ ಎನ್. ಶ್ರೀನಿವಾಸ್ ಹೇಳಿದರು.

ತಾಲೂಕಿನ ಯಂಟಗಾನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಆಯೋಜಿಸಿದ್ದ ರಂಗೋಲಿ ಸ್ಪರ್ಧೆ ಹಾಗೂ ಮಹಿಳಾ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಹಿಳೆಯರ ಬೇಡಿಕೆ ಮತ್ತು ಸಲಹೆಗಳ ಆಧಾರದ ಮೇಲೆ ಗ್ರಾಮಗಳ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲಾಗುತ್ತಿದೆ ಎಂದರು.

ಗ್ರಾಮೀಣ ಪ್ರದೇಶಗಳ ಮಹಿಳೆಯರು ಹಾಗೂ ಚಿಲ್ಲರೆ ಅಂಗಡಿಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿರುವ ಬಗ್ಗೆ ಮಹಿಳೆಯರು ದೂರು ನೀಡಿದ್ದು, ಈ ಬಗ್ಗೆ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು. ಗ್ರಾಮಸ್ಥರ ಸಮಸ್ಯೆಗಳನ್ನು ಸ್ವಲ್ಪವೇ ಆಲಿಸಿ, ಸಂಬಂಧಿಸಿದ ಅಧಿಕಾರಿಗಳಿಗೆ ತಕ್ಷಣ ಪರಿಹಾರಕ್ಕೆ ನಿರ್ದೇಶನ ನೀಡಲಾಗಿದೆ ಎಂದರು.

ಕಳೆದ ಮೂರು ವರ್ಷಗಳಲ್ಲಿ ಅನೇಕ ಗ್ರಾಮಗಳಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇನ್ನೂ ಎರಡು ವರ್ಷಗಳ ಅವಧಿಯಲ್ಲಿ ಶಿಕ್ಷಣ, ಆರೋಗ್ಯ ಹಾಗೂ ಮೂಲಸೌಕರ್ಯ ಸಂಬಂಧಿತ ಕಾರ್ಯಗಳನ್ನು ಮುಂದುವರಿಸುವುದಾಗಿ ಭರವಸೆ ನೀಡಿದರು. ದೊಡ್ಡಕರೇನಹಳ್ಳಿ ಗ್ರಾಮದಲ್ಲಿ ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು, ಹೆಚ್ಚುವರಿಯಾಗಿ 50 ಲಕ್ಷ ಅನುದಾನ ಮಂಜೂರಾಗಿದೆ. ಭೂಸಂದ್ರ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಕಾಲೋನಿಯ ರಸ್ತೆ ಹಾಗೂ ಚರಂಡಿ ಅಭಿವೃದ್ಧಿಗೆ ಅನುದಾನ ನೀಡಲಾಗಿದೆ. ಚಿಕ್ಕಮಾರನಹಳ್ಳಿ ಹಾಗೂ ಚಿಕ್ಕಬೆಟ್ಟದಹಳ್ಳಿ ಸೇರಿದಂತೆ ವಿವಿಧ ಗ್ರಾಮಗಳ ಹಕ್ಕುಪತ್ರ ಸಮಸ್ಯೆಗಳನ್ನು ಶೀಘ್ರವೇ ಪರಿಹರಿಸಲಾಗುವುದು



### ಶಾಸಕರ ಸ್ಪಂದನೆ

ಕುಮುದ್ವತಿ ಸಂಸ್ಥೆಯ ಮಾಲೀಕ ಚಿಕ್ಕಮಾರನಹಳ್ಳಿ ಮಾತನಾಡಿ, ಶಾಸಕರು ಹಾಗೂ ಅಧಿಕಾರಿಗಳು ಗ್ರಾಮಸ್ಥರ ಸಮಸ್ಯೆಗಳನ್ನು ನೇರವಾಗಿ ಆಲಿಸಿ ಪರಿಹಾರಕ್ಕೆ ಮುಂದಾಗಿರುವುದು ಸಂತಸದ ಸಂಗತಿ. ದೊಡ್ಡಕರೇನಹಳ್ಳಿ ರಸ್ತೆ ಅಭಿವೃದ್ಧಿಗೆ ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ನಡೆದಿದ್ದು, ಹೆಚ್ಚುವರಿಯಾಗಿ 50 ಲಕ್ಷ ರೂ.ಅನುದಾನ ನೀಡಲಾಗಿದೆ. ಗ್ರಾಮೀಣ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ಶಾಸಕರಿಗೆ ವಿಶೇಷ ಧನ್ಯವಾದಗಳು ಎಂದು ಹೇಳಿದರು.

ಎಂದು ಹೇಳಿದರು. ಯಂಟಗಾನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ದೊಡ್ಡಕರೇನಹಳ್ಳಿ, ಮಹದೇವಪುರ, ಚಿಕ್ಕಮಾರನಹಳ್ಳಿ, ಮುದ್ದಲಹಳ್ಳಿ, ಭೂಸಂದ್ರ, ಭದ್ರಯ್ಯನಪಾಳ್ಯ ಸೇರಿದಂತೆ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಸುಮಾರು 3 ಸಾವಿರ ಮಹಿಳೆಯರು ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದರು.

### ಪ್ರಗತಿಗಾಗಿ ಭಾರತ-ಫ್ರಾನ್ಸ್ ಪಾಲುದಾರಿಕೆ ಅಗತ್ಯ

# ಪ್ಯಾರಿಸ್‌ನಲ್ಲಿ ಪ್ರಧಾನಿ ಮೋದಿಗೆ ಭವ್ಯ ಸ್ವಾಗತ



• **ಪ್ಯಾರಿಸ್:** ಪ್ಯಾರಿಸ್‌ಗೆ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿಯವರನ್ನು ಅನಿವಾಸಿ ಭಾರತೀಯರು ಆತ್ಮೀಯವಾಗಿ ಸ್ವಾಗತಿಸಿದ್ದಾರೆ. ಈ ವೇಳೆ, ಜಾಗತಿಕ ಪ್ರಗತಿಗೆ ಭಾರತ-ಫ್ರಾನ್ಸ್ ಪಾಲುದಾರಿಕೆ ಅತ್ಯಗತ್ಯ ಎಂದು ಮೋದಿ ಹೇಳಿದ್ದಾರೆ. ತಮ್ಮ ಪ್ಯಾರಿಸ್ ಭೇಟಿ ಬಗ್ಗೆ ಎಕ್ಸ್‌ನಲ್ಲಿ ಹಂಚಿಕೊಂಡ ಮೋದಿ, ನಾನು ಪ್ಯಾರಿಸ್‌ಗೆ ಆಗ ಮಿಸಿದ್ದೇನೆ. ಇಲ್ಲಿನ ಭಾರತೀಯ ಸಮುದಾಯದವರು ನನ್ನನ್ನು ಆತ್ಮೀಯವಾಗಿ ಸ್ವಾಗತಿಸಿದ್ದಾರೆ. ಭಾರತ ಮತ್ತು ಫ್ರಾನ್ಸ್ ನಡುವಿನ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸಲು ಫ್ಯಾರಿಸ್‌ನ ಅನಿವಾಸಿ ಭಾರತೀಯರು ಮಾಡುತ್ತಿರುವ ಬಗ್ಗೆ ನನಗೆ ಹೆಮ್ಮೆಯಿದೆ ಎಂದು ಹೇಳಿದ್ದಾರೆ.

**ಪಾಲುದಾರಿಕೆ ಮತ್ತು ವಲಸಿಗರು:** ಭಾರತ ಮತ್ತು ಫ್ರಾನ್ಸ್ ಕಾರ್ಯತಂತ್ರದ ಪಾಲುದಾರಿಕೆ, ರಕ್ಷಣೆ, ಭದ್ರತೆ, ಬಾಹ್ಯಾಕಾಶ, ನಾಗರಿಕ ಪರಮಾಣು ಇಂಧನ, ಹವಾಮಾನ ವೈಪರೀತ್ಯ ತಡೆ, ಉದಯೋನ್ಮುಖ ತಂತ್ರಜ್ಞಾನಗಳು, ಇಂಡೋ-ಪೆಸಿಫಿಕ್, ಆವಿಷ್ಕಾರ ಮತ್ತು ಜಾಗತಿಕ ಆಡಳಿತವನ್ನು ಒಳಗೊಂಡಿದೆ. ಫ್ರಾನ್ಸ್‌ನ ಮುಖ್ಯ ಭೂಭಾಗದಲ್ಲಿರುವ ಭಾರತೀಯ ವಲಸಿಗರ ಸಂಖ್ಯೆ ಸುಮಾರು 1,19,000 ಎಂದು ಅಂದಾಜಿಸಲಾಗಿದ್ದು, 3,50,000 ಕ್ಕೂ ಹೆಚ್ಚು ಭಾರತೀಯ ಮೂಲದ ಜನರು ಫ್ರೆಂಚ್ ಸಾಗರೋತ್ತರ ಪ್ರಾಂತ್ಯಗಳಲ್ಲಿ ವಾಸಿಸುತ್ತಿದ್ದಾರೆ.

**ಸಮುದ್ರ ಮಾರ್ಗ ಮತ್ತು ರೈಲ್ವೆ ವಲಯ:** ಮೋದಿ, ಸಿಎಂಎ ಸಿಜಿಎಂ ಕಂಪನಿಯ ಅಧ್ಯಕ್ಷ ಮತ್ತು ಸಿಇಒ ರೊಡಾಲ್ಫ್ ಸಾದೆ ಅವರನ್ನು ಭೇಟಿ ಮಾಡಿ ಕಡಲ ಹಡಗು ಸಾಗಣೆ, ಲಾಜಿಸ್ಟಿಕ್ಸ್, ಕಂಟೈನರ್ ಹಡಗು ನಿರ್ಮಾಣ ಮತ್ತು ಜಾಗತಿಕ ಪೂರೈಕೆ ಸರಪಳಿಗಳ ಕುರಿತು ಚರ್ಚಿಸಿದರು. ಅಲ್‌ಸ್ಟಾಮ್ ಸಿಇಒ ಮಾರ್ಟಿನ್ ಸಿಯೋನ್, ಭಾರತದಲ್ಲಿ ರೈಲ್ವೆ ಆಧುನೀಕರಣ ಮತ್ತು ಮುಂದಿನ ಹೂಡಿಕೆ ಯೋಜನೆಗಳ ಕುರಿತು ಚರ್ಚಿಸಿದರು.

### ಪ್ರಮುಖ ಸಿಇಒಗಳನ್ನು ಭೇಟಿಯಾದ ಮೋದಿ

ಪ್ಯಾರಿಸ್: ಪ್ರಧಾನಮಂತ್ರಿ ನರೇಂದ್ರ ಮೋದಿ, ಗುರುವಾರ, ಇಲ್ಲಿನ ಪ್ರಮುಖ ಉದ್ಯಮಿಗಳನ್ನು ಭೇಟಿ ಮಾಡಿ, ಭಾರತದಲ್ಲಿನ ಹೂಡಿಕೆ ಅವಕಾಶಗಳು ಮತ್ತು ವಿಸ್ತರಣಾ ಯೋಜನೆಗಳ ಕುರಿತು ಚರ್ಚೆ ನಡೆಸಿದರು. ಹಡಗು ಸಾಗಣೆ, ಲಾಜಿಸ್ಟಿಕ್ಸ್, ರೈಲ್ವೆ ನಿರ್ಮಾಣ ಮತ್ತು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರಗಳಲ್ಲಿ ಸಹಕಾರವನ್ನು ಬಲಪಡಿಸುವ ಕುರಿತು ಈ ಮಾತುಕತೆಗಳು ನಡೆದವು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಸೇಂಟ್-ಗೋಬೈನ್ ಅಧ್ಯಕ್ಷ ಮತ್ತು ಸಿಇಒ ಬೆನೈಟ್ ಬಾಜಿನ್ ಅವರೊಂದಿಗೆ ಸುಸ್ಥಿರತೆ ಹಾಗೂ ನಿರ್ಮಾಣ ವಲಯದ ಅವಕಾಶಗಳ ಕುರಿತು ಮಾತನಾಡಿದರು. ಹಾಗೆಯೇ, ಮಿಸ್ಟ್ರಲ್ ಎಐ ಸಹ-ಸಂಸ್ಥಾಪಕ ಮತ್ತು ಸಿಇಒ ಆರ್ಥರ್ ಮೆನ್ಷ್ ಅವರನ್ನೂ ಭೇಟಿಯಾದರು. ಮೋದಿ, ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅವರೊಂದಿಗೆ ವಿವಾಟೆಕ್ 2026 ಕಾರ್ಯಕ್ರಮದಲ್ಲಿ ಭಾಗವಹಿಸಿದರು.

# ಭಾರತದ ಚೊಚ್ಚಲ 8 ಪಥದ ರಸ್ತೆ ಸುರಂಗ



**ದಿಲ್ಲಿಮುಂಬೈ ಎಕ್ಸ್‌ಪ್ರೆಸ್‌ವೇ ಯೋಜನೆಯ ಕೊನೆಯ ಕೊಂಡಿ ರಾಜಸ್ಥಾನದ ಮುಕುಂದ್ರಾ ಹಿಲ್ಸ್ ಹುಲಿ ಸಂರಕ್ಷಿತ ಪ್ರದೇಶದಡಿ ನಿರ್ಮಿಸಲಾದ 4.9 ಕಿಮೀ ಉದ್ದದ ಸುರಂಗ ಮಾರ್ಗ ಜೂ.20ರಂದು ಉದ್ಘಾಟನೆಯಾಗಲಿದ್ದು, ಇದರೊಂದಿಗೆ ಸಂಪೂರ್ಣ ಎಕ್ಸ್‌ಪ್ರೆಸ್‌ವೇ ಕಾರ್ಯಾಚರಣೆಗೆ ಸಜ್ಜಾಗಲಿದೆ. ಆ ಕುರಿತ ವಿವರ ಇಲ್ಲಿದೆ.**

**12 ಗಂಟೆಗಳಲ್ಲಿ ದಿಲ್ಲಿಯಿಂದ ಮುಂಬೈ**

ಎಕ್ಸ್‌ಪ್ರೆಸ್‌ವೇ ಸಂಪೂರ್ಣವಾಗಿ ಕಾರ್ಯಾರಂಭಿಸಿದ ಬಳಿಕ ದಿಲ್ಲಿ ಮತ್ತು ಮುಂಬೈ ನಡುವಿನ ರಸ್ತೆ ಪ್ರಯಾಣದ ಅವಧಿ ಗಣನೀಯವಾಗಿ ಕಡಿಮೆಯಾಗಲಿದೆ. ಪ್ರಸ್ತುತ ಈ ಎರಡು ಮಹಾನಗರಗಳ ನಡುವಿನ ರಸ್ತೆ ಪ್ರಯಾಣಕ್ಕೆ 24 ಗಂಟೆಗಳಿಗಿಂತ ಹೆಚ್ಚು ಸಮಯ ಬೇಕಾಗುತ್ತದೆ. ಆದರೆ ಹೊಸ ಎಕ್ಸ್‌ಪ್ರೆಸ್‌ವೇ ಮೂಲಕ ಈ ಪ್ರಯಾಣದ ಅವಧಿ ಸುಮಾರು 12 ಗಂಟೆಗಳಿಗೆ ಇಳಿಯಲಿದೆ. 120 ಕಿಮೀ ಪ್ರತಿ ಗಂಟೆ ವೇಗದವರೆಗೆ ಸಂಚಾರಕ್ಕೆ ಅನುಕೂಲವಾಗುವಂತೆ ಈ ನಿಯಂತ್ರಿತ ಪ್ರವೇಶದ ಹೆದ್ದಾರಿಯನ್ನು ನಿರ್ಮಿಸಲಾಗಿದೆ. ಸ್ಥಳೀಯ ರಸ್ತೆಗಳು, ಮಿಶ್ರ ವಾಹನ ಸಂಚಾರ ಮತ್ತು ಇತರ ಅಡಚಣೆಗಳನ್ನು ಕಡಿಮೆ ಮಾಡುವ ಮೂಲಕ ವೇಗದ ಹಾಗೂ ನಿರಂತರ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಇದರಿಂದ ದೂರದ ಪ್ರಯಾಣ ಮಾಡುವ ಪ್ರಯಾಣಿಕರು ಹಾಗೂ ಸರಕು ಸಾಗಣೆ ವಲಯಕ್ಕೆ ಮಹತ್ತರ ಲಾಭವಾಗುವ ನಿರೀಕ್ಷೆಯಿದೆ.




ದಿಲ್ಲಿ-ಮುಂಬೈ ಎಕ್ಸ್‌ಪ್ರೆಸ್‌ವೇ: ಜೂ.20ರಿಂದ ಸಂಪೂರ್ಣ ಸಂಚಾರಕ್ಕೆ ಸಿದ್ಧ

### ಭವಿಷ್ಯದ ಅಗತ್ಯಗಳಿಗೆ ಸಿದ್ಧತೆ

ಈ ಎಕ್ಸ್‌ಪ್ರೆಸ್‌ವೇಯನ್ನು ಭವಿಷ್ಯದ ವಾಹನ ಸಂಚಾರದ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ವಿನ್ಯಾಸಗೊಳಿಸಲಾಗಿದೆ. ಪ್ರಸ್ತುತ ಎಂಟು ಪಥಗಳಿರುವ ರಸ್ತೆ ಅಗತ್ಯವಿದ್ದಲ್ಲಿ 12 ಪಥಗಳಿಗೆ ವಿಸ್ತರಿಸಲು ಸಾಧ್ಯವಾಗುವಂತೆ ಮಧ್ಯಭಾಗವನ್ನು ವಿನ್ಯಾಸಗೊಳಿಸಲಾಗಿದೆ. ಇದರಿಂದ ಭವಿಷ್ಯದಲ್ಲಿ ಹೆಚ್ಚುವರಿ ವಾಹನ ಸಂಚಾರವನ್ನು ನಿರ್ವಹಿಸಲು ಅನುಕೂಲವಾಗಲಿದೆ.

### ಸಂಕೀರ್ಣ ಎಂಜಿನಿಯರಿಂಗ್ ಸಾಧನೆ

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಪ್ರಕಾರ, ಮುಕುಂದ್ರಾ ಹಿಲ್ಸ್ ಪ್ರದೇಶ, ಪರಿಸರದ ದೃಷ್ಟಿಯಿಂದ ಎಕ್ಸ್‌ಪ್ರೆಸ್‌ವೇ ಯೋಜನೆಯಲ್ಲೇ ಅತ್ಯಂತ ಸಂಕೀರ್ಣ ಹಾಗೂ ತಾಂತ್ರಿಕವಾಗಿ ಸವಾಲಿನ ಭಾಗವೆಂದು ಪರಿಗಣಿಸಲಾಗಿತ್ತು. ಹುಲಿ ಸಂರಕ್ಷಿತ ಪ್ರದೇಶದೊಳಗೆ ಸಾಮಾನ್ಯ ಮೇಲ್ಮೈ ರಸ್ತೆ ನಿರ್ಮಿಸಲು ಸಾಧ್ಯವಾಗದ ಕಾರಣ, ಎಂಜಿನಿಯರ್‌ಗಳು ಭೂಗರ್ಭ ಸುರಂಗದ ಮಾರ್ಗವನ್ನು ಆಯ್ಕೆ ಮಾಡಿದ್ದರು. ಈ ವಿನ್ಯಾಸದಿಂದ ಮೇಲ್ಭಾಗದಲ್ಲಿರುವ ವನ್ಯಜೀವಿಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ. ಅಧಿಕಾರಿಗಳ ಹೇಳಿಕೆಯಂತೆ, ವಾಹನಗಳು ಹೆಚ್ಚಿನ ವೇಗದಲ್ಲಿ ಸಂಚರಿಸಿದರೂ ಮೇಲಿನ ಪರಿಸರ ವ್ಯವಸ್ಥೆಗೆ ಅಡ್ಡಿಯಾಗದಂತೆ ಈ ಸುರಂಗವನ್ನು ವಿನ್ಯಾಸಗೊಳಿಸಲಾಗಿದೆ.

### ಪರಿಸರ ಸ್ನೇಹಿ ವಿನ್ಯಾಸ

ಎಕ್ಸ್‌ಪ್ರೆಸ್‌ವೇ ಯೋಜನೆಯಲ್ಲಿ ಪರಿಸರ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಲಾಗಿದೆ. ಯೋಜನೆಯ ಭಾಗವಾಗಿ 20 ಲಕ್ಷ ಮರಗಳನ್ನು ನೆಡುವ ಗುರಿ ಹೊಂದಲಾಗಿದೆ. ವನ್ಯಜೀವಿಗಳ ಸುರಕ್ಷಿತ ಸಂಚಾರಕ್ಕಾಗಿ ಒಟ್ಟು 2.5 ಕಿಮೀ ಉದ್ದದ ವಿಶೇಷ ಕ್ರಾಸಿಂಗ್ ವ್ಯವಸ್ಥೆಗಳನ್ನು ರೂಪಿಸಲಾಗಿದೆ. ಪ್ರತಿ 500 ಮೀಟರ್‌ಗಳಿಗೆ ಮಳೆನೀರು ಸಂಗ್ರಹ ವ್ಯವಸ್ಥೆ ಹಾಗೂ ಮರಗಳ ನಿರ್ವಹಣೆಗೆ ಡ್ರಿಪ್ ನೀರಾವರಿ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಮುಕುಂದ್ರಾ ಹಿಲ್ಸ್ ಹುಲಿ ಸಂರಕ್ಷಿತ ಪ್ರದೇಶದಡಿ ಸುರಂಗ ನಿರ್ಮಾಣವೂ ಪರಿಸರ ಸಂರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಕೈಗೊಳ್ಳಲಾದ ಪ್ರಮುಖ ಕ್ರಮವಾಗಿದೆ.



### ಹುಲಿ ಸಂರಕ್ಷಿತ ಪ್ರದೇಶದಡಿ ನಿರ್ಮಾಣ

ರಾಜಸ್ಥಾನದ ಮುಕುಂದ್ರಾ ಹಿಲ್ಸ್ ಟೈಗರ್ ರಿಸರ್ವ್ ಅಡಿಯಲ್ಲಿ ನಿರ್ಮಿಸಲಾದ 4.9 ಕಿಮೀ ಉದ್ದದ ಜೋಡಿ ಸುರಂಗ ಮಾರ್ಗ ದಿಲ್ಲಿಮುಂಬೈ ಎಕ್ಸ್‌ಪ್ರೆಸ್‌ವೇಯ ಕೊನೆಯ ಬಾಕಿ ಉಳಿದ ಭಾಗವಾಗಿತ್ತು. ಜೂ.20ರಂದು ಇದು ಸಾರ್ವಜನಿಕ ಸಂಚಾರಕ್ಕೆ ತೆರೆಯಲಿದ್ದು, ಇದರೊಂದಿಗೆ 1,386 ಕಿಮೀ ಉದ್ದದ ದಿಲ್ಲಿಮುಂಬೈ ಎಕ್ಸ್‌ಪ್ರೆಸ್‌ವೇ ಸಂಪೂರ್ಣವಾಗಿ ಕಾರ್ಯಾರಂಭ ಮಾಡಲಿದೆ. ಈ ಸುರಂಗ ಭಾರತದ ಮೊದಲ ಎಂಟು ಪಥಗಳ ರಸ್ತೆ ಸುರಂಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಹುಲಿ ಸಂರಕ್ಷಿತ ಪ್ರದೇಶದ ಮೇಲ್ಭಾಗದಲ್ಲಿರುವ ವನ್ಯಜೀವಿಗಳ ಸಂಚಾರಕ್ಕೆ ಯಾವುದೇ ಅಡ್ಡಿಯಾಗದಂತೆ ಇದನ್ನು ಭೂಗರ್ಭದಲ್ಲಿ ನಿರ್ಮಿಸಲಾಗಿದೆ. ಇದರಿಂದ ವಾಹನಗಳು ತಿರುವು-ಮುರುವುಗಳಿರುವ ಬೆಟ್ಟದ ರಸ್ತೆಯನ್ನು ತಪ್ಪಿಸಿ ವೇಗವಾಗಿ ಸಂಚರಿಸಲು ಸಾಧ್ಯವಾಗುತ್ತದೆ.

### ಆರ್ಥಿಕ ಚಟುವಟಿಕೆಗೆ ಉತ್ತೇಜನ

ಭಾರತದ ಅತ್ಯಂತ ಬ್ಯುಸಿ ಸರಕು ಸಾಗಣೆ ಮಾರ್ಗಗಳಲ್ಲಿ ಒಂದಾದ ಈ ಕಾರಿಡಾರ್‌ನಲ್ಲಿ ಲಾಜಿಸ್ಟಿಕ್ಸ್ ವೆಚ್ಚ ಕಡಿಮೆಯಾಗುವ ನಿರೀಕ್ಷೆಯಿದೆ. ರಾಜಸ್ಥಾನ, ಗುಜರಾತ್ ಮತ್ತು ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳ ಕೈಗಾರಿಕೆಗಳು, ವ್ಯಾಪಾರ ಹಾಗೂ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಇದರ ಪ್ರಯೋಜನ ದೊರೆಯಲಿದೆ. ರಸ್ತೆಯ ಸಮೀಪದ ಕೋಟಾ, ರತ್ಲಾಮ್ ಮತ್ತು ಭರೂಚ್ ನಗರಗಳಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಾಗುವ ಸಾಧ್ಯತೆಯಿದೆ. ಉತ್ತಮ ಸಂಪರ್ಕ ವ್ಯವಸ್ಥೆಯಿಂದ ಹೊಸ ಹೂಡಿಕೆಗಳಿಗೆ ಅವಕಾಶ ಸೃಷ್ಟಿಯಾಗಲಿದ್ದು, ಪ್ರಾದೇಶಿಕ ಅಭಿವೃದ್ಧಿಗೂ ವೇಗ ಸಿಗುವ ನಿರೀಕ್ಷೆ ವ್ಯಕ್ತವಾಗಿದೆ.

### ವಿಮಾನ ನಿಲ್ದಾಣ ಮತ್ತು ಬಂದರುಗಳಿಗೆ ನೇರ ಸಂಪರ್ಕ

ಈ ಎಕ್ಸ್‌ಪ್ರೆಸ್‌ವೇ ಉತ್ತರ ಪ್ರದೇಶದ ಜೇವರ್ ವಿಮಾನ ನಿಲ್ದಾಣ ಹಾಗೂ ಮಹಾರಾಷ್ಟ್ರದ ನವಿ ಮುಂಬೈ ವಿಮಾನ ನಿಲ್ದಾಣಗಳಿಗೆ ನೇರ ಸಂಪರ್ಕ ಕಲ್ಪಿಸಲಿದೆ. ಇದೇ ವೇಳೆ ಇದು ಜವಾಹರಲಾಲ್ ನೆಹರೂ ಪೋರ್ಟ್ ಟ್ರಸ್ಟ್‌ನಲ್ಲಿ ಅಂತ್ಯಗೊಳ್ಳಲಿದೆ. ಇದರಿಂದ ರಸ್ತೆ, ವಾಯು ಮತ್ತು ಸಮುದ್ರ ಸಾರಿಗೆ ವ್ಯವಸ್ಥೆಗಳ ನಡುವೆ ನೇರ ಸಂಪರ್ಕ ಸಾಧ್ಯವಾಗಲಿದೆ. ಪ್ರಯಾಣಿಕರ ಸಂಚಾರ ಹಾಗೂ ಸರಕು ಸಾಗಣೆಯನ್ನು ಹೆಚ್ಚು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸಲು ಈ ಸಂಪರ್ಕಗಳು ನೆರವಾಗಲಿವೆ. ವ್ಯಾಪಾರ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಿಗೂ ಇದು ಉತ್ತೇಜನ ನೀಡುವ ನಿರೀಕ್ಷೆಯಿದೆ.

### ಅಧಿಕಾರಿ ವರ್ಗಕ್ಕೆ ಮೋದಿ, ಟ್ರಂಪ್ ನಿರ್ದೇಶನ

# ಒಪ್ಪಂದ ತ್ವರಿತಗೊಳಿಸಲು ಕರೆ

• **ಎವಿಯನ್-ಲೆಸ್-ಬೈನ್ಸ್ (ಫ್ರಾನ್ಸ್):** ಆದಷ್ಟು ಶೀಘ್ರ, ಸಮತೋಲಿತ, ಪರಸ್ಪರ ಪ್ರಯೋಜನಕಾರಿ ಮತ್ತು ವಾಣಿಜ್ಯಕವಾಗಿ ಅರ್ಥಪೂರ್ಣವಾದ ವ್ಯಾಪಾರ ಒಪ್ಪಂದವನ್ನು ಸಿದ್ಧಪಡಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗುವಂತೆ, ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಅಧಿಕಾರಿವರ್ಗಕ್ಕೆ ನಿರ್ದೇಶವಿತ್ತಿದ್ದಾರೆ.

16 ತಿಂಗಳ ನಂತರ ಪ್ರಪ್ರಥಮ ಬಾರಿ ಉಭಯ ನಾಯಕರು, ನಲುಗಿರುವ ತಮ್ಮ ದ್ವಿಪಕ್ಷೀಯ ಬಾಂಧವ್ಯಗಳನ್ನು ಮತ್ತೆ ಬಲಪಡಿಸುವ ನಿಟ್ಟಿನಲ್ಲಿ ಜಿ7ಶೃಂಗಸಭೆ ಸಂದರ್ಭ ವ್ಯಾಪಕ ಸುತ್ತಿನ ಮಾತುಕತೆ ನಡೆಸಿದ್ದರು. ಈ ವಿದ್ಯಮಾನದ ಮರುದಿನ ಗುರುವಾರ ಭಾರತದ ವಿದೇಶ ವ್ಯವಹಾರಗಳ ಖಾತೆ ಪ್ರಸ್ತುತ ಮಾಹಿತಿ ನೀಡಿದೆ. ಪ್ರಸ್ತಾವಿತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿ ಮಾತುಕತೆ ಮುನ್ನಡೆಸಲು ಅಮೆರಿಕದ ವಾಣಿಜ್ಯ ಪ್ರತಿನಿಧಿ ಜಮ್ಮೀಸನ್ ಗ್ರೀರ್ ಮುಂದಿನ ವಾರ ಭಾರತಕ್ಕೆ ಭೇಟಿ ನೀಡಲಿದ್ದಾರೆ.

**ಮರುಸಂಕಲ್ಪ :** ಭಾರತ-ಅಮೆರಿಕ ನಡುವಣ ಸಮಗ್ರ ಜಾಗತಿಕ ವ್ಯೂಹಾತ್ಮಕ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಸಂಕಲ್ಪವನ್ನು ಪ್ರಧಾನಿ ಮೋದಿ ,ಅಧ್ಯಕ್ಷ ಟ್ರಂಪ್ ಮಾತುಕತೆ ಸಂದರ್ಭ ಮರುದೃಢೀಕರಿಸಿದ್ದಾರೆ ಮತ್ತು ಉಭಯ ರಾಷ್ಟ್ರಗಳು ಹಾಗೂ ತಮ್ಮ ಜನರಿಗೆ ಪರಸ್ಪರ ಪ್ರಯೋಜನಕಾರಿಯಾಗುವಂತೆ ಎಲ್ಲಾ ರಂಗಗಳಲ್ಲೂ ಸಹಕಾರ ವಿಸ್ತರಿಸಲು ಮರುಸಂಕಲ್ಪ ಮಾಡಿದ್ದಾರೆ.

**ಮಾತುಕತೆಯಲ್ಲಿ ಪ್ರಗತಿ ಬಗ್ಗೆ ಸಂತೃಪ್ತಿ:** ಮಧ್ಯಂತರ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ನಿಟ್ಟಿನಲ್ಲಿ ನಡೆದ ಮಾತುಕತೆಯಲ್ಲಾಗಿರುವ ಮಹತ್ತ್ವದ ಪ್ರಗತಿಯನ್ನು ಉಭಯ ನಾಯಕರು ಸಂತೃಪ್ತಿಯೊಂದಿಗೆ ಗುರುತಿಸಿದ್ದಾರೆ ಮತ್ತು ಆದಷ್ಟು ಶೀಘ್ರ, ಸಮತೋಲಿತ , ಪರಸ್ಪರ ಪ್ರಯೋಜನಕಾರಿ ಹಾಗೂ ವಾಣಿಜ್ಯಕವಾಗಿ ಅರ್ಥಪೂರ್ಣ ಒಪ್ಪಂದವನ್ನು ಹೊಂದುವ ನಿಟ್ಟಿನಲ್ಲಿ ಕಾರ್ಯತತ್ಪರರಾಗುವಂತೆ ತಮ್ಮ ಅಧಿಕಾರಿಗಳಿಗೆ ನಿರ್ದೇಶವಿತ್ತಿರುವುದಾಗಿ ವಿದೇಶ ವ್ಯವಹಾರಗಳ ಖಾತೆ ಹೇಳಿಕೆಯಲ್ಲಿ ತಿಳಿಸಿದೆ. ಪ್ರಸ್ತಾವಿತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿ ಇತ್ತಂಡಗಳು ಈಗಾಗಲೆ ಸರಣಿ ಮಾತುಕತೆ ನಡೆಸಿವೆ.

## ಕಿರುಸುದ್ದಿ

### ಶಿರಡಿ ಸಾಯಿ ದೇಗುಲಕ್ಕೆ ₹660 ಕೋಟಿ ದೇಣಿಗೆ

• **ಮುಂಬೈ:** ಮಹಾರಾಷ್ಟ್ರದ ಸಾಯಿಬಾಬಾ ದೇವಾಲಯಕ್ಕೆ 2025-26ರಲ್ಲಿ ನಗದು, ಡಿಜಿಟಲ್ ಮತ್ತು ವಸ್ತು ರೂಪದಲ್ಲಿ ಭಕ್ತರು ಸುಮಾರು 660 ಕೋಟಿ ರೂ. ದೇಣಿಗೆ ನೀಡಿದ್ದಾರೆ ಎಂದು ಶಿರಡಿ ಸಾಯಿಬಾಬಾ ಸಂಸ್ಥಾನವು ಹೇಳಿದೆ. ಇದರ ಜತೆಗೆ ಸಂಸ್ಥಾನದ ಸ್ಥಿರ ಠೇವಣಿಗಳು 3,618 ಕೋಟಿ ರೂ.ಗಳಷ್ಟಿದ್ದು, ಇದರ ಬಡ್ಡಿಯಿಂದ 256 ಕೋಟಿ ರೂ.ಗಳ ಆದಾಯವನ್ನು



ಗಳಿಸಿದೆ ಎಂದು ಸಂಸ್ಥಾನದ ಸಿಇಒ ಗೋರಕ್ಷ ಗಾಡಿಲ್ಕರ್ ಹೇಳಿದ್ದಾರೆ. ಸಾಯಿ ಸಂಸ್ಥಾನದ ಆಸ್ಪತ್ರೆಗಳಿಗೆ ಭಕ್ತರು 15-20 ಕೋಟಿ ರೂ.ಗಳವರೆಗೆ ಆಧುನಿಕ ವೈದ್ಯಕೀಯ ಉಪಕರಣಗಳನ್ನು ದಾನ ಮಾಡಿದ್ದಾರೆ. ಒಟ್ಟು ಸುಮಾರು 660 ಕೋಟಿ ರೂ.ಗಳಷ್ಟು ಕೊಡುಗೆ ನೀಡಿದ್ದಾರೆ ಎಂದು ಗಾಡಿಲ್ಕರ್ ಮಾಹಿತಿ ನೀಡಿದ್ದಾರೆ. ವಿದೇಶಗಳಲ್ಲಿರುವ ಸಾಯಿ ಭಕ್ತರು ಸುಮಾರು 4.89 ಕೋಟಿ ರೂ. ಮೌಲ್ಯದ ವಿದೇಶಿ ಕರೆನ್ಸಿಯನ್ನು ನೀಡಿದ್ದು, 39.55 ಕೋಟಿ ರೂ. ಆದಾಯವು ದರ್ಶನ ಮತ್ತು ಆರತಿ ಶುಲ್ಕದಿಂದ ಬಂದಿದೆ.

### ಸ್ವದೇಶಿ ಏರ್ ಕುಷನ್ ವೆಹಿಕಲ್ ಸೇರ್ಪಡೆ

• **ಹೊಸದಿಲ್ಲಿ:** ದೇಶದ ಮೊದಲ ಸ್ಥಳೀಯವಾಗಿ ನಿರ್ಮಿಸಲಾದ ಏರ್ ಕುಷನ್ ವೆಹಿಕಲ್ (ಎಸಿವಿ), ಎಚ್-561 ಅನ್ನು ಗೋವಾದ ಚೌಗುಲೆ ಕಂಪನಿ ಪ್ರೈವೇಟ್ ಲಿಮಿಟೆಡ್‌ನ ಶಿಪ್‌ಯಾರ್ಡ್ ಸೌಲಭ್ಯದಲ್ಲಿ ಗುರುವಾರ ಔಪಚಾರಿಕವಾಗಿ ಸೇವೆಗೆ ಸೇರ್ಪಡೆ ಮಾಡಲಾಗಿದೆ. ಇದು ಭಾರತದ ಸ್ಥಳೀಯ ಕಡಲ ಸಾಮರ್ಥ್ಯಗಳಿಗೆ ಗಮನಾರ್ಹ ಉತ್ತೇಜನ ನೀಡುತ್ತದೆ. ಎಚ್-561 ಭಾರತದ ರಕ್ಷಣಾ ಉತ್ಪಾದನಾ ವಲಯಕ್ಕೆ ಒಂದು ಮೈಲಿಗಲ್ಲಾಗಿದೆ. ಆತ್ಮನಿರ್ಭರ ಭಾರತ ಯೋಜನೆಯಲ್ಲಿ ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆಗಾಗಿ ಸರ್ಕಾರದ ಪ್ರಯತ್ನದೊಂದಿಗೆ ಇದು ಬಲ ನೀಡುತ್ತದೆ.

### ರಷ್ಯಾ ಮೇಲೆ ಡ್ರೋನ್ ದಾಳಿ ನಡೆಸಿದ ಉಕ್ರೇನ್

• **ಮಾಸ್ಕೋ:** ರಷ್ಯಾ ರಾಜಧಾನಿಯಾದ ಮಾಸ್ಕೋ ನಗರದಲ್ಲಿರುವ ಪ್ರಮುಖ ತೈಲ ಸಂಸ್ಕರಣಾ ಘಟಕದ ಮೇಲೆ ಉಕ್ರೇನ್ ಭೀಕರ ಡ್ರೋನ್ ದಾಳಿಯನ್ನು ಗುರುವಾರ ನಡೆಸಿದೆ. ದಾಳಿಯಲ್ಲಿ 17 ಮಂದಿಗೆ ಗಾಯಗಳಾಗಿವೆ ಎಂದು ರಷ್ಯಾ ಮಾಹಿತಿ ನೀಡಿದೆ. ಇದನ್ನು ಕಳೆದ ಎರಡು ವರ್ಷಗಳಲ್ಲಿ ನಡೆದ ಅತಿದೊಡ್ಡ ಡ್ರೋನ್ ದಾಳಿ ಎಂದು ರಷ್ಯಾ ಹೇಳಿದೆ.



### ಇಪಿಎಫ್ ಬಡ್ಡಿ ದರ ಶೇ. 8.25ಕ್ಕೆ ಅನುಮೋದನೆ

• **ಹೊಸದಿಲ್ಲಿ:** ನೌಕರರ ಭವಿಷ್ಯ ನಿಧಿ (ಇಪಿಎಫ್) ಠೇವಣಿಗಳ ಮೇಲಿನ ಬಡ್ಡಿ ದರವನ್ನು 2025-26ನೇ ಸಾಲಿಗೆ ಶೇ 8.25 ರಷ್ಟು ಕಾಯ್ದುಕೊಳ್ಳಲು ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಈ ಬಡ್ಡಿಯನ್ನು ಪ್ರಸಕ್ತ ತಿಂಗಳಲ್ಲೇ ಏಳು ಕೋಟಿಗೂ ಹೆಚ್ಚು ಸದಸ್ಯರ ಖಾತೆಗಳಿಗೆ ಜಮೆ ಮಾಡುವ ಸಾಧ್ಯತೆಯಿದೆ ಎಂದು ಗುರುವಾರ ಮೂಲಗಳು ತಿಳಿಸಿವೆ. ಭಾರತ ಸರ್ಕಾರ ಇಪಿಎಫ್‌ನ ಗ್ಯಾರಂಟರ್ ಆಗಿರುವುದರಿಂದ ಈ ಪ್ರಸ್ತಾವನೆಯನ್ನು ಹಣಕಾಸು ಸಚಿವಾಲಯದ ಒಪ್ಪಿಗೆಗೆ ಕಳುಹಿಸಲಾಗಿತ್ತು.




ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆಯ (ಇಪಿಎಫ್‌ಒ) ಕೇಂದ್ರ ವಿಶ್ವಸ್ತ ಮಂಡಳಿ (ಸಿಬಿಟಿ) ನಿಗದಿಪಡಿಸಿದ್ದ ಈ ದರಕ್ಕೆ ಹಣಕಾಸು ಸಚಿವಾಲಯ ಸಮ್ಮತಿ ಸೂಚಿಸಿದೆ. ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವಿಯಾ ನೇತೃತ್ವದಲ್ಲಿ 2026ರ ಮಾ.2 ರಂದು ನಡೆದ ಸಿಬಿಟಿ ಸಭೆಯಲ್ಲಿ, 2025-26ರ ಹಣಕಾಸು ವರ್ಷಕ್ಕೆ ಶೇ 8.25 ರಷ್ಟು ಬಡ್ಡಿ ದರವನ್ನು ನಿಗದಿಪಡಿಸಲು ನಿರ್ಧರಿಸಲಾಗಿತ್ತು. ಈ ದರವನ್ನು ಸತತ ಮೂರನೇ ವರ್ಷವೂ ಮುಂದುವರಿಸಲಾಗಿದೆ. ಇಪಿಎಫ್‌ಒ ಅಭಿವೃದ್ಧಿಪಡಿಸಿರುವ ಹೊಸ ವ್ಯವಸ್ಥೆಯಲ್ಲಿ, ಈ ತಿಂಗಳಲ್ಲೇ ಚಂದಾದಾರರ ಖಾತೆಗಳಿಗೆ ಬಡ್ಡಿ ಶೀಘ್ರವೇ ಜಮೆಯಾಗಲಿದೆ.

**ಹಿಂದಿನ ದರಗಳು:** ಸಂಸ್ಥೆ 2024-25ರ ಹಣಕಾಸು ವರ್ಷದಲ್ಲೂ ಶೇ 8.25 ರಷ್ಟು ಬಡ್ಡಿ ದರವನ್ನು ಕಾಯ್ದುಕೊಂಡಿತ್ತು. 2022-23ರಲ್ಲಿ ಶೇ 8.15ರಷ್ಟಿದ್ದ ಬಡ್ಡಿ ದರವನ್ನು 2023-24ರಲ್ಲಿ ಶೇ 8.25 ಕ್ಕೆ ಏರಿಸಲಾಗಿತ್ತು.

### ವದಂತಿಗೆ ಕಿವಿಗೊಡದಿರಿ: ಅಭ್ಯರ್ಥಿಗಳಿಗೆ ಮನವಿ

• **ಹೊಸದಿಲ್ಲಿ:** ಮರು ಪರೀಕ್ಷೆಗೂ ಮುನ್ನ ವದಂತಿಗಳಿಗೆ ಕಿವಿಗೊಡದೆ ಶಾಂತವಾಗಿರಲು ನೀಟ್-ಯುಜಿ ಅಭ್ಯರ್ಥಿಗಳಿಗೆ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ಮನವಿ ಮಾಡಿದೆ. ಸುರಕ್ಷಿತ, ಸುರಕ್ಷಿತ ಮತ್ತು ನ್ಯಾಯಯುತ ಪರೀಕ್ಷೆಯನ್ನು ಖಚಿತಪಡಿಸಿಕೊಳ್ಳಲು ವ್ಯಾಪಕ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ಎನ್‌ಟಿಎ ಭರವಸೆ ನೀಡಿದೆ. ಎಕ್ಸ್‌ನಲ್ಲಿ ಸಂದೇಶವೊಂದರಲ್ಲಿ, ಎನ್‌ಟಿಎ ಭಾನುವಾರ ನಿಗದಿಯಂತೆ ಮರುಪರೀಕ್ಷೆಯನ್ನು ನಡೆಸಲಾಗುವುದು ಎಂದು ಹೇಳಿದೆ. ಮುಂದೂಡುವ ವದಂತಿಗಳು ಮತ್ತು ಸಾಮಾಜಿಕ ಮಾಧ್ಯಮದಲ್ಲಿನ ವರದಿಗಳಿಗೆ ಕಿವಿಗೊಡದಂತೆ ಅಭ್ಯರ್ಥಿಗಳನ್ನು ಕೇಳಿಕೊಂಡಿದೆ. ಎನ್‌ಟಿಎಯ ಅಧಿಕೃತ ಸಂವಹನವನ್ನು ಮಾತ್ರ ಅವಲಂಬಿಸಿ ಎಂದು ಹೇಳಿದೆ. ಸಂಬಂಧಿತ ಸಚಿವಾಲಯಗಳು, ರಾಜ್ಯ ಸರ್ಕಾರಗಳು ಮತ್ತು ಭದ್ರತಾ ಸಂಸ್ಥೆಗಳೊಂದಿಗೆ ನಿಕಟ ಸಮನ್ವಯದಲ್ಲಿ ಸುರಕ್ಷಿತ ಮತ್ತು ನ್ಯಾಯಯುತ ಪರೀಕ್ಷೆಗೆ ವ್ಯಾಪಕ ವ್ಯವಸ್ಥೆಗಳು ಜಾರಿಯಲ್ಲಿವೆ ಎಂದು ನಾವು ನಿಮಗೆ ಭರವಸೆ ನೀಡಲು ಬಯಸುತ್ತೇವೆ. ಈ ಪ್ರಕ್ರಿಯೆಯ ಸಮಗ್ರತೆಯು ನಮ್ಮ ಅತ್ಯುನ್ನತ ಆದ್ಯತೆಯಾಗಿದೆ ಮತ್ತು ದೃಢವಾದ, ಬಹು ಹಂತದ ಸುರಕ್ಷತಾ ಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದು ಅದು ಹೇಳಿದೆ.




**ಪ್ರಧಾನ್ ನೇತೃತ್ವದಲ್ಲಿ ಸಭೆ :** ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ಅಧ್ಯಕ್ಷತೆಯಲ್ಲಿ ಗುರುವಾರ ಶಿಕ್ಷಣ ಸಚಿವಾಲಯ, ರಾಜ್ಯ ಸರ್ಕಾರಗಳು, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಹಿರಿಯ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಯಿತು.

### ಜಾರ್ಖಂಡ್, ಮಿಜೋರಾಂ: ಎನ್‌ಡಿಎಗೆ ಭರ್ಜರಿ ಗೆಲುವು

• **ರಾಂಚಿ:** ಎನ್‌ಡಿಎ ಬೆಂಬಲಿತ ಜಾರ್ಖಂಡ್‌ನ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥವಾನಿ ಹಾಗೂ ಮಿಜೋರಾಂನ ಜೆಪಿಎಂ ಅಭ್ಯರ್ಥಿ ಕೆ.ಲಾಲ್ಬಿಯಾಂಗ್‌ಕಿಮಾ ಗುರುವಾರ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಇದರೊಂದಿಗೆ ಎನ್‌ಡಿಎ ರಾಜ್ಯಸಭಾ ಸೀಟುಗಳ ಸಂಖ್ಯೆ 154ಕ್ಕೇರಿದೆ. ಜಾರ್ಖಂಡ್ ರಾಜ್ಯಸಭಾ ಚುನಾವಣೆಯಲ್ಲಿ 28 ಮತಗಳನ್ನು ಪಡೆದ ಎನ್‌ಡಿಎ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಪರಿಮಲ್ ನಥವಾನಿ ಗೆಲುವು ಸಾಧಿಸಿದ್ದಾರೆ. ನಥವಾನಿ ಅವರು ಗೆಲ್ಲುತ್ತಿದ್ದಂತೆ ವಿಧಾನಸಭೆಯಲ್ಲಿ ಜೈ ಶ್ರೀರಾಮ್ ಘೋಷಣೆ ಕೂಗಲಾಯಿತು. ಇಂಡಿ ಕೂಟದ ಶಾಸಕರು ಪರಿಮಲ್ ಪರವಾಗಿ ಅಡ್ಡಮತದಾನ ಮಾಡಿದ್ದಾರೆಂದು ಹೇಳಲಾಗುತ್ತಿದೆ.

ಸ್ವತಂತ್ರ ಅಭ್ಯರ್ಥಿ ನಥವಾನಿ, 20 ಮತಗಳನ್ನು ಪಡೆದ ಕಾಂಗ್ರೆಸ್ ಅಭ್ಯರ್ಥಿ ಪ್ರಣವ್ ಝಾರನ್ನು ಸೋಲಿಸಿದ್ದಾರೆ. 30 ಮತಗಳನ್ನು ಪಡೆದ ಜೆಎಂಎಂ ಅಭ್ಯರ್ಥಿ ಬೈದ್ಯನಾಥ ರಾಮ್ ಇನ್ನೊಂದು ಸ್ಥಾನದಿಂದ ಆಯ್ಕೆಯಾಗಿದ್ದಾರೆ. ಬೈದ್ಯನಾಥ ಗೆಲುವು ನಿರೀಕ್ಷಿತ ಗೆಲುವಾಗಿತ್ತು. ಒಟ್ಟು 81 ಶಾಸಕರು ಮತ ಚಲಾಯಿಸಿದ್ದು, ಮೂರು ಮತಗಳು ಅಮಾನ್ಯವಾಗಿದ್ದವು. ನಥವಾನಿ 30 ಮತಗಳನ್ನು ಪಡೆದಿದ್ದರೂ, ಎರಡು ಮತಗಳು ಅಮಾನ್ಯಗೊಂಡಿದ್ದರಿಂದ ಅವರ ಮತಗಳ ಸಂಖ್ಯೆ 28ಕ್ಕೆ ಇಳಿದಿದ್ದವು. ಮಿಜೋರಾಂನಲ್ಲಿ ಝೋರಮ್ ಪೀಪಲ್ಸ್ ಮೂವ್‌ಮೆಂಟ್ (ಜೆಪಿಎಂ) ಅಭ್ಯರ್ಥಿ ಕೆ.ಲಾಲ್ಬಿಯಾಂಗ್‌ಕಿಮಾ 36 ಚಲಾಯಿತ ಮತಗಳಲ್ಲಿ 26 ಮತಗಳನ್ನು ಪಡೆದು ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಜೆಪಿಎಂ ಎನ್‌ಡಿಎ ಬೆಂಬಲಿತ ಪ್ರಾದೇಶಿಕ ಪಕ್ಷವಾಗಿದೆ. ರಾಜ್ಯಸಭೆಯಲ್ಲಿ 2/3 ಬಹುಮತ (164 ಸ್ಥಾನ) ಪಡೆಯುವ ಗುರಿಯನ್ನು ಎನ್‌ಡಿಎ ಸಮೀಪಿಸುತ್ತಿದೆ.

### ವಿಪಕ್ಷ ನಾಯಕನ ಆಯ್ಕೆ ಪ್ರಕ್ರಿಯೆ ತಡೆಗೆ ಹೈ ನಕಾರ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭೆಯ ಸ್ಪೀಕರ್ ರಥೀಂದ್ರ ಬೋಸ್, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಭಿನ್ನಮತೀಯ ಬಣದ ಶಾಸಕ ರಿತಬ್ರತ ಬ್ಯಾನರ್ಜಿ ಅವರನ್ನು ವಿರೋಧ ಪಕ್ಷದ ನಾಯಕರನ್ನಾಗಿ (ಎಲ್‌ಒಪಿ) ನೇಮಕ ಮಾಡಿದ ನಿರ್ಧಾರಕ್ಕೆ ಮಧ್ಯಂತರ ತಡೆಯಾಜ್ಞೆ ನೀಡಲು ಕಲ್ಕತ್ತಾ ಹೈಕೋರ್ಟ್ ಗುರುವಾರ ನಿರಾಕರಿಸಿದೆ. ತಮ್ಮ ನಾಮನಿರ್ದೇಶನ ತಿರಸ್ಕಾರ ಮತ್ತು ಬ್ಯಾನರ್ಜಿ ನೇಮಕವನ್ನು ಪ್ರಶ್ನಿಸಿ ಟಿಎಂಸಿ ಶಾಸಕ ಶೋಭಂದೇಬ್ ಚಟ್ಟೋಪಾಧ್ಯಾಯ ಸಲ್ಲಿಸಿದ್ದ ಅರ್ಜಿಯ ಮಧ್ಯಂತರ ಪರಿಹಾರವನ್ನು ನ್ಯಾಯಮೂರ್ತಿ ಕೃಷ್ಣ ರಾವ್ ತಿರಸ್ಕರಿಸಿದ್ದಾರೆ. ಅಲ್ಲದೆ, ಈ ಪ್ರಕರಣದ ಮುಂದಿನ ವಿಚಾರಣೆಯನ್ನು ಜು.28 ಕ್ಕೆ ನಿಗದಿಪಡಿಸಿದ್ದಾರೆ. ರಾಜ್ಯ ವಿಧಾನಸಭೆಯ ಬಜೆಟ್ ಅಧಿವೇಶನ ಗುರುವಾರದಿಂದ ಆರಂಭವಾಗಿದ್ದು, ಜೂ.25ರಂದು ಮುಕ್ತಾಯಗೊಳ್ಳಲಿದೆ. ಸ್ಪೀಕರ್ ಬ್ಯಾನರ್ಜಿ ಅವರನ್ನು ಎಲ್‌ಒಪಿ ಆಗಿ, ಜಾವೇದ್ ಖಾನ್, ಸಂದೀಪನ್ ಸಹಾ, ಸಬೀನಾ ಯಾಸ್ಮಿನ್ ಮತ್ತು ಸಿಯುಲಿ ಸಹಾರನ್ನು ಉಪನಾಯಕರನ್ನಾಗಿ ಹಾಗೂ ಅಮ್ರುಜ್ಜಮಾನ್‌ರನ್ನು ಮುಖ್ಯ ಸಚೇತಕರನ್ನಾಗಿ ಅನುಮೋದಿಸಿದ್ದಾರೆ.

### ಕೆಲವು ಅನುಮೋದನೆ ಸಿಗುವುದು ಬಾಕಿ: ಬ್ರಹ್ಮೋಸ್ ಸಿಇಒ ಜೈತೀರ್ಥ

# ವಿಯೆಟ್ನಾಂ ಜತೆ ಬ್ರಹ್ಮೋಸ್ ರಫ್ತು ಒಪ್ಪಂದ

• **ನಾಗ್ಪುರ:** ವಿಯೆಟ್ನಾಂನೊಂದಿಗಿನ ಬಹುನಿರೀಕ್ಷಿತ ಬ್ರಹ್ಮೋಸ್ ರಫ್ತು ಒಪ್ಪಂದ ಅಂತಿಮ ಹಂತವನ್ನು ತಲುಪಿದ್ದು, ಅನುಮೋದನೆ ಸಿಗುವುದಷ್ಟೇ ಬಾಕಿ. ಬ್ರಹ್ಮೋಸ್ ಹೊಸ ಆವೃತ್ತಿಗಳ ಕೆಲಸ ಪ್ರಗತಿಯಲ್ಲಿವೆ ಎಂದು ಬ್ರಹ್ಮೋಸ್ ಏರೋಸ್ಪೇಸ್ ಸಿಇಒ ಜೈತೀರ್ಥ ಜೋಶಿ ಗುರುವಾರ ಹೇಳಿದ್ದಾರೆ. ನಾಗ್ಪುರದಲ್ಲಿ ಸೋಲಾರ್ ಇಂಡಸ್ಟ್ರೀಸ್ ಇಂಡಿಯಾ ಲಿ. ಬ್ರಹ್ಮೋಸ್ ಕ್ಷಿಪಣಿ ಯೋಜನೆಗೆ ಅಗತ್ಯದ 100ನೇ ದೇಸಿ ಬೂಸ್ಟರ್‌ಗೆ ಚಾಲನೆ ನೀಡಿ ಜೋಶಿ ಮಾತನಾಡಿದ್ದಾರೆ. ಬೂಸ್ಟರ್, ಬ್ರಹ್ಮೋಸ್ ಕ್ಷಿಪಣಿಯಲ್ಲಿ ಬಳಸುವ ಪ್ರಮುಖ ಉಪಕರಣವಾಗಿದೆ. ರಕ್ಷಣಾ ಉತ್ಪಾದನೆಯಲ್ಲಿ ಆತ್ಮನಿರ್ಭರತೆ (ಸ್ವಾವಲಂಬನೆ) ಸಾಧಿಸುವಲ್ಲಿ ಬ್ರಹ್ಮೋಸ್ ಮೈಲಿಗಲ್ಲು ಯೋಜನೆಯಾಗಿದೆ.

ಈ ಹಿಂದೆ ಬೂಸ್ಟರ್‌ಗಳನ್ನು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿದ್ದೆವು. ಈಗ ಅದನ್ನು ಭಾರತದಲ್ಲೇ ನಿರ್ಮಾಣ ಮಾಡುತ್ತಿದ್ದೇವೆ ಎಂದು ಜೋಶಿ ತಿಳಿಸಿದ್ದಾರೆ.



**ಅಂತಿಮ ಹಂತದಲ್ಲಿ ವಿಯೆಟ್ನಾಂ ಒಪ್ಪಂದ:** ವಿಯೆಟ್ನಾಂನೊಂದಿಗಿನ ಬ್ರಹ್ಮೋಸ್ ರಫ್ತು ಮಾತುಕತೆ ಬಹುತೇಕ ಅಂತಿಮ ಹಂತದಲ್ಲಿದೆ. ಒಪ್ಪಂದ ಅಂತಿಮಗೊಳ್ಳುವ ಮುನ್ನ ಕೆಲವು ಸಣ್ಣಪುಟ್ಟ ಅನುಮೋದನೆಗಳು ಸಿಗುವುದು ಬಾಕಿ ಇದೆ. ಹಲವು ಪೂರ್ವ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಮಾತುಕತೆಯನ್ನು ನಡೆಸುತ್ತಿದ್ದೇವೆ. ಬ್ರಹ್ಮೋಸ್ ಸೂಪರ್ ಸೋನಿಕ್ ಕ್ಷಿಪಣಿಯನ್ನು ಖರೀದಿಸಲು ಹಲವು ರಾಷ್ಟ್ರಗಳು ಆಸಕ್ತಿ ತೋರಿಸಿವೆ. ಒಮ್ಮೆ ಸರ್ಕಾರಗಳ ಅನುಮೋದನೆ ಸಿಕ್ಕ ನಂತರ ನಾವು ಮುಕ್ತವಾಗಿ ಘೋಷಿಸಲಿದ್ದೇವೆ ಎಂದು ಸಿಇಒ ಜೈತೀರ್ಥ ಹೇಳಿದ್ದಾರೆ.

### ಪ್ರಗತಿಯಲ್ಲಿ ಹೊಸ ಆವೃತ್ತಿಗಳ ಆವಿಷ್ಕಾರ

ಬ್ರಹ್ಮೋಸ್, ಬ್ರಹ್ಮೋಸ್ ಎನ್‌ಜಿ ರೀತಿಯಲ್ಲಿ ಬ್ರಹ್ಮೋಸ್‌ನ ಅತ್ಯಾಧುನಿಕ ಹೊಸ ಆವೃತ್ತಿಗಳ ಆವಿಷ್ಕಾರ ಪ್ರಗತಿಯಲ್ಲಿದ್ದು, ವಿನ್ಯಾಸ ಮತ್ತು ಸಿಮ್ಯುಲೇಷನ್ ಪರೀಕ್ಷೆಗಳು ನಡೆಸಿದ ಬಳಿಕ ಅಂತಿಮ ವಿಶೇಷತೆಗಳನ್ನು ನಿರ್ಧರಿಸಲು ಸಾಧ್ಯ ಎಂದು ಬ್ರಹ್ಮೋಸ್ ಮುಖ್ಯಸ್ಥ ಜೋಶಿ ತಿಳಿಸಿದ್ದಾರೆ. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮತ್ತು ಎನ್‌ಪಿಒ ಮಶಿನೋಸ್ಟ್ರೋಯೆನಿಯಾ ಜಂಟಿಯಾಗಿ ಬ್ರಹ್ಮೋಸ್ ಏರೋಸ್ಪೇಸ್ ಲಿಮಿಟೆಡ್‌ನಲ್ಲಿ ಬ್ರಹ್ಮೋಸ್ ಕ್ಷಿಪಣಿಗಳ ಉತ್ಪಾದನೆ ಮಾಡುತ್ತಿವೆ.

### 9.44ಕೋಟಿ ರೈತರ ಖಾತೆಗಳಿಗೆ 18,880 ಕೋಟಿ ರೂ.

# ಪಿಎಂ ಕಿಸಾನ್ ಕಂತು ನಾಳೆ ಜಮೆ

• **ಹೊಸದಿಲ್ಲಿ :** ಪಿಎಂ-ಕಿಸಾನ್ ಯೋಜನೆಯಲ್ಲಿ 23ನೇ ಕಂತಿನ ರೂಪದಲ್ಲಿ ಸುಮಾರು 18,880 ಕೋಟಿ ರೂ. ಮೊತ್ತವನ್ನು ದೇಶಾದ್ಯಂತದ 9.44ಕೋಟಿ ರೈತರ ಖಾತೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಜೂ.20ರಂದು ನೇರ ವರ್ಗಾವಣೆ ಮಾಡಲಿದ್ದಾರೆ. ಪ.ಬಂಗಾಳದ ಹುಗ್ಲಿ ಜಿಲ್ಲೆಗೆ ಭೇಟಿ ಸಂದರ್ಭ ಪ್ರಸ್ತುತ ಪರಿಹಾರ ನಿಧಿ ವರ್ಗಾವಣೆ ಪ್ರಕ್ರಿಯೆಯನ್ನು ಪ್ರಧಾನಿ ಮೋದಿ ನಿರ್ವಹಿಸಲಿದ್ದಾರೆ.

ಪ.ಬಂಗಾಳದಲ್ಲೇ ಸುಮಾರು 45.35ಲಕ್ಷ ರೈತರು ಪರಿಹಾರ ಕಂತುಗಳ ರೂಪದಲ್ಲಿ ಆರ್ಥಿಕ ಅಂದರೆ ಒಟ್ಟು 907ಕೋಟಿ ರೂ.ಪಡೆಯಲಿದ್ದಾರೆ. ತನ್ಮೂಲಕ ಪಿಎಂ-ಕಿಸಾನ್ ಯೋಜನೆಯಡಿ ರಾಜ್ಯದಲ್ಲಿ ಸಂಚಿತ ಪರಿಹಾರ ವಿತರಣೆ ರೂ.15,055 ಕೋಟಿ ರೂ.ಮೀರಲಿದೆ ಮತ್ತು 2019ರಲ್ಲಿ ಯೋಜನೆ ಅಸ್ತಿತ್ವಕ್ಕೆ ಬಂದ ನಂತರ ರಾಷ್ಟ್ರಾದ್ಯಂತ ರೈತರಿಗೆ ವಿತರಣೆಯಾಗಿರುವ ನೆರವಿನ ಮೊತ್ತ 4.46ಲಕ್ಷ ಕೋಟಿ ರೂ.ಮೀರಲಿದೆ. ನೇರವಾಗಿ ಪರಿಹಾರ ವರ್ಗಾವಣೆ (ಡಿಬಿಟಿ) ಮೂಲಕ ರೈತರ ಖಾತೆಗಳಿಗೆ ನಿಧಿಯನ್ನು ವರ್ಗಾಯಿಸಲಾಗುವುದು ,ತನ್ಮೂಲಕ ಸಣ್ಣ ಹಾಗೂ ಮಧ್ಯಮ ರೈತರ ಆದಾಯ ಭದ್ರತೆಯ ಬಲವರ್ಧನೆಗೆ ಸರಕಾರ ನೆರವಾಗಲಿದೆ ಎಂದು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

**ಫಸಲ್ ಬಿಮಾ ಯೋಜನೆಗೆ ಚಾಲನೆ:** ಒಟ್ಟು 12,200ಕೋಟಿ ರೂ.ಅಂದಾಜು ವೆಚ್ಚದ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಮತ್ತು ಪುನಾರಚಿತ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಗಳಿಗೂ ಪ್ರಧಾನಿ ಮೋದಿ ಬಂಗಾಳದಲ್ಲಿ ಚಾಲನೆ ನೀಡಲಿದ್ದಾರೆ.2026-27ರಲ್ಲಿ ಸುಮಾರು 30ಲಕ್ಷ ಹೆಕ್ಟೇರ್ ವ್ಯಾಪ್ತಿಯ 1.10ಕೋಟಿ ರೈತರಿಗೆ ಬೆಳೆ ವಿಮಾ ಯೋಜನೆಯ ಪ್ರಯೋಜನ ವಿಸ್ತರಿಸುವುದು ಸರಕಾರದ ಗುರಿ. ತನ್ಮೂಲಕ ಸುಮಾರು 28,140 ಕೋಟಿ ಮೌಲ್ಯದ ಬೆಳೆಗಳು ಫಸಲ್ ಬಿಮಾ ಯೋಜನೆ ವ್ಯಾಪ್ತಿಗೆ ಒಳಪಡಲಿವೆ.

**ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್:** ಡಿಜಿಟಲ್ ಅಗ್ರಿಕಲ್ಚರ್ ಮಿಷನ್‌ನಲ್ಲಿ ರಸಗೊಬ್ಬರ ವಿತರಣೆ, ಕಿಸಾನ್ ಕ್ರೆಡಿಟ್ ಕಾರ್ಡ್‌ಗಳು, ಡಿಜಿಟಲ್ ಸೇವೆಗಳು ಮತ್ತು ಎಂಎಸ್‌ಪಿ ಆಧಾರಿತ ಸರ್ಕಾರಿ ಖರೀದಿಗಳಿಗೆ ಪೂರಕ ಸಮಗ್ರ ಕೃಷಿ-ತಂತ್ರಜ್ಞಾನ ವೇದಿಕೆಗೆ ಪ್ರಧಾನಿ ಮೋದಿ ಚಾಲನೆ ನೀಡಲಿದ್ದಾರೆ. ರಾಷ್ಟ್ರೀಯ ನೈಸರ್ಗಿಕ ಕೃಷಿ ಮಿಷನ್‌ಗೆ ಪ್ರಧಾನಿ ಮೋದಿ ಚಾಲನೆ ನೀಡುವರು. ಇದರಲ್ಲಿ 2026-27ರಲ್ಲಿ ಪ.ಬಂಗಾಳದ ಸುಮಾರು 17,300ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 346 ನೈಸರ್ಗಿಕ ಕೃಷಿ ಕ್ಲಸ್ಟರ್‌ಗಳನ್ನು ತೆರೆಯಲಾಗುವುದು.

## DOCUMENTS LOST

I, **Poornima Manjunath** W/O Late Manjunath, aged about 38 Years, R/at: No.5/6, Goudeshwaran Kovil, Kelamangalam, Denkanikotta Taluk, Krishnagiri District - 635 113. Do hereby declare that I have lost the original Sale deed an extent of 630 sq. feets in sy no.6/1A/1A/1A/4 of Hosur Revenue Village, Hosur Taluk, which is registered at Hosur Sub-registrar office the document bearing No.2760/1979 dated 09.08.1979. The original document is in my custody but it was lost on 06/06/2026 at Anekal bus stand, Bangalore District. Inspite of best efforts I could not trace the same in this regard I had lodged police complaint on 09.06.2026 at Anekal police station vide Anekal C.Mis No.330/2026. If anybody finds the above said document or is in possession, please hand over the same to the above said address or contact **8792498072**.

## CHANGE OF NAME

I, **KRISHNA CHAITANYA DEVESH SAXENA KASHYAP**, S/o Devesh Saxena, age 23 years, R/o #525/3, 6th Main, Vasanthapura, Maruthi Layout, Uttarahalli Main Road, Bengaluru South, Bengaluru 560 061 do hereby declare that I have changed my name from **KRISHNA CHAITANYA** to **KRISHNA CHAITANYA DEVESH SAXENA KASHYAP**, henceforth I shall be known and called as **KRISHNA CHAITANYA DEVESH SAXENA KASHYAP** for all purposes, vide affidavit dated 17th June 2026, sworn before Advocate and Notary **B.R. SHASHIKALA** at Bangalore.

## PUBLIC NOTICE

The General Public is hereby notified that Sri Manjunatha S. C/o Subramani, residing at # 133, Tarabalu Sector, VTC : Adde Vishwanathapura, PO : Arakere, Sub-District : Bangalore North, District : Bangalore, State : Karnataka, PIN code : 561203, is the owner of the Schedule Property described infra.

It is noticed that original sale deed dated 22.06.2023 (doc.no.3062/2023-24) pertaining to the schedule property is lost / misplaced. In this connection, an E-Complaint has been lodged on 18.06.2026 at Bangalore City Police Station, Bangalore, bearing Serial no.2261816.

The finder of the said document is requested to surrender the original sale deed dated 22.06.2023 (doc.no.3062/2023-24) to the undersigned within 10 days from this day, failing which, it shall be deemed that the sale deed is irretrievably lost and duplicate / certified copy of the same shall be obtained from the office of Sub-registrar of Assurances in lieu of lost original for the purpose of records.

**SCHEDULE PROPERTY**

All that piece and parcel of property bearing site no.53, measuring East to West : (15.24 + 15.25)/2 Mtrs., and North to South : (9.53 + 10.20)/2 Mtrs., in all measuring 150.29 Sq. Mtrs., carved out of converted land bearing Sy.no.22/9, measuring 18 guntas, situated at Yellupura Village, Kasaba Hobli, Doddaballapura Taluk, Bangalore Rural District, vide conversion order bearing no.238138, dated 11.06.2021, property bearing old Katha no.103/53, New Katha no.103/53, Registrar no.2771827 & Property no.2474806208, ward no.7 and bounded as follows, on the East by: Road, West by: Site no.32, North by : Site no.52, South by: Private property.

**Vanilla**, Advocate
No.520, III Floor, Prabhat Complex,
K.G Road, Bangalore-560 009.
Ph - 41247862 & 41224958
Bangalore Date :18.06.2026

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದೇವನಹಳ್ಳಿ
ಓ.ಎಸ್. ನಂ: 18/2026

[illegible]

## IN THE COURT OF THE PRL. CIVIL JUDGE AND JMFC, AT ANEKAL
### C.Mis. No. 967/2026

**BETWEEN: SMT NAGARATHNAMMA** & Others ...**PETITIONERS**
**AND: THE TAHSILDAR**, Anekal Taluk, Anekal ... **RESPONDENT**

**PUBLIC NOTICE**

The 1st petitioner's grandfather MUNIVENKATAPPA S/o LATE HANUMANTHAPPA was died on 08/07/1971 at Kugur Village, Sarjapura Hobli, Anekal Taluk, Bengaluru District, leaving behind his grand children and great grandchildren by name 1.SMT. NAGARATHNAMMA, 2. SRI.MUNIRAJAPPA, 3.SMT.GAYATHRI, 4.SMT.S.MANJULA, 5.SRI.GOPALAKRISHNA S they are the legal heirs of deceased Munivenkatappa and they are jointly filed this petition for obtaining death certificate of deceased Munivenkatappa in favour of petitioners. Hence the petitioners have made a petition before the Hon'ble Court under section 13(3) of the Karnataka Registration of Birth and death Act 1969 read with rule 10(3) of the Karnataka Registration of Birth and Death Rules 1970 and praying for pleased to direct to THE TAHASILDAR, Anekal Taluk, for issue death certificate of the MUNIVENKATAPPA S/O LATE HANUMANTHAPPA.

1. Interested parties are hereby warned to appear in this court in person or by a pleader duly instructed on **25-07-2026** at 11:00 AM, in forenoon to show cause against the petition filing where in the matter will be heard and disposed off.

Given my hand and seal of this court on 18-06-2026.

By order of the court, Sheristedar, Civil Judge Jr Dvn and JMFC Court at Anekal.

**Sri. T.A. NAGABHUSHANA GOWDA**, Advocate, No.3, 2nd Floor, Dharmadeepthi Building, Sharadamma Layout, Attibele Road, Anekal, Bengaluru-562106.

## BEFORE THE MOTOR ACCIDENT CLAIMS TRIBUNAL AT BANGALORE (SCCH-13)
### MVC NO.353/2026

**BETWEEN: Mr. Chalapathi**...**Petitioner** -V/s-
**AND: M/S Zeeplus Fleet, Management Pvt Ltd** & Another's ...**Respondents**

**NOTICE FOR FIRST RESPONDENT**

**To, M/S Zeeplus Fleet Management Pvt Ltd**, Rep by proprietor/Manager, R/at no.09, Subbaiah lane, Airport Road, Murugeshpalya, Bengaluru Urban, Bengaluru- 560 017.

Take notice that the petitioners above named has filed the above case against you seeking compensation of Rs.25,00,000/-Due to the injuries sustained by petitioner in the accident involving the car bearing registration no. KA-05-AN-2735. That on 06.12.2025 at about 8.30 p.m, the claimant was riding his motorcycle bearing registration no.KA-53-HF-9427, Near Nagasandra metro station, NH-4 Tumakuru service Road, Bengaluru City, at that time, Driver of car bearing registration no.KA-05-AN-2735 drove the said Vehicle at a very high speed in a rash and negligent manner and endangering human life and dashed against the Claimant motorcycle. On the file of the Motor Accident Claims Tribunal (SCCH-13).

Take notice that the above case MVC No.353/2026 stands posted to on **06/07/2026** at **11.00 AM** for your appearance before the Hon'ble Motor Accident Claims Tribunal at Bengaluru, (SCCH-13), failing which the above matter will be decided exparte.

Given under my hand and seal of the court on this 05/06/2026

By order of the Court, Assistant Registrar, Court of Small Causes, Bengaluru.

**B H & B H ASSOCIATES**
**B.H. CHIKKANNA, B.H. VASANTHEGOWDA**, Advocates

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದೇವನಹಳ್ಳಿ
ಓ.ಎಸ್. ನಂ. 94/2026

[illegible]

## BEFORE THE MOTOR ACCIDENT CLAIMS TRIBUNAL AT BANGALURU (SCCH-15)
### M.V.C. No. 4619/2025

**BETWEEN : Iranna Danannavar @ Eranna Basappa** ...**Petitioner/s**
**AND : The Branch Manager Reliance General Ins. Co.Ltd. And another.** ...**Respondent/s**

**NOTICE TO THE RESPONDENT No. 02**

**Lokesha K.R**, S/o Ramanna, R/at: Kadaramanahalli (v) Hutridurga (H) Kunigal (T) Tumkur (D) - 572 126. Mob - 6361883918.

**Also at** No. 19/2, 5th Main Road, Maruthinagar, Kamakshipalya, Bengaluru North - 560 079. (Owner of the Auto Ricksha Reg. No. KA-02-AF-4778)

WHEREAS the above-named Petitioner has filed the claim petition claiming of Rs. 15,00,000/- (Fifteen Lakhs only) on the account for the injury of Iranna Danannavar @ Eranna Basappa, Petitioner in a road traffic accident at about 10.30 PM on 22.11.2024 at APMC Yard Road, Towards Ullasa Takis Road, Near Marappanapalya Junction Bengaluru. Offending by your vehicle Auto No. KA-02-AF-4778, the owner Respondent No. 02 is hereby direct to appear before the Hon'ble Tribunal (SCCH-15) Court of Small Causes at Bengaluru City, in person or through the pleader **on 24.07.2026** failing which the matter will be heard to Ex-parte and case will be disposed off in accordance with law.

Given under my hand and seal of this Court on 18.6.2026.

**By order of the Court, Assistant Registrar, Court of Small Causes, Bangalore.**

Advocate for Petitioners: **Vasanth K.**, Advocate
# 68/6, 1st Floor, Kilari Road, Near Shanthoshimata Temple, Bengaluru-560 053.

## IN THE COURT OF THE MOTOR ACCIDENT CLAIMS TRIBUNAL AT BANGALORE (SCCH-15)
### M.V.C. No. 6023 OF 2024

**Between : SUNITHA DEVI** ...**Petitioner**
**And : CHOLA MS GEN INS CO LTD** and Another ...**Respondents**

**NOTICE TO THE RESPONDENT No. 1**

**Mr. Yennam Praharsha Sandeep Raj**, Major, Residing at No 14, 1st Floor, 1st Main, 2nd Phase, 29th Cross, Vikas Layout, Maruthi Nagar Behind SS Brindavan APT, Yelahanka, Bangalore, Karnataka 560064. (RC Owner of two wheeler Bearing Reg. No. KA-50-EF-6381)

Whereas, the above claim petition is filed by the Petitioner against you for seeking compensation for a sum of Rs.25,00,000/- on account of the injuries sustained by the Petitioner in the Road Traffic Accident that occurred on 22/03/2024 at 8.20 A M Near KESAT School, Hosahalli, Bangalore Post, Bangalore City. Your two wheeler bearing Reg No. KA-50-EF-6381 involved in the accident.

1. You are hereby summoned to appear in this court in person or pleader duly instructed **on 20.07.2026 at 11-00 AM** to answer the claim petition.

Take notice that in default of your appearance on the said date the same will be heard and determined in your absence.

Given under my hand and seal of the court on 17.06.2026.

**By Order of the Court, Assistant Registrar, Court of Small Causes, Bangalore.**

ADVOCATE FOR PETITIONERS :
**ASHOK KM**, Advocate
No. 39/2, ASVW Bhavan, K.G Road
Bangalore 560009. Mob. : 9611143083

## PUBLIC NOTICE

The Public at large is hereby informed that our client intends to rectify his name as below mentioned in his Aadhaar Card.

**M.NADARAJAN S/O MARGAPALLAI**, which is my name hereafter wards in lieu of the name of **NATARAJAN M**

If any Person's, Financial Institution's, Bank/s, or any Statutory Body/ies having any objections to this intended rectify his name as **M.NADARAJAN S/O MARGAPALLAI** may lodge their objections within 10 days from this day to the undersigned failing which our client will proceed with the aforesaid name as if no one has any objection or claim in respect his name. Any objection lodged thereafter shall not be binding on my client.

**SNR ASSOCIATES**,
Advocates, Flat No.402, Fourth Floor, "SP Infra", Amani Doddakere, Near Hoskote Toll Plaza, Bangalore – 562114.
**Ph.9740951235/9845021483**

## IN THE COURT OF THE IV ADDL. SENIOR CIVIL JUDGE BANGALORE RURAL DISTRICT AT BANGALORE
### O.S. No. 1411/2025

**Between: Smt. Rajeshwari**, Daughter of late Shobha, Wife of Ramesh, aged about 37 years, R/at No.24, Gundappa Road, Nagashettihalli, Bangalore- 560 094 ...**Plaintiff**

**And: Smt. Muniyellamma** and others ...**Defendants**

**SUMMONS/ TO DEFENDANT No. 2 to 7.**

**To, 2. Smt. Banashankaramma**, Daughter of late Narayanappa, Wife of late Byatag Bavi, aged about 65 years, R/at No.55, Kanakapura Main Road, Pattareddy palya, Kaggalipura, Bangalore- 560 082, **3. Smt. Jayamma**, Daughter of late Narayanappa, Wife of Chikkabommaiah, aged about 62 years, R/at. Kanakapura Main Road, Pattareddy palya Kaggalipura, Bangalore- 560 082, **4. Smt. Rukkamma**, Daughter of late Narayanappa, Wife of Muniramaiah, aged about 60 years, R/at No. 13, 1st main Road, Near Govt School, Shamapura, AC post, Bangalore- 560 045, **5. Smt. Lakshmi**, Wife of late Narayanaswamy, aged about 42 years, **6. Ms. Tejeswini**, Daughter of late Narayanaswamy, aged about 20 years, **7. Mr. Manu**, Son of late Narayanaswamy, aged about 18 years, Sl. No.5 to 7 are residing at, No.481, 2nd Cross, 5th main, MES Road, Bahubalinagar, Jalahalli, Bangalore- 560 013

WHEREAS, the plaintiff has filed the above suit against the defendants for partition and declaration and other relief. The defendant No. 2 to 7 above named is hereby directed to appear before this Hon'ble Court, either in person or through the pleader on **11/08/2026** at **11:00 AM** to defend the above case, failing which the matter will be heard ex-parte.

**SCHEDULE**

**Item No. 1**: All that piece and parcel of the land bearing Sy. No.45/3, measuring 0-14 guntas, situated at Kaggalipura village, Uttarahalli Hobli, Bangalore South Taluk and bounded on **East by**: Land bearing Sy. No.45/4, **West by**: Land bearing Sy. No.45/2, **North by**: Land bearing Sy. No.44, **South by**: Private property

**Item No.2**: All that piece and parcel of the land bearing Sy. No.45/5, measuring 0-27 guntas, situated at Kaggalipura village, Uttarahalli Hobli, Bangalore South Taluk and bounded on: **East by**: Private property, **West by**: Land bearing Sy. No.45/1, **North by**: Land bearing Sy. No.44, **South by**: Private property

Given under my hand and seal of the Court, on this 18/06/2026

By order of the Court, Chief Ministerial Officer, Senior Civil Judge Court, Bengaluru Rural District, Bengaluru

Advocate for Plaintiff: **K.V. Venkatesh Lingaraju K.M**
No.4, 1st floor, CBI Main Road, Vasanthappa Block, Ganganagar, Bangalore- 560 032

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದೇವನಹಳ್ಳಿ
ಓ.ಎಸ್. ನಂ. 88/2026

[illegible]

ಹಿರಿಯ ಸಿವಿಲ್ ನ್ಯಾಯಾಧೀಶರು / ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಓ.ಎಸ್. ನಂ 414/2026

[illegible]

## IN THE COURT OF THE CITY CIVIL JUDGE, AT BENGALURU
### P & SC. No. 30 /2026

**BETWEEN: Sri. Ravichandra G.** S/o. Late N. Guruappa, Aged about 45 years, R/at House No.1/2, Ganapathi Temple Road, Arehalli, Subramanyapura Post, Bengaluru-560 061 ... **PETITIONER**

**AND: NIL ... RESPONDENT**

**PUBLIC NOTICE**

Whereas the above Petitioner has filed the P & SC. Petition under section 276 of Indian Succession Act before this Hon'ble Court the Petitioners have filed the above petition for grant issuance of probate/ succession certificate in favour of the Petitioner and grant such other relief/s Petitioners is right over the petition Schedule Property morefully described in the petition.

If anybody interested in the matter are hereby called up to appear in person or through advocate at 11:00 AM inform on **15-07-2026** in the above court and participate in the proceedings, if not, the case will be heard and disposed off ex-parte.

**SCHEDULE PROPERTIES**

**Item No.1**: All that piece and parcel of Land bearing Sy.No.28, measuring 1 Acre, Situated at Arehalli Village, Uttarahalli-4, Bengaluru South Taluk and bounded on: East by: Government Land, West by: Government Land, North by: Iyyappa's Land, South by: Venkatappa's Land and Government Road.

**Item No.2**: All that piece and parcel of Western Half Portion of Property No.40, BBMP Khatha No.98/82/79, Situated at Arehalli Village, Uttarahalli Hobli, Bengaluru South Taluk, presently comes under the Limits of Bruhath Bengaluru Mahanagara Palike, measuring East to West: 20 Feet, North to South: 47 Feet, totally measuring 940 Square Feet and bounded on: - East by: Remaining Eastern Portion of same number, West by : Site belongs to Veerappa, North by: Road, South by : Inamthi Land.

Given under my hand and the seal of this court on 17-06-2026.

By order of the court, Senior Sheristedar, City Civil Court at Bangalore.

**D. NAGARAJA**, Advocate
Office at No.1, Corporation, Shopping Complex, Tank Bund Road, Subhashanagar, Bangalore-560009.
Mob No: 9845010226

## IN THE COURT OF THE XXVIII ADDITIONAL CITY CIVIL AND SESSIONS JUDGE AT BANGALORE
### O.S. No. 25004/2026 (CCH-29)

**BETWEEN: Sri. Sagaya Vinod Kumar ... PLAINTIFF** -V/s-

**AND: Smt. P. Shanmuga Priya** and another... **DEFENDANTS**

**NOTICE TO DEFENDANTS**

**1. SMT. P. SHANMUGA PRIYA**, Aged about 44 years, Daughter of M. Pitchiah, Wife of Sri. P. Thirumalai, Residing at No. 4/44, Pandi Kovil Street, Ward No. 17, Usilimpatty, Madurai District, Tamil Nadu. Represented by her father and GPA Holder

**2. SRI. M. PITCHIAH**, Aged about 73 years, Son of Late M. Mottiyan, Residing at No. 4/44, Pandi Kovil Street, Ward No. 17, Usilimpatty, Madurai District, Tamil Nadu.

Whereas the plaintiffs have filed suit for specific performance of the contract against defendants.

You are hereby summoned to appear before CCH - 29 XXVIII Additional City Civil and Sessions Judge at Bangalore in person or by pleader duly instructed on dated on **02-07-2026** at 11:00 A.M. to answer the same failing which the suit will be heard and determined Ex-parte.

**SCHEDULE OF PROPERTY**

All that piece and parcel of the immovable property comprising of land together with a small shed in Southern Portion of Site No. 416/A, New P.I.D No. 115-W0226-9/1-1, (Portion of Property Old No. 3/8), situated at Vivek Nagar Layout, formerly Sonnenahalli Layout, Bruhat Bangalore Mahanagara Palike Old Ward No. 71, New Ward No. 115, Bangalore, Measuring East to West: 60 Sixty feet ) and North to South: 40 ( Forty Feet) totally measuring 2400 Square Feet, together with 2 Squares of shed therein, with all rights, appurtenances whatsoever whether underneath or above the surface. And bounded on : East by : Road, West by : Site No. 240 D & E, North by: Remaining Property of No. 416/A, South by : Site No. 398 and 397.

Given under my hand and seal of the court on 12-06-2026.

By order of the court, Deputy Registrar, City Civil Court, Mayo Hall Unit, Bangalore.

**Sri N. GHOPAL**, Advocate
Office situated at No.1, Bowee lane 'A' Street, Askoknagar, Bangalore-560025.

## IN THE COURT OF THE 5TH ADDL DISTRICT AND SESSION JUDGE AT TIPTUR
### P & SC.NO:10025/2026

**PETITIONER: Palakshaiah** S/o Halappa, aged about 69 years, r/o Chikkamalligere village, Mayasandra Hobli, Turuvekere Taluk, Tumkur District.

V/s

**RESPONDENTS: NIL**

**PAPER PUBLICATION**

That the pettitioner has filed the above petition for obtaining Probate for the will dated 18.06.1974 executed by Thimmappagowda S/o Girithimmegowda in favour of pettitoner, who died on 10.12.1978. The case is posted for hearing on 29.06.2026 at 11.00 A.M. If any body has any objection or interest, in this behalf, they may come personally or through their Advocates before this Hon'ble court. Otherwise, the case will be decided one sided.

**SCHEDULE**

Lands situated at Chikkamalligere village, Mayasandra Hobli, Turuvekere Taluk, Tumkur District bearing

1. Sy.No.53/2, measuring 1.02gts bounded on East: land of Lokesh S/o Shivanna West: land of Shivanargaiah North: land of Palakshaiah ( Pettitoner) and South: land of Palakshaiah (pettitoner)
2. Sy.No.54/7, measuring 0.10gts bounded on East: land of Thimmegowda West: land of Thimmegowda North: land of Basavanna and South: land of Lokesh.
3. Sy.No.54/4, measuring 0.17gts bounded on East: land of Mahalingappa West: land of Rajanna North: land of Muniyappa & and South: land of Mahalingappa.

Given under my hand and seal of the court on the 11th day of June 2026

**By the order of the court**
**SHERISTEDAR, V Addl. Dist. & Sessions Judge Court, Tiptur**

Advocates:
**HP Mahalingappa, Bhanuprakash**
Advocates, Tiptur,
Tiptur, Date: 11.06.2026

## ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಜಂಟಿ ನಿರ್ದೇಶಕರ ಕಛೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ,
ಕೊಠಡಿ ಸಂ: 203, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ,
ಕುಂದಾಣ ಹೋಬಳಿ, ದೇವನಹಳ್ಳಿ-ದೊಡ್ಡಬಳ್ಳಾಪುರ ಮುಖ್ಯರಸ್ತೆ,
ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಜಕೈಕೇ/ಬೆಂಗ್ರಾ/ಆಡೀ/ವಾಹನ ಬಾಡಿಗೆ/2026–27 ದಿನಾಂಕ: 17.06.2026

### ದರಪಟ್ಟಿ ಆಹ್ವಾನ ಪ್ರಕಟಣೆ

ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಕಛೇರಿಯ ಉಪಯೋಗಕ್ಕಾಗಿ ಮಾಸಿಕ ಬಾಡಿಗೆ ಆಧಾರದ ಮೇಲೆ ಉಲ್ಲೇಖಿತ ಸರ್ಕಾರದ ಆದೇಶದನ್ವಯ ವಾಹನ ಸೇವೆಯನ್ನು ಒದಗಿಸಲು ಟೂರ್ಸ್ ಅಂಡ್ ಟ್ರಾವೆಲ್ಸ್ ರವರಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳವರು ಕಛೇರಿಗೆ ಸಂಪರ್ಕಿಸಿ ಅರ್ಜಿಯ ನಿಗದಿತ ಶುಲ್ಕ ರೂ.500/– ಗಳನ್ನು ಪಾವತಿಸಿ ಪಡೆಯತಕ್ಕದ್ದು, ಅತ್ಯಂತ ಕಡಿಮೆ ಮಾಸಿಕ ದರಪಟ್ಟಿಯನ್ನು (ಎಲ್ಲಾ ತೆರಿಗೆಗಳು ಮತ್ತು ಜಿ.ಎಸ್.ಟಿ ಹೊರತುಪಡಿಸಿ) ದಿನಾಂಕ: 25–06–2026 ಸಂಜೆ 5.30 ರೊಳಗಾಗಿ ಈ ಕಛೇರಿಗೆ ಸಲ್ಲಿಸುವುದು. ತದನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಜಂಟಿ ನಿರ್ದೇಶಕರು,
ಜಿಲ್ಲಾ ಕೈಗಾರಿಕಾ ಕೇಂದ್ರ,
ಬೆಂಗಳೂರು ಗ್ರಾಮಾಂತರ ಜಿಲ್ಲೆ

DIPR/CP/SMCL/1222/2026-27

## ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಛೇರಿ,
ಬೊಮ್ಮನಹಳ್ಳಿ ವಲಯ–2, ಬೆಂಗಳೂರು–560 068.

ಸಂಖ್ಯೆ: ಬೆಂದನಪಾ(ಬೊಮ್ಮ)/ಟೆಂಡರ್/ಪ್ರ/02/2026–27 ದಿನಾಂಕ: 18–06–2026

### ಅಲ್ಪಾವಧಿ ಟೆಂಡರ್ ಪ್ರಕಟಣೆ (ಐಎಫ್‌ಬಿ) (ಬ್ಲ ಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್ https://kppp.karnataka.gov.in

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಬೊಮ್ಮನಹಳ್ಳಿ ವಲಯ, (ಈ ದಾಖಲಾತಿಗಳಲ್ಲಿ ಉದ್ಯೋಗದಾತರು ಎಂದು ಹಿಡಲಾಗಿದೆ) ರವರು ಕೆಟಿಪಿಪಿ ನಿಯಮಗಳು 2000 ರ ಅನುಸಾರವಾಗಿ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲಾಗಿರುವ ಅರ್ಹ ಮತ್ತು ಅನುಭವಿ ವ್ಯಕ್ತಿಗಳು / ಏಜೆನ್ಸಿಗಳು / ಸಂಸ್ಥೆಗಳಿಂದ (ಈ ದಾಖಲಾತಿಗಳಲ್ಲಿ ಗುತ್ತಿಗೆದಾರರೆಂದು ಹಿಡಲಾಗಿದೆ) ಉದ್ಯಾನವನಗಳ ಭೂದೃಶ್ಯ ಅಭಿವೃದ್ಧಿಗಾಗಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕೆಲಸದ ಹೆಸರು / ಮೊತ್ತ |
|---|---|
| 1. | ಬೊಮ್ಮನಹಳ್ಳಿ ವಲಯ ಉದ್ಯಾನವನಗಳಲ್ಲಿ ಭೂದೃಶ್ಯ ಅಭಿವೃದ್ಧಿ ಮತ್ತು ಬೋರ್‌ವೆಲ್ ... ಸಿವಿಲ್ ಕಾಮಗಾರಿಗಳು (ಇತರೆ) ಅಂದಾಜು ಮೊತ್ತ (ಲಕ್ಷ ರೂಗಳಲ್ಲಿ): 200.00, ಇಎಂಡಿ (ರೂಗಳಲ್ಲಿ): 3,00,000/– |

**ಟೆಂಡರ್‌ನ ಕಾರ್ಯಸೂಚಿ:** 1. ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡುವ ದಿನಾಂಕ: 19–06–2026 ರಿಂದ. 2. ಪೂರ್ವ ಬಿಡ್ ಸಭೆಯು ದಿನಾಂಕ: 20–06–2026 ರ ಬೆಳಗ್ಗೆ 11:30 ಗಂಟೆಗೆ ನಡೆಸಲಾಗುವುದು. 3. ಟೆಂಡರ್ ಕೊನೆಯ ದಿನಾಂಕ: 25–06–2026ರ ಸಂಜೆ 4.00 ಗಂಟೆಗೆ. 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 29–06–2026 ರ ಸಂಜೆ 4.30 ಗಂಟೆಗೆ. 5. ಆರ್ಥಿಕ ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯ ನಂತರ.

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು,
ಬೊಮ್ಮನಹಳ್ಳಿ ವಲಯ, ಬೆಂಗಳೂರು.

## ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ
## University of Visvesvaraya College of Engineering

ಕೆ.ಆರ್.ವೃತ್ತ, ಬೆಂಗಳೂರು – 560 001

No. UVCE/Consultant/Paper Noti./2026-27/274 **Date** : 16.06.2026

### RECRUITMENT

University of Visvesvaraya College of Engineering is looking to **engage Procurement Executives for a period of 3 months**. The engagement is purely temporary. University reserves the right to cancel/modify the notification without assigning any reason.

**Procurement Executive:** (2 numbers)

**Compensation:** Rs.65,000/- month

**Minimum Qualification and Experience:** Master's degree from a recognised University with minimum 55%

**Experience:** Minimum proven experience of 3 years of procurement on GeM, KPPP portals in addition to local tenders with sound knowledge in procurement rules of Government of Karnataka. Proficiency in Tally and MS Office is mandatory.

**Duration:** Three Months

Interested persons may apply on the prescribed format available on the university website **https://uvce.karnataka.gov.in/** within 10 days from the date of publication of this advertisement.

Sd/- **Registrar**
University of Visvesvaraya College of Engineering

DIPR/CP/1216SA/2026-27

## ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಿ.ಎ. ನಿವೇಶನ ಖಾತೆ ನಂ.31–511–371, ವಾರ್ಡ್ ನಂ.20, ಅಂದಾಜ ಲೇಔಟ್, ಶೆಟ್ಟಿಗೆರೆಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ,
ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/27/2026–27/802 ದಿನಾಂಕ: 18.06.2026

### ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ–ಗು | ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ | ಬದಲಾವಣೆ ಕೋರಿರುವ ಭೂಉಪಯೋಗ |
|---|---|---|---|---|---|---|---|---|
| 1. | ಶ್ರೀ ಪ್ರವೀಣ್ ಕುಮಾರ್ ರೋಡಂ ಬಿನ್ ಸುರೇಂದ್ರ ಬಾಬು ರೋಡಂ | ದೇವನಹಳ್ಳಿ | ಕುಂದಾಣ | ವೆಂಕಟಾಪುರ | 12/3 | 1–11 | ವ್ಯವಸಾಯ | ವಸತಿ |

**ಷರಾ:** ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು, ಸದರಿ ಜಮೀನಿನ ಪರಿಸರದಲ್ಲಿ ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನಿನ ಪರಿಸರದಲ್ಲಿ ವಸತಿ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಸತಿ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಸತಿ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ ಅಲ್ಲದೇ, ಪ್ರಸ್ತಾಪಿತ ಜಮೀನಿನಲ್ಲಿ ವಸತಿ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಕ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನನ್ನು ವ್ಯವಸಾಯ ಭೂಉಪಯೋಗ ವಲಯ ದಿಂದ ವಸತಿ ಭೂಉಪಯೋಗ ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಆಇ/ಸಿಪಿ/ಡಿ/1227/2026–27

## ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ : 1907

ಆಡಳಿತ ಕಛೇರಿ: ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18
ಫೋನ್: 26678572 : 26600512 : 26609066 : ಟೆಲಿಫ್ಯಾಕ್ಸ್ : (080) 26617980

### ತಗಾದೆ ನೋಟಿಸ್

[illegible]

ದಿನಾಂಕ: 18.06.2026
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿ.

### ಶುಕ್ರವಾರದ ಪಂದ್ಯಗಳು

- ಮೆಕ್ಸಿಕೋ-ದ. ಕೊರಿಯಾ (ಬೆಳಗ್ಗೆ 6:30)
- ಆಸ್ಟ್ರೇಲಿಯಾ-ಅಮೆರಿಕ (ಮಧ್ಯರಾತ್ರಿ 12:30)
- ಸ್ಕಾಟ್ಲೆಂಡ್-ಮೊರೊಕ್ಕೊ (ಮಧ್ಯರಾತ್ರಿ 3:30)

## ಕಿರುಸುದ್ದಿ

### ಹಾಕಿ: ಜರ್ಮನ್ನರ ಮಣಿಸಿದ ಭಾರತ

• **ರೋಟರ್‌ಡ್ಯಾಮ್ (ನೆದರ್ಲೆಂಡ್ಸ್):** ಮಿಡಲ್ ಫೀಲ್ಡರ್ ಮನ್‌ಪ್ರೀತ್ ಸಿಂಗ್ ಅವರ ಕರಾರುವಾಕ್ ಪ್ರದರ್ಶನದ ನೆರವಿನಿಂದಾಗಿ ವಿಶ್ವ ಚಾಂಪಿಯನ್ ಜರ್ಮನಿ ತಂಡವನ್ನು ಮಣಿಸಿರುವ ಭಾರತ ಪುರುಷರ ಹಾಕಿ ತಂಡವು ಪ್ರೊ ಲೀಗ್ ಪಂದ್ಯಾವಳಿಯನ್ನು ಬಲವಾಗಿ ಶುರು ಮಾಡಿದೆ. ಕಳೆದ ಕೂಟದಲ್ಲಿ ಭಾರೀ ಹಿನ್ನಡೆ ಅನುಭವಿಸಿರುವ ಭಾರತ ಈ ಬಾರಿ ಮೊದಲ ಪಂದ್ಯದಲ್ಲೇ ಜರ್ಮನಿ ತಂಡವನ್ನು ಎದುರಿಸಿತ್ತು. ಮನ್‌ಪ್ರೀತ್ ಅವರ ದ್ವಿಗೋಲು ಪ್ರದರ್ಶನದ ಬಲದೊಂದಿಗೆ 3-1ರಿಂದ ಸೋಲಿಸಿ ಗಮನ ಸೆಳೆದಿದೆ. ಮೈದಾನಕ್ಕಿಳಿದ ಕ್ಷಣವೇ ಭಾರತ ಪರ ಅತಿ ಹೆಚ್ಚು ಪಂದ್ಯವಾಡಿದ ದಾಖಲೆಯನ್ನು ಮಾಡಿದ ಮನ್‌ಪ್ರೀತ್ ಸಿಂಗ್, ಮೊದಲನೇ ಗೋಲು ಗಳಿಸಿ ಮುನ್ನಡೆ ತಂದರು. 412 ಪಂದ್ಯಗಳ ದಿಲೀಪ್ ಟಿರ್ಕಿ ಅವರ ದಾಖಲೆ ಅಳಿಸಿದ ಅವರು, ಏಳನೇ ನಿಮಿಷದಲ್ಲೇ ಗೋಲು ಗಳಿಸಿದರು. ಭಾರತದ ಮುನ್ನಡೆಯನ್ನು ಶಿಲಾನಂದ ಅವರು 13ನೇ ನಿಮಿಷದ ವೇಳೆ 2ಕ್ಕೆ ವಿಸ್ತರಿಸಿದರು. ಇಷ್ಟಕ್ಕೆ ಭಾರತದ ಪ್ರಾಬಲ್ಯ ನಿಲ್ಲಲಿಲ್ಲ, 35ನೇ ನಿಮಿಷದಲ್ಲಿ ನೀಲಕಂಠ ಶರ್ಮ ಮತ್ತೊಂದು ಗೋಲು ಗಳಿಸಿದರು. ಜರ್ಮನ್ ಪರ ರಾಫೆಲ್ 45ನೇ ನಿಮಿಷಕ್ಕೆ ಗೋಲು ಗಳಿಸಿ ಅಂತರ ಕುಗ್ಗಿಸಿದರು.

### ಏಷ್ಯನ್ ಗೇಮ್ಸ್‌ಗಿಲ್ಲ ಮನಿಕಾ ಬಾತ್ರಾ!

• **ಹೊಸದಿಲ್ಲಿ:** ಜಪಾನ್‌ನ ಐಚಿ ಮತ್ತು ನಗೋಯಾದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಭಾರತದ ಅನುಭವಿ ಟೇಬಲ್ ಟೆನಿಸ್ ಆಟಗಾರ್ತಿ ಮನಿಕಾ ಬಾತ್ರಾ ಅವರನ್ನು ಕೈಬಿಡಲಾಗಿದೆ. ಸೆಪ್ಟೆಂಬರ್‌ನಲ್ಲಿ ಶುರುವಾಗಲಿರುವ ಮಹಾಕೂಟಕ್ಕೆ ಟೇಬಲ್ ಟೆನಿಸ್ ತಂಡವನ್ನು ಪ್ರಕಟಿಸಲಾಯಿತು. ತಮ್ಮ ಅನುಭವದ ಮೂಲಕವೇ ಖ್ಯಾತಿ ಪಡೆದಿದ್ದ ಮನಿಕಾ ಬಾತ್ರಾ ಮಾನದಂಡ ಕ್ರಮಗಳ ಕಾರಣದಿಂದಾಗಿ ತಂಡದಲ್ಲಿ ಸೇರಿಸಲಾಗಿಲ್ಲ ಎಂಬ ಮಾಹಿತಿ ಹೊರಬಂದಿದೆ. ವಿಶ್ವ ಮತ್ತು ರಾಷ್ಟ್ರೀಯ ಶ್ರೇಯಾಂಕಗಳ ಆಧಾರದ ಮೇಲೆ ವಸ್ತುನಿಷ್ಠ ಮಾನದಂಡಗಳನ್ನು ಅನುಸರಿಸುವ ಮೂಲಕ, ಫೆಡರೇಷನ್ ವಿಸ್ತೃತ ಅವಧಿಯಲ್ಲಿ ಸ್ಥಿರತೆ ಮತ್ತು ಕಾರ್ಯಕ್ಷಮತೆಗೆ ಪ್ರತಿಫಲ ನೀಡಿದೆ. ಪುರುಷರು ಮತ್ತು ಮಹಿಳೆಯರಿಬ್ಬರಿಗೂ ಮೀಸಲು ಆಟಗಾರರನ್ನು ಸೇರಿಸುವುದರಿಂದ ಕ್ರೀಡಾಕೂಟದ ಮೊದಲು ಯಾವುದೇ ಅನಿರೀಕ್ಷಿತ ಸಂದರ್ಭಗಳಿಗೆ ತಂಡವು ಸಿದ್ಧವಾಗಿದೆ ಎಂದು ಖಚಿತಪಡಿಸುತ್ತದೆ ಎಂದು ಟಿಟಿ ಸಂಸ್ಥೆ ಹೇಳಿಕೆ ತಿಳಿಸಿದೆ. ಫೆಡರೇಷನ್‌ನ ಆಯ್ಕೆ ನೀತಿಯಡಿಯಲ್ಲಿ, ಏಳು ಪ್ರಮುಖ ದೇಶೀಯ ಕಾರ್ಯಕ್ರಮಗಳಲ್ಲಿನ ಪ್ರದರ್ಶನಗಳಿಂದ ಸಂಗ್ರಹಿಸಲಾದ ರಾಷ್ಟ್ರೀಯ ಶ್ರೇಯಾಂಕಗಳು ಮಾಕ್ಸ್ರ್ ಅಂತಾರಾಷ್ಟ್ರೀಯ ಸ್ಪರ್ಧೆಗಳಿಗೆ ಆಯ್ಕೆಯ ಕಡ್ಡಾಯ ಅಂಶವಾಗಿದೆ. ಪ್ರಸ್ತುತ ವಿಶ್ವದಲ್ಲಿ 51 ನೇ ಸ್ಥಾನದಲ್ಲಿರುವ ಮನಿಕಾ, ಹಿಂದಿನ ಋತುವಿನಲ್ಲಿ ಯಾವುದೇ ದೇಶೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸದ ಕಾರಣ, ಭಾರತದ ಎರಡನೇ ಅತ್ಯುನ್ನತ ಶ್ರೇಯಾಂಕಿತ ಮಹಿಳೆಯಾಗಿದ್ದರೂ ಅವರು ಮಾನದಂಡಗಳ ಅಡಿಯಲ್ಲಿ ಅನರ್ಹರಾದರು.

### ಬಾಕ್ಸಿಂಗ್: ಮೀನಾಕ್ಷಿ ಕ್ವಾರ್ಟರ್‌ಗೆ

• **ಹೊಸದಿಲ್ಲಿ:** ಚೀನಾದಲ್ಲಿ ನಡೆಯುತ್ತಿರುವ ಬಾಕ್ಸಿಂಗ್ ವಿಶ್ವಕಪ್ ಹಂತ 2ರಲ್ಲಿ ಭಾರತದ ಬಾಕ್ಸರ್ ಮೀನಾಕ್ಷಿ ವಿಜಯಶಾಲಿಯಾಗಿ ಹೊರಹೊಮ್ಮಿದರು, ತಮ್ಮ ತೂಕ ವಿಭಾಗದಲ್ಲಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು. ಮಹಿಳಾ 51 ಕೆಜಿ ವಿಭಾಗದಲ್ಲಿ ಸ್ಪರ್ಧಿಸುತ್ತಿರುವ 48 ಕೆಜಿ ವಿಶ್ವ ಚಾಂಪಿಯನ್ ಮತ್ತು ಆ ವಿಭಾಗದಲ್ಲಿ ಪ್ರಸ್ತುತ ವಿಶ್ವದ ನಂ. 1 ಆಗಿರುವ ಮೀನಾಕ್ಷಿ, ಈಗ ಒಲಿಂಪಿಕ್ 51 ಕೆಜಿ ತೂಕ ವರ್ಗಕ್ಕೆ ಪರಿವರ್ತನೆಗೊಂಡಿದ್ದು, ಪೋಲೆಂಡ್‌ನ ನಟಾಲಿಯಾ ಕುಕ್ಜೆವ್‌ಸ್ಕಾ ವಿರುದ್ಧ 5-0 ಸರ್ವಾನುಮತದ ನಿರ್ಣಯದ ಗೆಲುವು ಸಾಧಿಸಿ ಸ್ಪರ್ಧೆಯಲ್ಲಿ ಮುನ್ನಡೆದರು. ನಾಲ್ಕನೇ ದಿನದಂದು ನಡೆದ ಇನ್ನೊಂದು ಸ್ಪರ್ಧೆಯಲ್ಲಿ, ಅಭಿನಾಶ್ ಜಮ್ವಾಲ್ (65 ಕೆಜಿ) ಕಿರ್ಗಿಸ್ತಾನ್‌ನ ಮುಖ್ಯೋರ್‌ಬೆಕ್ ಇಮಾಮ್ನಜರೋವ್ ವಿರುದ್ಧ 0-5 ಅಂತರದಿಂದ ಸೋತ ನಂತರ ಹೊರನಡೆದರು. ಪಂದ್ಯಾವಳಿಯಲ್ಲಿ ಇಲ್ಲಿಯವರೆಗೆ, ಐದು ಭಾರತೀಯ ಬಾಕ್ಸರ್‌ಗಳು ಕ್ವಾರ್ಟರ್ ಫೈನಲ್‌ಗೆ ಮುನ್ನಡೆದಿದ್ದಾರೆ. ನಿಖಿಲ್ (55 ಕೆಜಿ), ದೀಪಕ್ (70 ಕೆಜಿ), ಮೀನಾಕ್ಷಿ (51 ಕೆಜಿ), ಪ್ರಾಚಿ (57 ಕೆಜಿ), ಮತ್ತು ಸನೇಶ್ (65 ಕೆಜಿ). ಜ್ಯೋತಿ (48 ಕೆಜಿ) ಮತ್ತು ಮುಗ್ಧ (85 ಕೆಜಿ) ಈಗಾಗಲೇ ಸೆಮಿಫೈನಲ್‌ಗೆ ಮುನ್ನಡೆಯುವ ಮೂಲಕ ದೇಶಕ್ಕೆ ಪದಕ ಖಚಿತಪಡಿಸಿದ್ದಾರೆ.



# ಪೋರ್ಚುಗಲ್‌ಗೆ ಕಾಂಗೋ ಟಕ್ಕರ್!

**ಪಂದ್ಯದ ಮುಖ್ಯಾಂಶಗಳು**
- ಪೋರ್ಚುಗಲ್ 1-1 ಡಿಆರ್ ಕಾಂಗೋ
- ವಿಶ್ವಕಪ್‌ನಲ್ಲಿ ಅಚ್ಚರಿಯ ಫಲಿತಾಂಶ

• **ಈಸ್ಟ್ ರುದರ್‌ಫೋರ್ಡ್ (ಅಮೆರಿಕ):** ಫಿಫಾ ವಿಶ್ವಕಪ್ 2026ರ ಗುಂಪು ಕೆ ಪಂದ್ಯದಲ್ಲಿ ಬಲಿಷ್ಠ ಪೋರ್ಚುಗಲ್ ತಂಡವನ್ನು ಡಿಆರ್ ಕಾಂಗೋ ಫುಟ್ಬಾಲ್ ಜಗತ್ತೆ ನಿಬ್ಬೆರಗಾಗುವಂತೆ ಮಾಡಿತು. ವಿಶ್ವಕಪ್‌ನ ಲೀಗ್ ಪಂದ್ಯದಲ್ಲಿ ರೊನಾಲ್ಡೋ ಇರುವ ಪೋರ್ಚುಗಲ್ ತಂಡದ ವಿರುದ್ಧ ಅಚ್ಚರಿಯ ಡ್ರಾ ಸಾಧಿಸಿದೆ. ಪಂದ್ಯದ ಆರಂಭದಿಂದಲೇ ಪೋರ್ಚುಗಲ್ ಬಾಲ್ ಮೇಲೆ ಹೆಚ್ಚಿನ ನಿಯಂತ್ರಣ ಸಾಧಿಸಿದರೂ, ಕಾಂಗೋ ಸಂಘಟಿತ ರಕ್ಷಣೆಯ ಮೂಲಕ ಎದುರಾಳಿಗಳ ದಾಳಿಯನ್ನು ನಿಯಂತ್ರಿಸಿತು. ಪೋರ್ಚುಗಲ್ ಹಲವು ಬಾರಿ ಗೋಲು ಗಳಿಸುವ ಅವಕಾಶಗಳನ್ನು ಸೃಷ್ಟಿಸಿದರೂ, ಕಾಂಗೋ ಗೋಲ್‌ಕೀಪರ್ ಮತ್ತು ರಕ್ಷಣಾ ವಿಭಾಗದ ದಿಟ್ಟ ಪ್ರದರ್ಶನದಿಂದ ಮುನ್ನಡೆ ಸಾಧಿಸಲು ವಿಫಲವಾಯಿತು. ಮತ್ತೊಂದೆಡೆ, ಕಾಂಗೋ ಕೂಡ ಪ್ರತಿದಾಳಿಗಳ ಮೂಲಕ ಪೋರ್ಚುಗಲ್‌ಗೆ ಸವಾಲು ಒಡ್ಡಿತು. ದ್ವಿತೀಯಾರ್ಧದಲ್ಲಿ ಪಂದ್ಯದ ವೇಗ ಮತ್ತಷ್ಟು ಹೆಚ್ಚಾಯಿತು. ಎರಡೂ ತಂಡಗಳು ತಲಾ ಒಂದು ಗೋಲು ದಾಖಲಿಸಿ ಅಂಕ ಹಂಚಿಕೊಂಡವು. ಪೋರ್ಚುಗಲ್ ಗೆಲುವಿಗಾಗಿ ಕೊನೆಯ ಕ್ಷಣಗಳವರೆಗೂ ಒತ್ತಡ ಹೇರಿದರೂ, ಕಾಂಗೋ ರಕ್ಷಣಾ ವಿಭಾಗ ದಿಟ್ಟವಾಗಿ ನಿಂತಿತು. ಈ ಡ್ರಾದೊಂದಿಗೆ ಎರಡೂ ತಂಡಗಳು ತಲಾ ಒಂದು ಅಂಕ ಗಳಿಸಿದ್ದು, ಗುಂಪು ಕೆಯಲ್ಲಿ ಮುಂದಿನ ಪಂದ್ಯಗಳ ಮಹತ್ವ ಹೆಚ್ಚಾಗಿದೆ. ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಕೊಲಂಬಿಯಾ ಉಜ್ಬೇಕಿಸ್ತಾನ ವಿರುದ್ಧ ಜಯ ಸಾಧಿಸಿದ್ದರಿಂದ, ಅಂಕಪಟ್ಟಿಯಲ್ಲಿ ಮುನ್ನಡೆ ಪಡೆದಿದೆ.

## ಘಾನಾಗೆ ಜಯ



• **ಟೊರೊಂಟೊ:** ಘಾನಾ ತಂಡವು ಕೊನೆಯ ಕ್ಷಣದ ಗೋಲಿನ ನೆರವಿನಿಂದ ಪನಾಮಾವನ್ನು 1-0 ಅಂತರದಿಂದ ಮಣಿಸಿ ಅಮೂಲ್ಯ ಮೂರು ಅಂಕಗಳನ್ನು ತನ್ನದಾಗಿಸಿಕೊಂಡಿತು. ಟೊರೊಂಟೊ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಎರಡೂ ತಂಡಗಳು ಆರಂಭದಿಂದಲೇ ಎಚ್ಚರಿಕೆಯ ಆಟ ಪ್ರದರ್ಶಿಸಿದವು. ಘಾನಾ ಹೆಚ್ಚು ದಾಳಿ ನಡೆಸಿದರೂ ಪನಾಮಾ ರಕ್ಷಣಾ ವಿಭಾಗ ದೃಢವಾಗಿ ನಿಂತು ಗೋಲು ಒಪ್ಪಿಸದೇ ಹೋರಾಡಿತು. ಪರಿಣಾಮ ಮೊದಲಾರ್ಧ ಗೋಲುರಹಿತ ಸಮಬಲದಲ್ಲಿ ಅಂತ್ಯಗೊಂಡಿತು. ದ್ವಿತೀಯಾರ್ಧದಲ್ಲೂ ಘಾನಾ ನಿರಂತರ ಒತ್ತಡ ಹೇರಿತು. ಆದರೆ ಪನಾಮಾ ಗೋಲ್‌ಕೀಪರ್ ಮತ್ತು ರಕ್ಷಣಾ ಆಟಗಾರರ ಉತ್ತಮ ಪ್ರದರ್ಶನದಿಂದ ಪಂದ್ಯ ಹೆಚ್ಚುವರಿ ಸಮಯದತ್ತ ಸಾಗಿತು.

**ತಿರುವು ಪಡೆದ ಪಂದ್ಯ:** ಪಂದ್ಯ ಡ್ರಾದತ್ತ ಸಾಗುತ್ತಿದೆ ಎನ್ನುವಾಗ, 90+5ನೇ ನಿಮಿಷದಲ್ಲಿ ಸಿ. ಯಿರೆಂಕಿ ನಿರ್ಣಾಯಕ ಗೋಲು ದಾಖಲಿಸಿ ಘಾನಾ ಅಭಿಮಾನಿಗಳ ಸಂಭ್ರಮಕ್ಕೆ ಕಾರಣರಾದರು. ಆ ಗೋಲಿನೊಂದಿಗೆ ಘಾನಾ 1-0 ಮುನ್ನಡೆ ಪಡೆದು ಅಂತಿಮವಾಗಿ ಜಯ ಸಾಧಿಸಿತು. ಈ ಗೆಲುವಿನೊಂದಿಗೆ ಘಾನಾ ಗ್ರೂಪ್‌ನಲ್ಲಿ ಪ್ರಮುಖ ಮೂರು ಅಂಕಗಳನ್ನು ಗಳಿಸಿ ನಾಕೌಟ್ ಹಂತದ ಆಸೆಯನ್ನು ಜೀವಂತವಾಗಿರಿಸಿಕೊಂಡಿದೆ.

**ಪಂದ್ಯದ ಫಲಿತಾಂಶ**
- ಘಾನಾ 1-0 ಪನಾಮಾ
- ಘಾನಾ: ಸಿ. ಯಿರೆಂಕಿ: 90+5ನೇ ನಿ.
- ಘಾನಾದ ವಿಶ್ವಕಪ್ ಅಭಿಯಾನಕ್ಕೆ ಮಹತ್ವದ ಜಯ.
- ಪನಾಮಾ ಕೊನೆಯ ಕ್ಷಣದವರೆಗೂ ಘಾನಾವನ್ನು ತಡೆಹಿಡಿದಿತ್ತು.

## ಕೇನ್ ಮಿಂಚಿನಾಟ ಇಂಗ್ಲೆಂಡ್‌ಗೆ ಜಯ

ದಿನದ ಮತ್ತೊಂದು ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಕ್ರೊಯೇಷಿಯಾ ತಂಡವನ್ನು 4-2 ಗೋಲುಗಳಿಂದ ಮಣಿಸಿತು.

ಪಂದ್ಯದ 12ನೇ ನಿಮಿಷದಲ್ಲಿ ದೊರೆತ ಪೆನಾಲ್ಟಿಯನ್ನು ಹ್ಯಾರಿ ಕೇನ್ ಯಶಸ್ವಿಯಾಗಿ ಗೋಲಾಗಿ ಪರಿವರ್ತಿಸಿ ಇಂಗ್ಲೆಂಡ್‌ಗೆ ಮುನ್ನಡೆ ತಂದುಕೊಟ್ಟರು. ಬಳಿಕ 36ನೇ ನಿಮಿಷದಲ್ಲಿ ಮಾರ್ಟಿನ್ ಬಟುರಿನಾ ಗೋಲು ಬಾರಿಸಿ ಕ್ರೊಯೇಷಿಯಾವನ್ನು ಸಮಬಲಕ್ಕೆ ತಂದರು. ಆದರೆ 42ನೇ ನಿಮಿಷದಲ್ಲಿ ಮತ್ತೊಮ್ಮೆ ಕೇನ್ ಗೋಲು ದಾಖಲಿಸಿ ಇಂಗ್ಲೆಂಡ್‌ಗೆ 2-1 ಮುನ್ನಡೆ ಒದಗಿಸಿದರು. ಮೊದಲಾರ್ಧದ ಹೆಚ್ಚುವರಿ ಸಮಯದಲ್ಲಿ ಪೆಟಾರ್ ಮೂಸಾ ಗೋಲು ಬಾರಿಸಿ ಕ್ರೊಯೇಷಿಯಾವನ್ನು ಮತ್ತೆ ಪಂದ್ಯಕ್ಕೆ ಮರಳಿಸಿದರು. ಹೀಗಾಗಿ ಮೊದಲಾರ್ಧ 2-2 ಸಮಬಲದಲ್ಲಿ ಅಂತ್ಯಗೊಂಡಿತು.

**ಪಂದ್ಯದ ಪ್ರಮುಖ ಕ್ಷಣಗಳು**
- ಹ್ಯಾರಿ ಕೇನ್: 12ನೇ ನಿ. (ಪೆನಾಲ್ಟಿ), 42ನೇ ನಿ.
- ಮಾರ್ಟಿನ್ ಬಟುರಿನಾ: 36ನೇ ನಿ. (ಕ್ರೊ)
- ಪೆಟಾರ್ ಮೂಸಾ: 45+5ನೇ ನಿ. (ಕ್ರೊ)
- ಜೂಡ್ ಬೆಲ್ಲಿಂಗ್ಹ್ಯಾಮ್: 47ನೇ ನಿ.
- ಮಾರ್ಕಸ್ ರಾಶ್‌ಫೋರ್ಡ್: 85ನೇ ನಿ.

ದ್ವಿತೀಯಾರ್ಧ ಆರಂಭವಾದ ಕೂಡಲೇ ಜೂಡ್ ಬೆಲ್ಲಿಂಗ್ಹ್ಯಾಮ್ (47) ಗೋಲು ಬಾರಿಸಿ ಇಂಗ್ಲೆಂಡ್‌ಗೆ ಮಹತ್ವದ ಮುನ್ನಡೆ ನೀಡಿದರು. ಬಳಿಕ 85ನೇ ನಿಮಿಷದಲ್ಲಿ ಮಾರ್ಕಸ್ ರಾಶ್‌ಫೋರ್ಡ್ ಗೋಲು ದಾಖಲಿಸಿ ಜಯ ಖಚಿತಪಡಿಸಿದರು.



## ಕೊಲಂಬಿಯಾ ಆಕ್ರಮಣಕ್ಕೆ ಉಜ್ಬೇಕಿಸ್ತಾನ್ ಶರಣು

• **ಮೆಕ್ಸಿಕೊ ಸಿಟಿ:** ದಕ್ಷಿಣ ಅಮೆರಿಕದ ಬಲಿಷ್ಠ ತಂಡ ಕೊಲಂಬಿಯಾ 3-1 ಅಂತರದಲ್ಲಿ ಉಜ್ಬೇಕಿಸ್ತಾನ್ ತಂಡವನ್ನು ಮಣಿಸಿ ತನ್ನ ಅಭಿಯಾನವನ್ನು ಗೆಲುವಿನೊಂದಿಗೆ ಆರಂಭಿಸಿತು.

ಮೆಕ್ಸಿಕೊ ಸಿಟಿ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಕೊಲಂಬಿಯಾ ಆರಂಭದಿಂದಲೇ ಉಜ್ಬೇಕಿಸ್ತಾನ್ ರಕ್ಷಣಾ ವಿಭಾಗದ ಮೇಲೆ ನಿರಂತರ ಒತ್ತಡ ಹೇರಿತು. ಅದರ ಫಲವಾಗಿ 40ನೇ ನಿಮಿಷದಲ್ಲಿ ಡೇನಿಯಲ್ ಮುನೋಜ್ ಗೋಲು ಬಾರಿಸಿ ಕೊಲಂಬಿಯಾಗೆ ಮುನ್ನಡೆ ತಂದುಕೊಟ್ಟರು. ಮೊದಲಾರ್ಧದ ಅಂತ್ಯಕ್ಕೆ ಕೊಲಂಬಿಯಾ 1-0 ಮುನ್ನಡೆಯಲ್ಲಿತ್ತು.

ದ್ವಿತೀಯಾರ್ಧ ಆರಂಭವಾದ ಬಳಿಕ ಉಜ್ಬೇಕಿಸ್ತಾನ್ ಹೆಚ್ಚು ಆಕ್ರಮಣಕಾರಿ ಆಟ ಪ್ರದರ್ಶಿಸಿತು. ಅದರ ಫಲವಾಗಿ 60ನೇ ನಿಮಿಷದಲ್ಲಿ ಅಬ್ಬೋಸ್ಬೆಕ್ ಫೈಜುಲ್ಲಾಯೆವ್ ಗೋಲು ದಾಖಲಿಸಿ ಪಂದ್ಯವನ್ನು 1-1 ಸಮಬಲಕ್ಕೆ ತಂದರು. ಆದರೆ ಸಮಬಲ ಹೆಚ್ಚು ಹೊತ್ತು ಉಳಿಯಲಿಲ್ಲ, ಕೇವಲ ಐದು ನಿಮಿಷಗಳ ಬಳಿಕ 65ನೇ ನಿಮಿಷದಲ್ಲಿ ಲೂಯಿಸ್ ಡಿಯಾಜ್ ಅದ್ಭುತ ಗೋಲು ಬಾರಿಸಿ ಕೊಲಂಬಿಯಾಗೆ ಮತ್ತೊಮ್ಮೆ ಮುನ್ನಡೆ ಒದಗಿಸಿದರು.

ಪಂದ್ಯದ ಕೊನೆಯ ಕ್ಷಣಗಳಲ್ಲಿ ಉಜ್ಬೇಕಿಸ್ತಾನ್ ಸಮಬಲ ಸಾಧಿಸಲು ಪ್ರಯತ್ನಿಸಿದರೂ, ಹೆಚ್ಚುವರಿ ಸಮಯದಲ್ಲಿ 90+9ನೇ ನಿಮಿಷದಲ್ಲಿ ಜುವಾನ್ ಕ್ಯಾಂಪಾಜ್ ಗೋಲು ದಾಖಲಿಸಿ ಕೊಲಂಬಿಯಾದ ಗೆಲುವಿಗೆ ಮುದ್ರೆ ಒತ್ತಿದರು.



**ಉಜ್ಬೇಕಿಸ್ತಾನ್**
- ಅಬ್ಬೋಸ್ಬೆಕ್ ಫೈಜುಲ್ಲಾಯೆವ್: 60ನೇ ನಿ.

**ಕೊಲಂಬಿಯಾ**
- ಡೇನಿಯಲ್ ಮುನೋಜ್: 40ನೇ ನಿ.
- ಲೂಯಿಸ್ ಡಿಯಾಜ್ 65ನೇ ನಿ.
- ಜುವಾನ್ ಕ್ಯಾಂಪಾಜ್ 90+9ನೇ ನಿ.

## ಮೈಸೂರಿಗೆ ವೈಶಾಖ್ ವಿಜಯ ನಾಯಕ



ಮೈಸೂರು ತಂಡವನ್ನು ಪ್ರತಿನಿಧಿಸುವುದು ಹೆಮ್ಮೆಯ ವಿಷಯ. ನನ್ನ ಕ್ರಿಕೆಟ್ ಕೆರಿಯರ್ ಶುರುವಾಗಿದ್ದೆ ಮೈಸೂರು ತಂಡದಿಂದ. ನಮ್ಮ ಹುಡುಗರು ಪಂದ್ಯಾವಳಿಯಲ್ಲಿ ಮಿಂಚಲು ಸಿದ್ಧರಾಗಿದ್ದಾರೆ.
■ ವೈಶಾಖ್ ವಿಜಯ್, ಕ್ರಿಕೆಟರ್

• **ಮೈಸೂರು:** ಮಹಾರಾಜ ಟ್ರೋಫಿಯಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ವೈಶಾಖ್ ವಿಜಯಕುಮಾರ್ ಮುನ್ನಡೆಸಲಿದ್ದಾರೆ.

ಶನಿವಾರದಿಂದ ಜುಲೈ 12 ರವರೆಗೆ ನಡೆಯಲಿರುವ ಬಹುನಿರೀಕ್ಷಿತ ಮಹಾರಾಜ ಟ್ರೋಫಿ ಟಿ20 ಪಂದ್ಯಾವಳಿಗೆ ದಿನಗಣನೆ ಚಾಲನೆ ಸಿಕ್ಕಿದೆ. ಟೂರ್ನಿಗೆ ಒಂದೇ ದಿನ ಬಾಕಿ ಇರುವಾಗ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಫ್ರಾಂಚೈಸಿ ಮೈಸೂರು ವಾರಿಯರ್ಸ್ ಹಾಗೂ ಆಯೋಜಕ ಕೆಎಸ್‌ಸಿಎ ಜಂಟಿ ಮಾಧ್ಯಮ ಗೋಷ್ಠಿ ನಡೆಸಿ ಲೀಗ್ ಅಧಿಕೃತ ಹಾಡನ್ನು ಬಿಡುಗಡೆ ಮಾಡಿದವು. ಇದೇ ವೇಳೆ ಮೈಸೂರು ವಾರಿಯರ್ಸ್ ತನ್ನ ತಂಡವನ್ನು ಪರಿಚಯಿಸಿತು.

ಇದೇ ವೇಳೆ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ಮಾತನಾಡಿ, ಮಹಾರಾಜ ಟ್ರೋಫಿಯು ಪ್ರಾದೇಶಿಕ ಪ್ರತಿಭೆಗಳಿಗೆ ಸದಾ ಅತ್ಯುತ್ತಮ ವೇದಿಕೆಯನ್ನು ಒದಗಿಸುತ್ತಾ ಬಂದಿದೆ. ಈ ಹೊಸ ಅಧಿಕೃತ ಗೀತೆಯು ಹಿಂದಿರುವ ಉತ್ಸಾಹವನ್ನು ನೋಡಿದರೆ, 2026 ರ ಸೀಸನ್ ಕರ್ನಾಟಕದಾದ್ಯಂತ ಸ್ಪರ್ಧಾತ್ಮಕ ಕ್ರಿಕೆಟ್ ಮತ್ತು ಅಭಿಮಾನಿಗಳ ಮನರಂಜನೆಯಲ್ಲಿ ಒಂದು ಹೊಸ ಮೈಲಿಗಲ್ಲನ್ನು ಸೃಷ್ಟಿಸಲಿದೆ ಎಂಬ ಸಂಪೂರ್ಣ ವಿಶ್ವಾಸ ನನಗಿದೆ, ಎಂದರು. ಯುವಕರು ಆಧುನಿಕ ಕ್ರಿಕೆಟ್ ಅರ್ಥ ಮಾಡಿಕೊಳ್ಳಬೇಕು, ಹಾಗೆ ಟಿ20 ಮಾದರಿಯ ಭರದಲ್ಲಿ ಇನ್ನೆರಡು ಮಾದರಿಗಳನ್ನು ಮರೆಯದಿರಿ ಎಂಬ ಸಲಹೆ ಕೊಟ್ಟರು.

**ಹುಬ್ಬಳ್ಳಿಗೆ ಅನೀಶ್ವರ್ ಸಾರಥ್ಯ**

ಅತ್ತ ಬೆಂಗಳೂರಿನಲ್ಲಿ ಹುಬ್ಬಳ್ಳಿ ತಂಡವೂ ತನ್ನ ಅಧಿಕೃತ ಜೆರ್ಸಿ ಬಿಡುಗಡೆ ಮಾಡುವ ವೇಳೆ ತಂಡವನ್ನು ಪರಿಚಯಿಸಿತು. ದೇಸಿ ಕ್ರಿಕೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡುತ್ತಾ ಬಂದಿರುವ ಅನೀಶ್ವರ್ ಗೌತಂ ಅವರನ್ನು ನಾಯಕರನ್ನಾಗಿ ನೇಮಿಸಿದೆ. ಕೆಎಸ್‌ಸಿಎ ಉಪಾಧ್ಯಕ್ಷ ಸುಜಿತ್ ಸೋಮಸುಂದರ್, ಮಹಾರಾಜ ಟ್ರೋಫಿ ಚೇರ್ಮನ್ ಕೇಶವ, ಕೆಎಸ್‌ಸಿಎ ಖಜಾಂಚಿ ಬಿ. ಎನ್. ಮಧುಕರ್, ಹುಬ್ಬಳ್ಳಿ ಫ್ರಾಂಚೈಸಿ ಮಾಲೀಕ ವಿವೇಕ್ ಜಿಂದಾಲ್ ಮತ್ತು ಸುಶೀಲ್ ಕುಮಾರ್ ಜೆರ್ಸಿ ಅನಾವರಣಗೊಳಿಸಿದರು.

**ನಾಯಕತ್ವ ಘೋಷಣೆ:** ಸ್ಕೆಲ್ ಫ್ಯೂರ್ ಅಗರಬತ್ತಿ ಪ್ರಾಯೋಜಕತ್ವದ ಹಾಗೂ ಎನ್. ಆರ್. ಗ್ರೂಪ್ ಒಡೆತನದ ಮೈಸೂರು ವಾರಿಯರ್ಸ್ ತಂಡವನ್ನು ಪರಿಚಯಿಸಿತು. ಕರ್ನಾಟಕ ಮತ್ತು ಐಪಿಎಲ್ ನ ಪ್ರಸಿದ್ಧ ವೇಗದ ಬೌಲರ್ ವೈಶಾಖ್ ವಿಜಯ್ ಕುಮಾರ್ ಅವರಿಗೆ ತಂಡವನ್ನು ಮುನ್ನಡೆಸುವ ಜವಾಬ್ದಾರಿ ನೀಡಲಾಗಿದೆ ಎಂದು ಫ್ರಾಂಚೈಸಿ ಘೋಷಿಸಿತು.

**ಪ್ರಮುಖ ಆಟಗಾರರು:** ಅಂತಾರಾಷ್ಟ್ರೀಯ ತಾರೆ ದೇವದತ್ ಪಡಿಕ್ಕಲ್, ಆಲ್ ರೌಂಡರ್ ಮನೋಜ್ ಭಾಂಡಗೆ, ಚೇತನ್ ಎಲ್.ಆರ್. ಮತ್ತು ರಿಷಿ ಭಟ್ ತಂಡದ ಪ್ರಮುಖ ಆಟಗಾರರಾಗಿದ್ದಾರೆ.

**ಯುವಕರಲ್ಲಿ ಹುಮ್ಮಸ್ಸು: ಅರ್ಜುನ್:** ಸ್ಕೆಲ್ ಫ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕರು, ಮೈಸೂರು ವಾರಿಯರ್ಸ್ ತಂಡದ ಮಾಲೀಕರಾದ ಅರ್ಜುನ್ ರಂಗ, ಯುವ ಆಟಗಾರರಲ್ಲಿ ಗೆಲ್ಲುವ ಹುಮ್ಮಸ್ಸಿದೆ. ಗ್ರಾಮೀಣ ಮಟ್ಟದಲ್ಲಿ ನಿರಂತರವಾಗಿ ಉತ್ತಮ ಪ್ರದರ್ಶನ ನೀಡುತ್ತಿರುವ ಪ್ರತಿಭೆಗಳಿಗೆ ಇಂತಹ ಪ್ರಮುಖ ವೇದಿಕೆ ಕಲ್ಪಿಸಿಕೊಡಲು ನಾವು ಹೆಮ್ಮೆಪಡುತ್ತೇವೆ, ಎಂದು ಹೇಳಿದರು.

## ಮಾರ್ಚ್ 10ರಿಂದಲೇ ಐಪಿಎಲ್

- 2027ರ ಪಂದ್ಯಾವಳಿ ಬೇಗನೇ ಶುರು!
- ವಾತಾವರಣಕ್ಕೆ ಸಂಬಂಧ ತೀರ್ಮಾನ

• **ಮುಂಬೈ:** ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ವೇಳೆ ಬರುಬರಲಿರುವ ನಿಟ್ಟಿನಲ್ಲಿ ಮತ್ತು ಪೂರ್ವ ಮಾನ್ಸೂನ್ ಬಗ್ಗೆ ಚಿಂತನೆ ನಡೆಸುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಪಂದ್ಯಾವಳಿಯನ್ನು ವಾಡಿಕೆಗಿಂತಲೂ ಬೇಗನೇ ಶುರು ಮಾಡಿ, ಮುಗಿಸಲು ಚಿಂತನೆ ನಡೆಸಿದೆ.

ಸಾಮಾನ್ಯವಾಗಿ ಮಾರ್ಚ್ ಅಂತ್ಯದಿಂದ ಮೇ ಅಂತ್ಯ ಅಥವಾ ಜೂನ್ ಆರಂಭದವರೆಗೆ ನಡೆಯುವ ಈ ಕೂಟವು ಈ ಬಾರಿ ಮಾರ್ಚ್ ಆರಂಭದಲ್ಲೇ ಶುರುವಾಗಿ ಮೇ ಮಧ್ಯದಲ್ಲಿ ಮುಕ್ತಾಯಗೊಳ್ಳಲಿದೆ. ಐಪಿಎಲ್ ಮುಕ್ತಾಯಗೊಂಡು ಇನ್ನೂ ತಿಂಗಳು ಮುಗಿದಿಲ್ಲ, ಈ ನಡುವೆ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಈ ಬಗ್ಗೆ ಸುಳಿವು ನೀಡಿದ್ದು, ಹೆಚ್ಚಿನ ಬಿಸಿಲಿನಿಂದಾಗಿ ಪಂದ್ಯಾವಳಿ ಬೇಗನೇ ಶುರು ಮಾಡಲು ನಿರ್ಧರಿಸಲಾಗಿದೆ. ಮಾರ್ಚ್ 10ಕ್ಕೆ ಪಂದ್ಯಾವಳಿ ಶುರುವಾಗಲಿದೆ. ಮೇ 15ಕ್ಕೆ ಫೈನಲ್ ನಡೆಯಲಿದೆ. ಪಂದ್ಯಗಳ ಸಂಖ್ಯೆಯಲ್ಲೂ ಬದಲಾವಣೆಯಾಗುವ ಸಾಧ್ಯತೆಗಳಿವೆ ಎನ್ನಲಾಗಿದೆ.

2024ರಲ್ಲಿ ಫ್ರಾಂಚೈಸಿಗೊಂದು ಮಾಹಿತಿ ಕೊಟ್ಟು, 2027ರಿಂದ ಮಾರ್ಚ್ 14ರಿಂದ ಮೇ 30ರವರೆಗೆ ನಡೆಸಲು ತೀರ್ಮಾನಿಸಲಾಗಿದೆ. ನಾವು ಅದಕ್ಕೆ ಸಜ್ಜಾಗಬೇಕಿದೆ ಎಂದು ತಿಳಿಸಿತ್ತು. ಈ ವರ್ಷ, ಐಪಿಎಲ್ ಮಾರ್ಚ್ 29 ರ ಸುಮಾರಿಗೆ ಪಂದ್ಯಾವಳಿ ಶುರುವಾಗಿತ್ತು. ಮೇ 31 ರೊಳಗೆ ಕೊನೆಗೊಂಡಿತು. ನಾವು ಚರ್ಚಿಸುತ್ತಿರುವ ಒಂದೇ ವಿಷಯವೆಂದರೆ ಮೇ 15 ರ ನಂತರ ಪಂದ್ಯಾವಳಿಯ ಕೊನೆಯ ಹಂತದಲ್ಲಿ ಮಳೆ ಬೀಳುವ ಅಥವಾ ಪೂರ್ವ-ಮಾನ್ಸೂನ್ ಆರಂಭದ ಬಗ್ಗೆ, ಮತ್ತೊಂದೆಡೆ, ಆಟಗಾರರಿಗೆ ಅಥವಾ ಜನಸಮೂಹಕ್ಕೆ ಅನುಕೂಲಕರವಲ್ಲದ ಬಿಸಿ ವಾತಾವರಣವಿದೆ. ಆದ್ದರಿಂದ, ಮಾರ್ಚ್ ತಿಂಗಳ ಕೊನೆಯ ಭಾಗಕ್ಕಿಂತ ಸ್ವಲ್ಪ ಮುಂಚಿತವಾಗಿ ಪಂದ್ಯಾವಳಿಯನ್ನು ಪ್ರಾರಂಭಿಸುವುದೇ ಎಂಬುದರ ಕುರಿತು ಬಿಸಿಸಿಐ ಮತ್ತು ನಮ್ಮ ಐಪಿಎಲ್ ಆಡಳಿತ ಮಂಡಳಿಯಲ್ಲಿ ಚರ್ಚೆ ನಡೆಯುತ್ತಿದೆ. ಮುಂದಿನ ವರ್ಷದಿಂದ, ನಾವು ಪ್ರಯತ್ನ ಮಾಡುತ್ತೇವೆ ಮತ್ತು ಮಾರ್ಚ್ 10 ರೊಳಗೆ ಅದನ್ನು ಪ್ರಾರಂಭಿಸುವುದೇ ಮತ್ತು ಮೇ 15 ರೊಳಗೆ ಅದನ್ನು ಮುಗಿಸುವುದೇ ಎಂಬುದರ ಕುರಿತು ವಿಂಡೋಗಳನ್ನು ನೋಡಲು ನಾನು ಈಗಾಗಲೇ ನಮ್ಮ ಜನರಲ್ ಮ್ಯಾನೇಜರ್) ಭಾರತದ ಮಾಜಿ ವೇಗಿ ಅವೇ ಕುರುವಿಲ್ಲಾ ಅವರಿಗೆ ಸೂಚಿಸಿದ್ದೇನೆ ಎಂದಿದ್ದಾರೆ.

## ರಗ್ಬಿ: ಬೆಂಗಳೂರಿಗೆ ಜಯ

• **ಹೈದರಾಬಾದ್:** ಇಲ್ಲಿನ ಗಚಿಬೌಲಿ ಗಂಗಿ ಮೋಹನ ಚಂದ್ರ ಬಾಲಯೋಗಿ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆದ ರಗ್ಬಿ ಪ್ರೀಮಿಯರ್ ಲೀಗ್‌ನ ಪಂದ್ಯಗಳಲ್ಲಿ ಬೆಂಗಳೂರು ಬ್ರೇವ್‌ಹಾರ್ಟ್ಸ್ ತಂಡವು ದೆಹಲಿ ರೆಡ್ಸ್ ತಂಡವನ್ನು 38-28 ಅಂತರದಿಂದ ಮಣಿಸಿತು. ಮಹಿಳಾ ವಿಭಾಗದಲ್ಲಿ ಚೆನ್ನೈ ಬುಲ್ಸ್ ಮತ್ತು ಮುಂಬೈ ಡ್ರೀಮರ್ಸ್ ತಂಡಗಳ ನಡುವಿನ ಪಂದ್ಯ 26-26 ಅಂಕಗಳ ಸಮಬಲದಲ್ಲಿ ಅಂತ್ಯಗೊಂಡಿತು.



## ಪಾಕ್ ವಿರುದ್ಧ ದಕ್ಷಿಣ ಆಫ್ರಿಕಾಗೆ ಭರ್ಜರಿ ಗೆಲುವು

• **ಬರ್ಮಿಂಗ್‌ಹ್ಯಾಮ್:** ಮಹಿಳೆಯರ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಪಾಕಿಸ್ತಾನ ಸತತ ಎರಡನೇ ಸೋಲು ಕಂಡಿದ್ದು ದ.ಆಫ್ರಿಕಾ ಗೆಲುವು ಸಾಧಿಸಿದೆ.

ಫಾತಿಮಾ ಸನಾ ಅವರ ಉತ್ತಮ ಬ್ಯಾಟಿಂಗ್ ಹೊರತಾಗ್ಯೂ ಮಿಂಚಿರುವ ದ.ಆಫ್ರಿಕಾ ಮಹಿಳೆಯರ ತಂಡವು ಗೆಲುವಿನ ನಗೆ ಬೀರಿತು. ಬುಧವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 126 ರನ್ ಗಳಿಸಿತು. ತಂಡದ ಪರ ಫಾತಿಮಾ ಸನಾ 55 ರನ್ ಗಳಿಸಿದರು. ಆಫ್ರಿಕಾ ಪರ ಅನುಭವಿ ಮಾರಿಯಾನ್ ಕಾಪ್ 3 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ದ.ಆಫ್ರಿಕಾ 16.5 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 127 ರನ್ ಗಳಿಸಿತು. ಅನ್ನೇರಿ ಡೆರ್ಕ್ಸೆನ್ 52, ನಾದಿನ್ ಡಿ ಕ್ಲರ್ಕ್ 37 ರನ್ ಗಳಿಸಿದರು. ಪಾಕಿಸ್ತಾನ ಪರ ನಾಯಕಿ ಫಾತಿಮಾ ಸನಾ 16 ರನ್‌ಗೆ 3 ವಿಕೆಟ್ ಕಿತ್ತರು. ಪವರ್‌ಪ್ಲೇನಲ್ಲೇ ಪಾಕಿಸ್ತಾನ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿಕೊಂಡಿತು. ಫಾತಿಮಾ ಉತ್ತಮ ಬ್ಯಾಟಿಂಗ್ ಮಾಡಿ ತಂಡದ ಮೊತ್ತವನ್ನು ಹಿಗ್ಗಿಸಿದರು. ಮಧ್ಯಮ ಓವರ್‌ಗಳಲ್ಲಿ 51 ರನ್ ಗಳಿಸಿದ ಪಾಕ್, ಡೆತ್ ಓವರ್‌ಗಳಲ್ಲಿ 46 ರನ್ ಗಳಿಸಿತು. ಅತ್ತ ದ.ಆಫ್ರಿಕಾ ಪವರ್‌ಪ್ಲೇನಲ್ಲಿ 48 ರನ್ ಗಳಿಸಿ ಸರಳ ಗೆಲುವಿನತ್ತ ಸಾಗಿತ್ತು. ಆದರೆ ಮಧ್ಯಮ ಓವರ್‌ಗಳಲ್ಲಿ ಫಾತಿಮಾ ಬೌಲಿಂಗ್‌ನಲ್ಲಿ ಮಿಂಚಿದರು. ಅಲ್ಲಿ ಆಫ್ರಿಕಾ 5 ವಿಕೆಟ್ ಕಳೆದುಕೊಂಡು 76 ರನ್ ಗಳಿಸಿತ್ತು. ಡೆತ್ ಓವರ್‌ನಲ್ಲಿ ಬೇಕಿದ್ದ 3 ರನ್ ಗಳಿಸಲು ಮತ್ತೆ 2 ವಿಕೆಟ್ ಕಳೆದುಕೊಂಡಿತು. ಪಂದ್ಯದಲ್ಲಿ 17 ವಿಕೆಟ್ ಬಿದ್ದವು. ಫಾತಿಮಾ ಸನಾ 3 ವಿಕೆಟ್ ಪಡೆದಿದ್ದಲ್ಲದೆ 55★ ರನ್ ಗಳಿಸಿದರು.



ICC WOMEN'S T20 WORLD CUP ENGLAND & WALES 2026

**ಸಂಕ್ಷಿಪ್ತ ಸ್ಕೋರ್**


ಪಾಕಿಸ್ತಾನ 20 ಓವರ್‌ಗಳಲ್ಲಿ 126/9: ಫಾತಿಮಾ 55★, ಹಸ್ಸನ್ 23; ಕಾಪ್ 23/3

ದ.ಆಫ್ರಿಕಾ 16.5 ಓವರ್‌ಗಳಲ್ಲಿ 127/8: ಡೆರ್ಕ್ಸೆನ್ 52, ಕ್ಲರ್ಕ್ 37; ಫಾತಿಮಾ 16/3

**ಇಂದು ಐರ್ಲೆಂಡ್-ನ್ಯೂಜಿಲೆಂಡ್ ಪಂದ್ಯ:** ಸೋಲಿನೊಂದಿಗೆ ಆರಂಭ ಮಾಡಿರುವ ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ತಂಡವು ಶುಕ್ರವಾರ ತಡರಾತ್ರಿ ನಡೆಯಲಿರುವ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಎದುರಿಸಲಿದೆ. ಕೆರ್, ಸೂಜಿ ಸೇರಿದಂತೆ ಪ್ರಮುಖ ಆಟಗಾರ್ತಿಯರ ಬಳಗವನ್ನು ಹೊಂದಿರುವ ನ್ಯೂಜಿಲೆಂಡ್ ಇನ್ನೂ ಪಂದ್ಯಾವಳಿಯಲ್ಲಿ ಮೊದಲ ಗೆಲುವು ದಾಖಲಿಸಬೇಕಿದೆ. ಸೌತಾಂಪ್ಟನ್‌ನಲ್ಲಿ ನಡೆಯಲಿರುವ ಈ ಪಂದ್ಯವು ರಾತ್ರಿ 11ಕ್ಕೆ ಶುರುವಾಗಲಿದೆ.

## ಪದಬಂಧ

» ರಾಜಾ ಸಂಗಮೇಶ ಹಿರೇಮಠ



**6019**

**6018 ಉತ್ತರ**

ಎಡದಿಂದ ಬಲಕ್ಕೆ:
1.ಸುದ್ದಿಗಾರ 3.ಗಿಂಧರ
5.ಕಡಗ 6.ಮನ
8.ತಂತಿ 9.ರಥ 12.ಕುಜ
14.ದಟ್ಟಣೆ 15.ಶಿಲಾನ್ಯಾಸ
16.ಚುಡಾಯಿಸು

ಮೇಲಿನಿಂದ ಕೆಳಕ್ಕೆ :
1.ಸುದರ್ಶನ 2.ದಣಿಕೆ
3.ಗಿರಗಿಟ್ಟೆ 4.ರಂಯುಪತಿ
7.ಮನ್ನಥ 8.ತಂಬಾಕು
9.ರವಿಕಿರಿ 10.ಮಂದಹಾಸ
11.ಹಣೆಬರಹ
13.ಜಮಾಯಿಸು

ಎಡದಿಂದ ಬಲಕ್ಕೆ
1.ಓದಲು ಬರೆಯಲು ಬಾರದವನು (4)
3.ಕಾನೂನುಬದ್ಧವಾಗಿ ಮಾನ್ಯತೆ ಪಡೆದದ್ದು (4)
5.ಪಾಶಿಲಾಕೆ-ವಿಮರ್ಶೆಯ ಸಮಾನಪದ (4)
6.ಸೂರ್ಯನ ಮಗನಾಗಿ ಕರ್ಣ (3)
8.ಸಸಿ ನೆಡುವ ಮಣ್ಣಿನ ಪಾತ್ರೆಯದು (2)
9.ಬೆಳ್ಳನೆಯ ಹಲ್ಲು (2)
11.ಪಾಟದ ಮೇಲೆ ಬರೆದ ಮುದ್ರೆಕಲ್ಲು (3)
13.ಬಂಗಾಳ ವಿಭಜನೆಯ ವಿರುದ್ಧವಾದ ಹೋರಾಟ (4)
15.ಅರಸನಿಗೆ ಕಡೆಯಲ್ಲಿ ಸಿಕ್ಕ ಬಳುವಳಿ (4)
16.ಅಕ್ಷರದ ಮೇಲ್ಭಾಗದ ಸಗ್ಗಗೆರೆ (4)

ಮೇಲಿನಿಂದ ಕೆಳಕ್ಕೆ
1.ಹಕ್ಕು-ಅಧಿಕಾರ ಕಿತ್ತಿಯುದು (4)
2.ಹೂವಿನ ಧೂಳು ತಲೆಕೆಳಗಾಗಿ ಬಿದ್ದಿದೆ (3)
3.ಕವಿ ರನ್ನನಿಗೆ ಆಶ್ರಯ ನೀಡಿದ ಮಹಿಳೆ (4)
4.ಗಿರೀಶ್ ಕಾರ್ನಾಡರು ಬರೆದ ನಾಟಕ (4)
7.ಜೇನು ವಿಜಯಕ ಮಾಡಿ ಗೆಲುವು ಸಾಧಿಸಿದವನು (3)
8.ದಿಕ್ಪಾಲಯನಿಗೆಯೂ ಬಳಸುವ ಶಬ್ದವು (3)
9.ಕಡೆಗೋಲಿನಿಂದ ಕಡೆದ ಮಜ್ಜಿಗೆ (4)
10.ಕಾಮಯ್ಯಾಗಳ ಆಧಾರವಾಗಿ ಸಿಂಹ (4)
12.ಪಟ್ಟು ಹಿಡಿದು ರಾಜ್ಯಾಭಿಷೇಕ ಮಾಡುವಿಕೆ (4)
14.ಕುಂಡಾ-ಕಳವ ಲಕ್ಷಣಗಳಿರುವ ಶಾಸ್ತ್ರ (3)

# ಸಿನಿ ದಿಗಂತ

## ಜುಲೈ 10ಕ್ಕೆ ಬಾಯ್ಸ್ ನೆವರ್ ಕಾಂಪ್ರಮೈಸ್



ರಾಜಣ್ಣನ ಮಗ ಖ್ಯಾತಿಯ ಹರೀಶ್ ಜಲಗೆರೆ ಅವರ ಪ್ರಥಮ ನಿರ್ದೇಶನದ ಚಿತ್ರ ಬಾಯ್ಸ್ ನೆವರ್ ಕಾಂಪ್ರಮೈಸ್. ಕಳೆದ ವಾರವಷ್ಟೇ ಟೀಸರ್ ಮೂಲಕ ಸದ್ದು ಮಾಡಿದ್ದ ಈ ಚಿತ್ರತಂಡ ಇದೀಗ 32 ಸೆಕೆಂಡ್ ಅವಧಿಯ ಬಾಯ್ಸ್ ಆಂಥೆಮ್ ಪ್ರೊಮೋ ರಿಲೀಸ್ ಮಾಡಿದೆ. ಹರೀಶ್ ಜಲಗೆರೆ ಅವರ ಹಿಂದಿನ ಎರಡೂ ಚಿತ್ರಗಳನ್ನು ನಿರ್ದೇಶಿಸಿದ್ದ ಕೋಲಾರ ಸೀನು ಅವರು ಹರೀಶ್ ಜಲಗೆರೆ ಅವರ ನಿರ್ದೇಶನಕ್ಕೆ ಸಾಥ್ ನೀಡಿದ್ದಾರೆ. ಹಾರರ್ ಕಾಮಿಡಿ ಕಥಾಹಂದರ ಒಳಗೊಂಡ ಈ ಚಿತ್ರದ ಟೀಸರ್ ಈಗಾಗಲೇ ಎಲ್ಲಾ ಕಡೆ ಓಡಾಡುತ್ತಿದ್ದು ಕ್ರೇಜ್ ಸೃಷ್ಟಿಸಿದೆ.



ಬಾಯ್ಸ್ ನೆವರ್ ಕಾಂಪ್ರಮೈಸ್ ಚಿತ್ರದಲ್ಲಿ ವಿಶೇಷವಾಗಿ ಸಾಮ್ರಾಟ್, ನಕ್ಷತ್ರ, ಸುಸ್ಮಿತ್ ಕಾಟಿ, ಸೀತಾರಾಮ, ಮಂಡ್ಯಸಿದ್ದು, ರಾಜೀವ್ ರೆಡ್ಡಿ, ಉಮೇಶ್ ಕಿನ್ನಾಳ, ಗಜೇಂದ್ರ, ಹೇಮಂತ್‌ಗೌಡ, ರಾಜು ಜೋಕ್ ಹೀಗೆ ಬಹುತೇಕ ಹೊಸ ಮುಖಗಳೇ ಬಣ್ಣ ಹಚ್ಚಿದ್ದಾರೆ. ಮಾರಿಗೋಲ್ಡ್ ಸ್ಟುಡಿಯೋಸ್ ಮೂಲಕ ಉಪ್ಪಾರ ನಾಗರಾಜರಾವ್ ಜಗದಾಳೆ ಅವರ ನಿರ್ಮಾಣದ ಈ ಚಿತ್ರಕ್ಕೆ ಲೋಕಿ ತವಸ್ಯ ಅವರ ಸಂಗೀತ ಸಂಯೋಜನೆ, ಎಂ.ಎಸ್. ತ್ಯಾಗರಾಜ್ ಅವರ ಹಿನ್ನೆಲೆ ಸಂಗೀತ, ಪ್ರಮೋದ್ ಭಾರತೀಯ ಅವರ ಛಾಯಾಗ್ರಹಣ, ಕಾರ್ತಿಕ್ ಈಶ್ವರಾಚಾರಿ ಅವರ ಸಂಕಲನವಿದೆ.

ನಿರ್ದೇಶಕ ಹರೀಶ್ ಜಲಗೆರೆ ಮಾತನಾಡುತ್ತ ಹಾರರ್ ಕಾಮಿಡಿ ಜಾನರ್ ಜತೆಗೊಂದು ಉತ್ತಮ ಸಂದೇಶವಿರೋ ಚಿತ್ರವಿದು. ಒಂದಷ್ಟು ಹುಡುಗರು ಶರ್ಟ್ ತುಂಡಾಟ ಮಾಡಲು ಹೋಗಿ ದೆವ್ವದ ಜತೆ ಹೇಗೆ ಕನೆಕ್ಟ್ ಆಗ್ತಾರೆ ಎಂದು ಈ ಚಿತ್ರದಲ್ಲಿ ತೋರಿಸಿದ್ದೇವೆ. ಇದೇ ಮೊದಲಬಾರಿಗೆ ನಿರ್ದೇಶನ ಮಾಡಿದ್ದೇನೆ. ನನಗೆ ನಿರ್ದೇಶನದಲ್ಲಿ ಸ್ನೇಹಿತ ಕೋಲಾರ ಸೀನು ಅವರು ಸಹಕಾರ ನೀಡಿದ್ದಾರೆ. ನಮ್ಮ ಚಿತ್ರ ಜುಲೈ 10ರಂದು ತೆರೆಗೆ ಬರಲಿದೆ ಎಂದು ಹೇಳಿದರು.


**ಹುಡುಗರಲ್ಲೂ ಕೆಲವು ಬೇಡಿಕೆಗಳಿರುತ್ತವೆ. ಅದರಲ್ಲಿ ಕೆಲವರು ಕಾಂಪ್ರಮೈಸ್ ಆದರೆ, ಕೆಲವರು ಆಗಲ್ಲ, ಆಗದಿದ್ದರೆ ಏನಾಗುತ್ತದೆ ಎಂಬುದನ್ನು ಹಾರರ್ ಎಲಿಮೆಂಟ್ ಜತೆ ಕಾಮಿಡಿಯಾಗಿ ಹೇಳಿರುವ ಚಿತ್ರವಿದು,**

ಹುಡುಗರಲ್ಲೂ ಕೆಲವು ಬೇಡಿಕೆಗಳಿರುತ್ತವೆ. ಅದರಲ್ಲಿ ಕೆಲವರು ಕಾಂಪ್ರಮೈಸ್ ಆದರೆ, ಕೆಲವರು ಆಗಲ್ಲ, ಆಗದಿದ್ದರೆ ಏನಾಗುತ್ತದೆ ಎಂಬುದನ್ನು ಹಾರರ್ ಎಲಿಮೆಂಟ್ ಜತೆ ಕಾಮಿಡಿಯಾಗಿ ಹೇಳಿರುವ ಚಿತ್ರವಿದು.

ಲೋಕಿ ತವಸ್ಯ ಮಾತನಾಡಿ ಹಾಡುಗಳು ಇಷ್ಟು ಚೆನ್ನಾಗಿ ಬರಲು ನಿರ್ದೇಶಕರ ಎಫರ್ಟ್ ಕಾರಣ. ಮ್ಯೂಸಿಕ್‌ಗೆ ತಕ್ಕಂತೆ ಮೇಕಿಂಗ್ ಮಾಡಿದ್ದಾರೆ. ಆಂಟನಿ ದಾಸನ್, ಐಶ್ವರ್ಯ ರಂಗರಾಜನ್ ಹಾಡಿರುವ ಸಾಂಗ್ ಸದ್ಯದಲ್ಲೇ ರಿಲೀಸಾಗಲಿದೆ ಎಂದರು. ನಟ ರಾಜೀವ್ ರೆಡ್ಡಿ ಅವರು ಈ ಚಿತ್ರದಲ್ಲಿ ಪೊಲೀಸ್ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಮಾಡೆಲಿಂಗ್ ಜತೆಗೆ ಚಿಕ್ಕ ಪುಟ್ಟ ಪಾತ್ರಗಳನ್ನು ಮಾಡಿಕೊಂಡಿದ್ದ ನಟಿ ನಕ್ಷತ್ರ ಅವರು ಬಾಯ್ಸ್ ನೆವರ್ ಕಾಂಪ್ರಮೈಸ್ ಚಿತ್ರದಲ್ಲಿ ನಾಯಕಿಯ ಪಾತ್ರ ಮಾಡಿದ್ದಾರೆ.

## ಚಿಕ್ಕಣ್ಣನ ಹುಟ್ಟುಹಬ್ಬಕ್ಕೆ ಲಕ್ಷ್ಮೀಪುತ್ರನ ಮೊದಲಹಾಡು

ನಿರ್ದೇಶಕ, ನಿರ್ಮಾಪಕ ಎ.ಪಿ.ಅರ್ಜುನ್ ಹಾಗೂ ನ್ಯಾಚುರಲ್ ಸ್ಟಾರ್ ಚಿಕ್ಕಣ್ಣ ಅವರ ಕಾಂಬಿನೇಶನ್‌ನಲ್ಲಿ ಮೂಡಿಬರುತ್ತಿರುವ ಬಹುನಿರೀಕ್ಷಿತ ಲಕ್ಷ್ಮೀಪುತ್ರ ಚಿತ್ರದ ಮತ್ತೊಂದು ಅಪ್‌ಡೇಟ್ ಇದೀಗ ಹೊರಬಂದಿದೆ. ಇದೇ ತಿಂಗಳ 22ರಂದು ನಾಯಕನಟ ಚಿಕ್ಕಣ್ಣ ಅವರ ಹುಟ್ಟುಹಬ್ಬ, ಈ ಸಂದರ್ಭದಲ್ಲಿ ಈ ಚಿತ್ರದ ಮೊದಲ ಹಾಡು ಬಿಡುಗಡೆಯಾಗಲಿದೆ. ಈಗಾಗಲೇ ಶೂಟಿಂಗ್ ಮುಗಿಸಿಕೊಂಡು ಪೋಸ್ಟ್ ಪ್ರೊಡಕ್ಷನ್‌ನಲ್ಲಿ ತೊಡಗಿಕೊಂಡಿರುವ ಚಿತ್ರತಂಡ ತಮ್ಮ ಚಿತ್ರದ ನಾಯಕನ ಹುಟ್ಟುಹಬ್ಬದ ಕೊಡುಗೆಯಾಗಿ ಲಕ್ಷ್ಮೀಪುತ್ರ ಚಿತ್ರದ ಪ್ರಥಮ ಸಿಂಗಲ್‌ನ್ನು ಬಿಡುಗಡೆ ಮಾಡುತ್ತಿದೆ. ಈ ಕುರಿತು ಮಾಹಿತಿ ಹಂಚಿಕೊಂಡಿರುವ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಇಸ್ಲೇಲೆ ಇಸ್ಲೇಲೆ ಎಂಬ ಹಾಡನ್ನು ಚಿಕ್ಕಣ್ಣ ಅವರ ಬರ್ತ್ ಡೇ ಕೊಡುಗೆಯಾಗಿ ಜೂನ್ 22ರಂದು ಬಿಡುಗಡೆ ಮಾಡುತ್ತಿರುವುದಾಗಿ ಹೇಳಿದ್ದಾರೆ, ಎ.ಪಿ. ಅರ್ಜುನ್ ಅವರೇ ಕಥೆ ಬರೆದು ತಮ್ಮದೇ ಎಪಿ ಅರ್ಜುನ್ ಫಿಲ್ಮ್ ಬ್ಯಾನರ್ ಮೂಲಕ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಫ್ಯಾಮಿಲಿ ಪ್ರೇಕ್ಷಕರನ್ನು ಮನದಲ್ಲಿಟ್ಟುಕೊಂಡು 'ಲಕ್ಷ್ಮೀ ಪುತ್ರ' ಚಿತ್ರದ ಕಥೆಯನ್ನು ಹೆಣೆಯಲಾಗಿದೆ. ವಿಶೇಷವಾಗಿ ಲಕ್ಷ್ಮೀಪುತ್ರ





ಚಿತ್ರದ ಕ್ಲೈಮ್ಯಾಕ್ಸ್ ಭಾಗದ ಚಿತ್ರೀಕರಣವನ್ನು ಕಾಶಿಯ ಮಣಿಕರ್ಣಿಕಾ ಘಾಟ್, ಗಂಗಾನದಿ ತೀರ, ಬನಾರಸ್, ಕಾಶಿಯಂಥ ಪ್ರಮುಖ ಸ್ಥಳಗಳಲ್ಲಿ ನಡೆಸಲಾಗಿದೆ.

**ಹಾಡಿನ ಬಿಡುಗಡೆ ಕುರಿತು ಮಾಹಿತಿ ಹಂಚಿಕೊಂಡಿರುವ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಇಸ್ಲೇಲೆ ಇಸ್ಲೇಲೆ ಎಂಬ ಹಾಡನ್ನು ನಾಯಕನಟ ಚಿಕ್ಕಣ್ಣ ಅವರ ಬರ್ತ್ ಡೇ ಕೊಡುಗೆಯಾಗಿ ಜೂನ್ 22ರಂದು ಬಿಡುಗಡೆ ಮಾಡುತ್ತಿರುವುದಾಗಿ ಹೇಳಿದ್ದಾರೆ, ಎ.ಪಿ. ಅರ್ಜುನ್ ಅವರೇ ಕಥೆ ಬರೆದು ತಮ್ಮದೇ ಎಪಿ ಅರ್ಜುನ್ ಫಿಲ್ಮ್ ಬ್ಯಾನರ್ ಮೂಲಕ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.**

ವಿಜಯ್‌ಸ್ವಾಮಿ ಅವರು ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದಲ್ಲಿ ಚಿಕ್ಕಣ್ಣ ಅವರ ಜೊತೆ ನಾಯಕಿಯಾಗಿ ನವನಟಿ ವಂದಿತಾ ಅವರು ನಟಿಸಿದ್ದಾರೆ. ತಾರಾ, ಕುರಿ ಪ್ರತಾಪ್, ಧರ್ಮಣ್ಣ ಸೇರಿದಂತೆ ದೊಡ್ಡ ತಾರಾಗಣವೇ ಈ ಚಿತ್ರದಲ್ಲಿದೆ. ಅರ್ಜುನ್ ಜನ್ಯ ಅವರ ಸಂಗೀತ ಸಂಯೋಜನೆ, ಗಿರೀಶ್ ಆರ್.ಗೌಡ ಅವರ ಕ್ಯಾಮೆರಾ ಈ ಚಿತ್ರಕ್ಕಿದೆ. ಎ.ಪಿ.ಅರ್ಜುನ್ ಅವರೇ ಚಿತ್ರದ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಆ್ಯಕ್ಷನ್ ಸೀಕ್ವೆನ್ಸ್‌ಗಳಿಗೆ ಮಾಸ್ ಮಾದ ಅವರ ಸಾಹಸ ನಿರ್ದೇಶನವಿದೆ.



## ಬಲರಾಮನ ದಿನಗಳಲ್ಲಿ ರ‍್ಯಾಪ್ ಸಾಂಗ್

ಆ ದಿನಗಳು ಖ್ಯಾತಿಯ ಕೆ.ಎಂ. ಚೈತನ್ಯ ಅವರ ನಿರ್ದೇಶನದ ಬಹು ನಿರೀಕ್ಷಿತ ಚಿತ್ರ ಬಲರಾಮನ ದಿನಗಳು ಇದೇ ತಿಂಗಳ 26ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಈಗಾಗಲೇ ಚಿತ್ರದ 3 ಹಾಡುಗಳು ಬಿಡುಗಡೆಯಾಗಿದ್ದು ವೈರಲ್ ಆಗುತ್ತಿವೆ. ಇತ್ತೀಚೆಗೆ ಆಲ್ ಓಕೆ ಅಲೋಕ್ ಸಾಹಿತ್ಯ ಬರೆದು ತಾನೇ ಹಾಡಿರುವ ಯಾರಿಲ್ಲಾ ಯಾರಿಲ್ಲಾ ಎಂಬ ರ‍್ಯಾಪ್ ಸಾಂಗ್ ಬಿಡುಗಡೆ ಕಾರ್ಯಕ್ರಮ ನಡೆಯಿತು. ವಿನೋದ್ ಪ್ರಭಾಕರ್ ನಾಯಕನಾಗಿ ನಟಿಸಿರುವ ಈ ಚಿತ್ರ ಆ ದಿನಗಳು ಸಿನಿಮಾದ ಮತ್ತೊಂದು ಅಧ್ಯಾಯ ಎನ್ನಬಹುದು.



ಈ ವೇಳೆ ನಾಯಕ ನಟ ವಿನೋದ್ ಪ್ರಭಾಕರ್ ಮಾತನಾಡುತ್ತ, ನಾನಿಲ್ಲಿ ನಿಂತಿದೀನಿ ಅಂದ್ರೆ ಅದರ ಹಿಂದೆ ದೊಡ್ಡ ಶ್ರಮವಿದೆ. ಇದಕ್ಕೆ ನಮ್ಮ ತಂದೆ ಟೈಗರ್ ಪ್ರಭಾಕರ್ ಅವರೇ ಕಾರಣ. ಅವರು ಬಿಟ್ಟು ಹೋಗಿದ್ದನ್ನು ನಾನು ಮಾಡುತ್ತಿದ್ದೇನೆ. ಬಲರಾಮ ಏನಿದೆಯೋ ಅದು ಟೈಗರ್ ಪ್ರಭಾಕರ್ ಬಿಟ್ಟೋದ ಅಧ್ಯಾಯ. ಚಿತ್ರರಂಗದಲ್ಲಿ ಅವರ ಕನಸು ಬಹಳ ಇತ್ತು. ನಾನು ಚಿತ್ರರಂಗಕ್ಕೆ ಬಂದಾಗ ಸ್ವಲ್ಪ ಎಡವಿದೆ. ಎಲ್ಲೋ ಒಂದು ಕಡೆ ದಾರಿ ತಪ್ಪಿದ್ದೆ. ನಾನು ದಾರಿತಪ್ಪಿದ ಮಗ ಅಂತ ಒಂದು ಸಂದರ್ಭದಲ್ಲಿ ಹೇಳಿದ್ದೆ. ಮತ್ತೆ ಅದನ್ನು ಸರಿ ಮಾಡಿಕೊಂಡು ಬಂದಿದ್ದೇನೆ. ಈ ಚಿತ್ರದಲ್ಲಿ ಕಂಟೆಂಟೇ ಹೀರೋ, ನಾನು ಟೈಗರ್ ಪ್ರಭಾಕರ್ ಅವರ ಮುಂದುವರಿದ ಅಧ್ಯಾಯ ಅಂತ ಮತ್ತೊಮ್ಮೆ ಹೇಳ್ತೀನಿ. ನಾನು ಏನೇ ಪ್ರಶಸ್ತಿ ಗಳಿಸಿದರೂ ನನ್ನ ತಂದೆಗೆ ಅರ್ಪಿಸಿದ್ದೇನೆ. ಈ ಸಾಂಗ್ ತುಂಬಾ ಚೆನ್ನಾಗಿ ಬಂದಿದೆ. ಬಲರಾಮನಿಗೆ ಮತ್ತಷ್ಟು ಬಲ ಕೊಡುವ ಹಾಡಿದು. ಮಾದೇವ ನಂತರ ಸಾಕಷ್ಟು ಹೆಣ್ಣುಮಕ್ಕಳು ನನ್ನ ಫೋಟೋ ತೆಗೆಸಿಕೊಳ್ಳಲು ಬರ್ತಿದಾರೆ. ಮಾದೇವ ವಾರದ ನಂತರ ಪಿಕಪ್ ತಗೊಂಡಿತು. ಆದರೆ ಈ ಸಿನಿಮಾದ ಆರಂಭವೇ ಭರ್ಜರಿಯಾಗಿರುತ್ತೆ ಎಂದು ಹೇಳಿದರು.

ನಿರ್ಮಾಪಕ ಶ್ರೇಯಸ್ ಮಾತನಾಡುತ್ತಾ, ಅಲೋಕ್ ಮಧ್ಯರಾತ್ರಿ ನನಗೆ ಕಾಲ್ ಮಾಡಿ ಈ ಸಾಂಗ್ ಕುರಿತು ಹೇಳುತ್ತಾರೆ. ಐದೂವರೆಗೆ ಫೈನಲ್ ವರ್ಷನ್ ಬರುತ್ತೆ. ನಂತರ ಫೈನಲ್ ಮಾಡಿದೆ. ಜೂನ್ 26ಕ್ಕೆ ನಮ್ಮ ಸಿನಿಮಾ ತೆರೆಗೆ ಬರ್ತಿದೆ. ದಯವಿಟ್ಟು ಸಪೋರ್ಟ್ ಮಾಡಿ. ಇದು ಬೆಂಗಳೂರಲ್ಲಿ ನಡೆದ ಕಥೆ. ಮೊದಲು ಇಲ್ಲೇ ರಿಲೀಸ್ ಮಾಡುತ್ತೇವೆ. ನಂತರ ಬೇರೆ ಕಡೆ ಪ್ಲಾನ್ ಮಾಡುತ್ತೇವೆ ಎಂದು ಹೇಳಿದರು.

ನಿರ್ಮಾಪಕಿ ಪದ್ಮಾವತಿ ಜಯರಾಂ ಮಾತನಾಡುತ್ತಾ, ಈ ಹಾಡಿನ ಕುರಿತು ಮಾತಲ್ಲಿ ಹೇಳಿದರೆ ಸಾಲದು, ಮನಸಾರೆ ಹೇಳ್ತಿದೀನಿ. ಈ ಹಾಡನ್ನು ಅಲೋಕ್ ತುಂಬಾ ಚೆನ್ನಾಗಿ ಮಾಡಿದ್ದಾರೆ. ಯೂತ್‌ಗೆ ಇದು ತುಂಬಾ ಇಷ್ಟವಾಗುತ್ತದೆ ಎನ್ನುವ ಭರವಸೆ ಇದೆ. ಚಿತ್ರದ ಮೂರು ಹಾಡು ಒಂದು ತೂಕವಾದರೆ, ಈ ಹಾಡು ಮತ್ತೊಂದು ತೂಕ. ಚಿತ್ರಕ್ಕೆ ಎಲ್ಲರೂ ತುಂಬಾ ಎಫರ್ಟ್ ಹಾಕಿದ್ದಾರೆ. ಈ ಮೂಲಕ ಶ್ರೇಯಸ್ ಕನಸು ನನಸಾಗ್ತಿದೆ. ಬಿಡುಗಡೆಗೆ ಇನ್ನು ಕೇವಲ ಆರು ದಿನವಿದೆ, ಸ್ವಲ್ಪ ಭಯವೂ ಇದೆ ಎಂದು ಹೇಳಿದರು.







Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26